Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–19 | ಸಂಚಿಕೆ–12 | ಮಾರ್ಚ್ 17–23, 2025 | ಪುಟ 16 | ರೂ.10/–
Volume-19 | Issue-12 | March 17-23, 2025 | Pages:16 | Price: 10/-

ವಿಶ್ವ ಬಂಡವಾಳ ಹೂಡಿಕೆ ಸಮಾವೇಶ ಕಡಿಮೆ ಪ್ರಚಾರದ ಗೀಳೇ ಹೆಚ್ಚು





ಆರೋಗ್ಯಕರ ಕೆಲಸ, ಜೀವನ ಸಮತೋಲನ ಹಕ್ಕಿಗಾಗಿ ಹೋರಾಟಕ್ಕಿಳಿದ ಐ.ಟಿ.ಕಾರ್ಮಿಕರು



ಅಮೇರಿಕಾದ ತೆರಿಗೆ ಏರಿಕೆಗೆ ಮೋದಿಯವರ ಅಂಜುಬುರುಕು ಪ್ರತಿಕ್ರಿಯೆ

ಜನ ಚಳುವಳಿಗಳ ಬಜೆಟ್ ಅಧಿವೇಶನ: ಅರ್ಥಪೂರ್ಣ ಚರ್ಚೆ

ಬೆಂಗಳೂರು ಫಿಲ್ಮೋತ್ಸವ: ವಲಸಿಗರ ಧಾರುಣ ಸ್ಥಿತಿ ಕಾಡುವ ಚಿತ್ರಗಳು

ಮನೆ ಮನೆಯ ಮೇಲೂ ತೆರಿಗೆ ಎಂಬ ಪಿಶಾಚಿಯ ಆಕ್ರಮಣ–ಹೆಜ್ಜೆ ಹೆಜ್ಜೆಗೂ ಜನರ ಸೆಣಸಾಟ

ಭಾಗ 17

ಜಿ.ಎನ್. ನಾಗರಾಜ್

"ನಿಮ್ಮ ಮುದ್ದೆಯೊಳಗಿಂದ,
ರೊಟ್ಟಿಯೊಳಗಿಂದ
ಹಾಲು, ಮೊಸರಿನೊಳಗಿಂದ,
ಒಬ್ಬಟ್ಟು, ಕಡುಬುಗಳ ಒಳಗಿಂದ,
ಆಮ್ಲೆಟ್, ಬಿರ್ಯಾನಿಗಳ ಒಳಗಿಂದ
ಕೋಳಿ ಕುರಿ ಮಾಂಸದೊಳಗಿಂದ ಗರ್ಜಿಸುತ್ತಾ ಹೊರಬರುತ್ತಾನೆ,
ನಿಮ್ಮ ಅನ್ನಕೋಶವನ್ನೇ ತಿಂದು ತೇಗುತ್ತಾನೆ
ನೀವು ಅವಕಾಶ ಕೊಟ್ಟರೆ.
ನಿಮ್ಮ ಅಡಿಗೆಮನೆ, ಉಗ್ರಾಣದ ಮೇಲೂ ಧಾಳಿ ಮಾಡುತ್ತಾನೆ
ಎಲ್ಲೆಲ್ಲೂ ನಾನೆ ಎಂದು ಮೆರೆಯುವ ತೆರಿಗೆ ಎಂಬ ಪಿಶಾಚಿ.
ಆದರೊಬ್ಬ ಕೂಲಿಕಾರ ಒಂದಿಷ್ಟು ಖಾರ, ರೊಟ್ಟಿ ಜಗಿಯುತ್ತಿರುತ್ತಾನೆ ಸಪ್ಪೆ ಮುಖ ಹೊತ್ತು."

ಇದು ಬ್ರಿಟನ್‌ನ ಪಾರ್ಲಿಮೆಂಟ್, ಎಕ್ಸೈಸ್ ತೆರಿಗೆಯನ್ನು ಎಲ್ಲ ವಸ್ತುಗಳ ಮೇಲೂ ಹೆಚ್ಚಿಸುವ ಕಾಯಿದೆ ಅಂಗೀಕರಿಸುವುದರ ವಿರುದ್ಧ ಅಲ್ಲಿಯ ಕಾರ್ಮಿಕರು, ಜನ ಸಾಮಾನ್ಯರು, ವರ್ತಕರು ದೊಡ್ಡ ಸಂಘರ್ಷ ಸಾಗಿಸುತ್ತಿರುವ ಸಮಯದ ಹೋರಾಟದ ಹಾಡು.

1733 ರ ಆ ಸಂದರ್ಭದಲ್ಲಿ ಜನರ ನಡುವೆ ಅವರುಗಳೇ ಬರೆದ ನೂರಾರು ಕರಪತ್ರಗಳು ಹರಡಿದ್ದವು. ನೆನಪಿಡಿ, ಆಗ ಯಾವ ಕಾರ್ಮಿಕ ಸಂಘಗಳೂ, ಇತರ ಸಂಘಟನೆಗಳೂ ಇರದ ಕಾಲ. ಯಾವುದೇ ರಾಜಕೀಯ ಪಕ್ಷಗಳೂ ಕೂಡಾ ಆಗಷ್ಟೇ ಮೊಳಕೆಯೊಡೆಯುತ್ತಿದ್ದ ಕಾಲ.

ಪತ್ರಿಕೆಗಳೂ ಕೂಡಾ ಆಗಷ್ಟೇ ಕಣ್ಣು ಬಿಡುತ್ತಿದ್ದ ಕಾಲ. ಆಗ ಕ್ರಾಫ್ಟ್‌ಮನ್ ಎಂಬ ಪತ್ರಿಕೆಯಲ್ಲಿ ಜನರ ಬದುಕನ್ನು ಸುಡು ಸುಡುವ ತೆರಿಗೆಯ ಬಗ್ಗೆ ಖಾರವಾದ ಲೇಖನಗಳು ದುಡಿಯುವ ಜನರ ಸಿಟ್ಟನ್ನು ಹೊರಹಾಕುತ್ತಿತ್ತು.

"ತೆರಿಗೆ ಅಧಿಕಾರಿಗಳ ಸೈನ್ಯವನ್ನು ದೇಶವನ್ನು ಆಕ್ರಮಣ ಮಾಡಲು ನಿಯೋಜಿಸಿದಂತೆ ಆಗುತ್ತಿದೆ. ಕಿರುಕುಳ ನೀಡುವ , ಶಿಕ್ಷೆ ವಿಧಿಸುವ ನಿಯಮಗಳಿಂದ ತುಂಬಿ ತುಳುಕುವ ಪಾರ್ಲಿಮೆಂಟ್ ಕಾಯಿದೆಗಳು ಇಂಗ್ಲಿಷ್ ಜನರನ್ನು ಗುಲಾಮರನ್ನಾಗಿಸಿವೆ."

ಇಂತಹ ಬರಹಗಳು ಅಂದಿನ ಆಳುವವರ ಕಣ್ಣು ಕೆಂಪಗಾಗಿಸುತ್ತಿತ್ತು. ಇತರ ಹಲವು ಪತ್ರಿಕೆಗಳೂ ಈ ಹೋರಾಟದ ಭಾಗವಾಗಿದ್ದವು.


ಎಕ್ಸೈಸ್ ತೆರಿಗೆ ಎಂಬ ಪಿಶಾಚಿಯ ಆಕ್ರಮಣದಿಂದ ನಿಮ್ಮ ಬದುಕನ್ನು ರಕ್ಷಿಸಿಕೊಳ್ಳಿ ಎಂದು ಜನರಿಗೆ ಕರೆ ನೀಡುತ್ತಿದ್ದವು. ನಿಯಮಾವಳಿಗಳಲ್ಲಿ ಪಾರ್ಲಿಮೆಂಟ್‌ಗೆ ಮನವಿ ಸಲ್ಲಿಸುವ ಒಂದು ಅವಕಾಶ ಇದೆ. (ನಮ್ಮ ಲೋಕಸಭೆ ಹಾಗೂ ವಿಧಾನ ಸಭೆಗಳಿಗೂ ಹೀಗೆ ಪ್ರಜೆಗಳು ಯಾರಾದರೂ ಮನವಿ ಸಲ್ಲಿಸುವ ಅವಕಾಶ ಇದೆ) ಈ ನಿಯಮವನ್ನು ಬಳಸಿಕೊಂಡು ಈ ತೆರಿಗೆ ವಿರುದ್ಧ ಸಾವಿರಾರು ಅರ್ಜಿಗಳು ಜಡಿಮಳೆಯಂತೆ ಪಾರ್ಲಿಮೆಂಟ್ ಮುಂದೆ ಸುರಿದವು.

ಯಾವುದೋ ಒಂದು ತೆರಿಗೆಯ ಏರಿಕೆಯ ಪ್ರಶ್ನೆಯಾಗಿರಲಿಲ್ಲ ಇದು. ಒಂದೊಂದೇ ವಸ್ತುವಿನ ಮೇಲೆ ತೆರಿಗೆ ಹಾಕುವ ಹಲವು ಕಾನೂನುಗಳನ್ನು ತರುವ ಬದಲು ಬಳಕೆಯ ಎಲ್ಲ ವಸ್ತುಗಳ ಮೇಲೆ ಸಾರ್ವತ್ರಿಕವಾಗಿ ತೆರಿಗೆ ಹೇರುವ ಮಸೂದೆ ಆಳುವವರ ದುಷ್ಟ ಯೋಜನೆಯ ಭಾಗವಾಗಿತ್ತು.

ಆಗ ಬ್ರಿಟನ್‌ನಲ್ಲಿ ಭೂಮಿಯ ಒಡೆತನ ಕೇಂದ್ರೀಕರಿಸಿ ತೆರಿಗೆ ವಿಧಿಸಬೇಕು ಎಂದು ಒಂದು ಗುಂಪು, ಜನ ಬಳಕೆಯ ವಸ್ತುಗಳ ಮೇಲೆ ತೆರಿಗೆಯೇ ಪ್ರಧಾನವಾಗಬೇಕು, ಅದಕ್ಕಾಗಿ ಸಾರ್ವತ್ರಿಕವಾಗಿ ಎಲ್ಲ ವಸ್ತುಗಳ ಮೇಲೆ ಎಕ್ಸೈಸ್ ತೆರಿಗೆ ಹಾಕುವ ಕಾನೂನು ತರಬೇಕು ಎಂದು ಮತ್ತೊಂದು ಗುಂಪು. ಭೂಮಾಲಕರು, ಬಂಡವಾಳಶಾಹಿ ಕೃಷಿಕರು ಎಕ್ಸೈಸ್ ಕಾನೂನಿನ ಪರ, ಅದರ ವಿರುದ್ಧವಾಗಿ ದುಡಿಯುವ ಜನರು, ವರ್ತಕರು, ಕೈಗಾರಿಕಾ ಉತ್ಪಾದಕರು. ಪ್ರಸಿದ್ಧ ವೈಜ್ಞಾನಿಕ ತತ್ವಶಾಸ್ತ್ರಜ್ಞ ಲಾಕ್ ಜನಬಳಕೆ ವಸ್ತುಗಳ ಮೇಲೆ ತೆರಿಗೆ ಹಾಕುವುದರ ವಿರುದ್ಧ.

ಈ ಸಂಘರ್ಷ ಬೆಳೆಯುತ್ತಾ ಸೈನಿಕರನ್ನೂ ಸೆಳೆಯಿತು. ಅವರು ಹೊಗೆಸೊಪ್ಪು ಮೊದಲಾದ ಅವರ ಅನಿವಾರ್ಯತೆಗಳ ಮೇಲೆ ತೆರಿಗೆ ಹಾಕುವುದರ ವಿರುದ್ಧ ತಮ್ಮ ಅತೃಪ್ತಿ ವ್ಯಕ್ತಪಡಿಸಿದರು. ಜನರು ಪಾರ್ಲಿಮೆಂಟ್‌ನ ಮೊಗಸಾಲೆಗೆ ನುಗ್ಗಿ ಎಕ್ಸೈಸ್ ಮಸೂದೆಯ ಪರವಾಗಿದ್ದವರನ್ನು ಖಂಡಿಸಿದರು. ಆಗ ಬ್ರಿಟನ್ ಅರ್ಥ ಸಚಿವರಾಗಿದ್ದವರು ಅವರ ಮೇಲಿನ ಧಾಳಿಯಿಂದ ಸ್ವಲ್ಪದರಲ್ಲಿ ಪಾರಾದರು.

ಕೊನೆಗೆ ಸರ್ಕಾರ ಈ ಮಸೂದೆಯನ್ನು



ಹಿಂತೆಗೆದುಕೊಂಡಿತು. ಆ ಸುದ್ದಿಯನ್ನು ಜನರು ಬೀದಿ ಬೀದಿಗಳಲ್ಲಿ ಸಂಭ್ರಮದಿಂದ ವಿಜಯೋತ್ಸವ ಆಚರಿಸಿದರು.

ಈ ಎಲ್ಲವೂ ಸಾಮಾನ್ಯ ಜನರು ತೆರಿಗೆಗಳ ಭಾರದಿಂದ ಎಷ್ಟೊಂದು ನರಳುತ್ತಿದ್ದರು ಎಂಬುದಕ್ಕೆ ಪುರಾವೆಗಳನ್ನು ಒದಗಿಸುತ್ತವೆ.

ಬ್ರಿಟನ್‌ನಲ್ಲಿ ಪಾರ್ಲಿಮೆಂಟ್ ಆರ್ಥಿಕ ಅಧಿಕಾರಗಳನ್ನು ವಶಕ್ಕೆ ತೆಗೆದುಕೊಂಡು ಬಜೆಟ್ ಮಂಡಿಸಲು ಆರಂಭಿಸಿ 35 ವರ್ಷಗಳು ಮಾತ್ರ ಆಗಿತ್ತು. ಅಂದಿನಿಂದ ರಾಜರುಗಳ ಬದಲಾಗಿ ಬಜೆಟ್ ಮೂಲಕ ಪಾರ್ಲಿಮೆಂಟ್ ತೆರಿಗೆ ವಿಧಿಸುವುದನ್ನು ಆರಂಭಿಸಿತ್ತು.

ರಾಜಪ್ರಭುತ್ವದಲ್ಲಿ ವಿವಿಧ ಪ್ರದೇಶಗಳ ನೋಬಲ್‌ಗಳು (ಪಾಳೆಯಗಾರರು) ಕಪ್ಪ ಕಾಣಿಕೆಯ ರೂಪದಲ್ಲಿ ತೆರುತ್ತಿದ್ದ ಭೂಕಂದಾಯ ಮತ್ತಿತರ ಸ್ಥಳೀಯ ತೆರಿಗೆಗಳ ಭಾಗ ಮುಖ್ಯ ಆಧಾರವಾಗಿತ್ತು. ಭೂಕಂದಾಯವನ್ನು ಅವರ ಗೇಣಿದಾರರು, ಅವರ ವಿಶಾಲ ಭೂಮಿಯ ಕೃಷಿಯ ಆದಾಯದ ಮೇಲೆ ಕಪ್ಪ ಕಾಣಿಕೆಗಳನ್ನು ತೆರುತ್ತಿದ್ದರು. ಅದರ ಜೊತೆಗೆ ಯುದ್ಧದ ಸಮಯದಲ್ಲಿ ಈ ನೋಬಲ್‌ಗಳು ತಾವು ಸ್ವತಃ ಒಂದು ಸೈನ್ಯ ತುಕಡಿಯ ನೇತಾರರಾಗಿ ಬಂದು ಭಾಗವಹಿಸಬೇಕಾಗಿತ್ತು. ಆ ಸೈನ್ಯದ ಉಸ್ತುವಾರಿ ಮಾತ್ರವಲ್ಲ, ಅದರ ಎಲ್ಲ ದೇಖರೇಖಿಯ ಹೊಣೆಯೂ ಈ ನೋಬಲ್‌ಗಳದೇ ಆಗಿತ್ತು. ಈ ಹೊಣೆಯ ಆಧಾರದಲ್ಲಿಯೇ ಅವರಿಗೆ ರಾಜ್ಯದ ವಿವಿಧ ಪ್ರದೇಶದ ಆಡಳಿತವನ್ನು ವಿಂಗಡಿಸಿ ಕೊಡಲಾಗುತ್ತಿತ್ತು.

ಎರಡು ಶತಮಾನಗಳ ಕಾಲದ ಸಾಗರ ಸಾಹಸಗಳು, ವಸಾಹತುಗಳು, ದೂರ ವಾಣಿಜ್ಯ, ಕೈಗಾರಿಕಾ ಉತ್ಪಾದನೆಗಳ ಹೆಚ್ಚಳ ಈ ಪರಿಸ್ಥಿತಿಯನ್ನು ಗಣನೀಯವಾಗಿ ಬದಲಾಯಿಸಿ ಬಿಟ್ಟಿತ್ತು. ಇದನ್ನು ಹಿಂದಿನ ಲೇಖನಗಳಲ್ಲಿ ವಿವರಿಸಲಾಗಿದೆ.

ಇದರ ಪರಿಣಾಮವಾಗಿ ಸರ್ಕಾರದ ಆದಾಯದಲ್ಲಿ ಬಂದರು ತೆರಿಗೆ ಹೆಚ್ಚು ಆದಾಯ ತರಲಾರಂಭವಾಗಿತ್ತು. ಬಂದರು ತೆರಿಗೆಯಲ್ಲಿ ಬಂದರುಗಳನ್ನು ಉಪಯೋಗಿಸುವ ಹಡಗುಗಳು ತೆರುವ ದರ ಅಥವಾ ಫೀಸ್ ಮಾತ್ರವೇ ಅಲ್ಲದೆ ರಫ್ತು ಮತ್ತು ಆಮದುಗಳ ಮೇಲಿನ ತೆರಿಗೆಯೂ ಸೇರಿತ್ತು. ರಾಜನ ದಂಡು ಮತ್ತು ಪಾರ್ಲಿಮೆಂಟ್ ದಳದ ನಡುವೆ ಅಂತರ್ಯುದ್ಧ ನಡೆದಾಗ ಪಾರ್ಲಿಮೆಂಟ್ ದಳದ ವಿಜಯಕ್ಕೆ ಇದು ಮುಖ್ಯ ಕಾರಣವಾಗಿತ್ತು. ರಾಜನ ನಿರಂಕುಶ ಆಡಳಿತಕ್ಕೆ ಅಂಕುಶ ಹಾಕಬೇಕೆಂದು ಬಯಸಿದ ಉದೀಯಮಾನ ಬಂಡವಾಳಶಾಹಿಗಳು ಪಾರ್ಲಿಮೆಂಟ್ ದಳಕ್ಕೆ ಬೆಂಬಲಿಸಿದರು. ಅವರೇ ಬಂದರುಗಳ ಮೇಲೆ ಹಿಡಿತ ಹೊಂದಿದ್ದರು. ನಗರಗಳ ಬೆಂಬಲ, ಬಂದರುಗಳ ಆದಾಯದ ಬೆಂಬಲದಿಂದ ಪಾರ್ಲಿಮೆಂಟ್ ದಳ ಗೆದ್ದು ರಾಜನನ್ನು ವಧಿಸಿತು.

ಆದರೆ ಪಾರ್ಲಿಮೆಂಟ್ ಪ್ರಧಾನವಾದ ಸಂದರ್ಭದಲ್ಲಿ ಹಿಂದಿನ ಆದಾಯದ ಮೂಲ ಹಾಗೂ ಸಂಗ್ರಹದ ವಿಧಾನ ಈಗ ಬದಲಾಗಲೇಬೇಕಾಯ್ತು. ಕಪ್ಪ ಕಾಣಿಕೆಗಳ ಪ್ರಶ್ನೆ ಇರಲಿಲ್ಲ. ರಾಜ್ಯದ ಸೈನ್ಯವನ್ನು ಪಾಳೆಯಗಾರರು ನೇಮಿಸಿಕೊಂಡು ಸಾಕುವ ಪ್ರಶ್ನೆಯೂ ಇರಲಿಲ್ಲ. ರಾಜ್ಯದ ಕೇಂದ್ರ ಸರ್ಕಾರವೇ ಖಾಯಂ ಸೈನ್ಯವನ್ನು ನೇಮಿಸಿಕೊಂಡು ನಿರ್ವಹಿಸಬೇಕಾಗಿತ್ತು. ಯುದ್ಧದ ತಂತ್ರಜ್ಞಾನ ಹಾಗೂ ವಿಧಾನಗಳೂ ಬದಲಾಗಿದ್ದವು.

ಬಜೆಟ್ ಮೂಲಕ ಹೊಸ ಆದಾಯದ ಮೂಲಗಳನ್ನು ಹುಡುಕಲಾರಂಭಿಸಿದರು. ಆಗಿನ ಅರ್ಥ ವ್ಯವಸ್ಥೆಯ ಮುಖ್ಯಸ್ಥರು ಬಂದರು ತೆರಿಗೆಗಳನ್ನು ಮುಂದುವರೆಸಿದರು. ಭೂಕಂದಾಯ ಸಂಗ್ರಹದ ಆಧಾರವನ್ನು ಪುನರ್ ವಿಮರ್ಶಿಸಿದರು. ವಿವಿಧ ವಸ್ತುಗಳ ಉತ್ಪಾದನೆ ಮತ್ತು ಬಳಕೆ ಹೆಚ್ಚುತ್ತಿದ್ದ ದಿನಗಳಲ್ಲಿ ಅವುಗಳ ಮೇಲೆ ತೆರಿಗೆ ವಿಧಿಸುವುದು ಅವರು ಕಂಡುಕೊಂಡ ವಿಧಾನ.

ಅಲ್ಲಿಯವರೆಗೆ ವಿದೇಶ ವ್ಯಾಪಾರದ ವಸ್ತುಗಳ ಮೇಲೆ ಇದ್ದಂತಹ ಸುಂಕಗಳನ್ನು ದೇಶದೊಳಗೇ ತಯಾರಾಗುತ್ತಿದ್ದ ವಸ್ತುಗಳ ಮೇಲೆ ವಿಧಿಸಲಾರಂಭಿಸಿದರು. ಈ ತೆರಿಗೆಗಳಿಗೆ ಬ್ರಿಟನ್‌ಗಿಂತಾ ಮೊದಲು ಬಂಡವಾಳಶಾಹಿ ಬೆಳವಣಿಗೆ ಕಂಡಿದ್ದ ಇಟಲಿಯ ಕೆಲ ನಗರಗಳು, ಹಾಲಂಡ್ (ಡಚ್) ದೇಶ ಇಂತಹ ತೆರಿಗೆಗಳನ್ನು ವಸೂಲಿ ಮಾಡಿದ ಉದಾಹರಣೆ ಇತ್ತು. ಬ್ರಿಟನ್‌ನಲ್ಲಿ ಹಾಲಂಡ್ ಮಾದರಿಯನ್ನು ಅನುಸರಿಸಿ ಹಾಕಿದ ಈ ರೀತಿಯ ತೆರಿಗೆಗಳಿಗೆ ಎಕ್ಸೈಸ್ ತೆರಿಗೆ ಎಂದು ಕರೆಯಲಾಯಿತು. ಅದನ್ನು ಬ್ರಿಟನ್‌ನಲ್ಲಿನ ರಾಜನ ವಿರುದ್ಧ ಅಂತರಿಕ ಯುದ್ಧಕ್ಕೆ ಹಣ ಒದಗಿಸಲು 1643 ರಲ್ಲಿ ತಾತ್ಕಾಲಿಕ ತೆರಿಗೆ ಎಂದು ಹಾಕಲಾರಂಭಿಸಿದರೂ ನಂತರ ಅವುಗಳನ್ನು ಖಾಯಂ ಆಗಿ ಮುಂದುವರೆಸಿದರು. ಹೀಗೆ ಮೊದಲು ಈ ತೆರಿಗೆ ವಿಧಿಸಿದ ಪಿಮ್ ಎಂಬ ಆಡಳಿತಾಧಿಕಾರಿಯನ್ನು "ಎಕ್ಸೈಸ್ ತೆರಿಗೆಯ ಪಿತ" ಎಂದು ಗುರುತಿಸಲಾಗಿದೆ. ಮುಖ್ಯವಾಗಿ ಬೀರ್ ನಂತಹ ಮದ್ಯ ಪಾನೀಯಗಳು, ಮಾಂಸ (ಬ್ರಿಟನ್‌ನಲ್ಲಿನ ಬೀರ್, ಮಾಂಸ ದಿನನಿತ್ಯದ ಆಹಾರಗಳಲ್ಲವೇ) ಉಪ್ಪು, ಹ್ಯಾಟ್‌ಗಳು, ಗೋಧಿಯಂತಹ ವಿವಿಧ ರೀತಿಯ ಹಿಟ್ಟುಗಳು, ಕೇಸರಿ, ರೇಷ್ಮೆ ಮೊದಲಾದ ಜನರು ವ್ಯಾಪಕವಾಗಿ ನಿತ್ಯ ಬಳಸುವ ವಸ್ತುಗಳ ಮೇಲೆ ಹಾಗೂ ಕೆಲ ವೈಭವದ ವಸ್ತುಗಳ ಮೇಲೆ ಈ ತೆರಿಗೆಗಳನ್ನು ಹಾಕಲಾಯಿತು.

ಈ ತೆರಿಗೆ ದೇಶಾದ್ಯಂತ ವ್ಯಾಪಾರವಾಗುವ ವಸ್ತುಗಳ ಮೇಲೆ ಹಾಕಿದ ಹೊಸ ರೀತಿಯ ತೆರಿಗೆ. ಆದ್ದರಿಂದ ಅದರ ವಸೂಲಾತಿಗೆ ಅಲ್ಲಿಯವರೆಗೆ ಇಲ್ಲದ, ಎಕ್ಸೈಸ್ ಕಮೀಷನರ್, ಉಪ ಎಕ್ಸೈಸ್ ಕಮೀಷನರ್‌ಗಳು ಎಂಬ ಹೊಸ ತೆರಿಗೆ ವಸೂಲಿ ಅಧಿಕಾರಿಗಳನ್ನು ಸೃಷ್ಟಿಸಲಾಯಿತು. ಹೀಗೆ ಹೊಸ ತೆರಿಗೆಯ ಜೊತೆ ಹೊಸ ಮಾದರಿ ಅಧಿಕಾರಶಾಹಿಯ ಸೃಷ್ಟಿಯೂ ಆಯಿತು. ಈ ಅಧಿಕಾರಿಗಳಿಗೆ ಅಂಗಡಿಗಳು, ವ್ಯಾಪಾರ ಮಾಡುವ ಸರಕುಗಳ ಗೋದಾಮುಗಳನ್ನು ಪ್ರವೇಶಿಸಿ ತನಿಖೆ ಮಾಡುವ, ತೆರಿಗೆ ನೀಡದ ವಸ್ತುಗಳನ್ನು ವಶ ಪಡಿಸಿಕೊಳ್ಳುವ (ಸೀಜ್ ಮಾಡುವ) ಅಧಿಕಾರ ನೀಡಲಾಯಿತು. ಹೀಗೆ ನಮ್ಮ ದೇಶದಲ್ಲಿಯೂ ಎಲ್ಲ ಇಲಾಖೆಗಳಲ್ಲಿಯೂ ಮೆರೆಯುವ ಕಮೀಷನರ್ ಎಂಬ ಹುದ್ದೆ ಸೃಷ್ಟಿಯಾಯಿತು.

ಈ ತೆರಿಗೆಗಳು ಬಳಕೆ ವಸ್ತುಗಳ ಬೆಲೆಯನ್ನು ಹೆಚ್ಚಿಸಿದವು. ಅದರಿಂದಾಗಿ ವ್ಯಾಪಾರಿಗಳು ಮತ್ತು ಜನರು ಈ ಹೊಸ ತೆರಿಗೆಗಳ ಹೇರಿಕೆಯನ್ನು ಪ್ರತಿಭಟಿಸಿದರು. ಬ್ರಿಟನ್‌ನಲ್ಲಿ ಬಹಳ ತೀವ್ರವಾಗಿ ರಾಜನ ವಿರುದ್ಧ ಯುದ್ಧ ನಡೆಯುತ್ತಿದ್ದ ಸಮಯದಲ್ಲಿ ಕತ್ತಿಯ ಬಲವನ್ನು ಬಳಸಿಯೇ ಈ ಎಕ್ಸೈಸ್ ತೆರಿಗೆ ಪದ್ಧತಿಯನ್ನು ಸ್ಥಾಪಿಸಲಾಯಿತು..

ಈ ಪ್ರತಿಭಟನೆಗಳ ಫಲವಾಗಿ ಉಪ್ಪು ಮತ್ತು ಮಾಂಸದ ಮಾರಾಟದ ಮೇಲಿನ ತೆರಿಗೆಗಳನ್ನು ತೆಗೆದು ಹಾಕಲಾಯಿತು.

ಹೀಗೆ ಅಸ್ತಿತ್ವಕ್ಕೆ ಬಂದ ತೆರಿಗೆ ಪದ್ಧತಿ ಅದರ ಮೊದಲ ಹೇರಿಕೆಯ ಸಮಯದಿಂದಲೂ ಬ್ರಿಟನ್‌ನಲ್ಲಿ ದುಡಿಯುವ ಜನರ ಸಂಘರ್ಷವನ್ನು ಎದುರಿಸುತ್ತಾ ಬಂದಿತು. ನಮ್ಮ ದೇಶದಲ್ಲಿಯೂ ಉಪ್ಪಿನ ಮೇಲಿನ ತೆರಿಗೆ ದೇಶಾದ್ಯಂತ ಸ್ವಾತಂತ್ರ್ಯ ಚಳುವಳಿಯ ಬಹು ದೊಡ್ಡ ಹೋರಾಟವಾಯಿತು ಎಂಬುದನ್ನು ನೆನಪಿಸಿಕೊಳ್ಳೋಣ.

ಕಾಲಾನಂತರ ಈ ತೆರಿಗೆಗಳು ಆಯಾ ವಸ್ತುಗಳ ಬೆಲೆಯ ಭಾಗವಾಗಿ ಬಿಟ್ಟಿತು. ಜನರಿಗೆ ಅವುಗಳ ಹೇರಿಕೆ ಗಮನಕ್ಕೆ ಬಾರದಂತೆ ಅಭ್ಯಾಸವಾಗಿ ಹೋಯಿತು. ಪಾರ್ಲಿಮೆಂಟ್ ಬಜೆಟ್ ಅಂಗಿಕಾರ ಮಾಡುವ ಅಧಿಕಾರ ಪಡೆದುಕೊಂಡಾಗ ಈ ತೆರಿಗೆಗಳು ಬಜೆಟ್‌ನ ಖಾಯಂ ಭಾಗವಾದವು. ದುಡಿಯುವ ಜನರ ಅಲ್ಪ ಕೂಲಿ, ಆದಾಯಗಳ ಒಂದು ಭಾಗವನ್ನು ಸುಲಿಗೆ ಮಾಡುವ ಎಕ್ಸೈಸ್ ತೆರಿಗೆಯನ್ನು ಬಹಳ ಸಮನಾದ ತೆರಿಗೆ, ಎಲ್ಲ ವರ್ಗದ ಜನರಿಂದಲೂ ಸಮನಾಗಿ ವಸೂಲಿ ಮಾಡುವ ತೆರಿಗೆ ಎಂದು ವ್ಯಾಖ್ಯಾನಿಸಿತು.

ಮುಂದೆ ಹಲ ಹಲವು ವಸ್ತುಗಳ ಮೇಲೆ ಮತ್ತು ಸರ್ಕಾರದ ಸೇವೆಗಳ ಮೇಲೂ ಎಕ್ಸೈಸ್ ತೆರಿಗೆ ವಿಧಿಸಲಾಯಿತು. ಹೊಗೆಸೊಪ್ಪು, ಸಕ್ಕರೆ, ಭಾರತದಿಂದ ಆಮದು ಮಾಡಿಕೊಂಡ ಬಟ್ಟೆಗಳು, ರೇಷ್ಮೆ, ತಂಬಾಕು ಪುಟ 4 ಕ್ಕೆ

‘ಸಂಯುಕ್ತ ಹೋರಾಟ–ಕರ್ನಾಟಕ’ ಬೆಂಗಳೂರಿನ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ 2025ರ ಮಾರ್ಚ್ 12 ಮತ್ತು 13 ಈ ಎರಡು ದಿನಗಳು "ಜನ ಚಳುವಳಿಗಳ ಬಜೆಟ್ ಅಧಿವೇಶನ" ನಡೆಯಿತು. ಇದು ಕೇಂದ್ರ ಮತ್ತು ರಾಜ್ಯ ಬಜೆಟ್‌ಗಳ ಮೇಲೆ ಅರ್ಥಪೂರ್ಣ ಚರ್ಚೆಗೆ ನಾಂದಿಯಾಡಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನವ ಉದಾರವಾದಿ ಧೋರಣೆಗಳ ವಿರುದ್ಧ ಪ್ರಬಲ ಐಕ್ಯ ಹೋರಾಟ ರೂಪಿಸುವ ಘೋಷಣೆಯೊಂದಿಗೆ ಜನ ಚಳವಳಿಗಳ ಬಜೆಟ್ ಅಧಿವೇಶನ ಮುಕ್ತಾಯವಾಯಿತು.



ಜನ ಚಳವಳಿಗಳ ಬಜೆಟ್ ಅಧಿವೇಶನದ ಅರ್ಥಪೂರ್ಣ ಚರ್ಚೆ

ಟಿ. ಯಶವಂತ

ಐತಿಹಾಸಿಕ ದೆಹಲಿ ರೈತ ಹೋರಾಟದ ಸಂದರ್ಭದಲ್ಲಿ ರೈತ–ಕಾರ್ಮಿಕ–ದಲಿತ–ಮಹಿಳಾ–ವಿದ್ಯಾರ್ಥಿ–ಯುವಜನ ಸಂಘಟನೆಗಳ ಐಕ್ಯ ವೇದಿಕೆಯಾಗಿ ರೂಪುಗೊಂಡ ಸಂಯುಕ್ತ ಹೋರಾಟ ಕರ್ನಾಟಕವು, ‘ಜನಚಳುವಳಿಗಳ ಬಜೆಟ್ ಅಧಿವೇಶನ’ ಸಂಘಟಿಸುವ ಮೂಲಕ ನಾಡಿನ ಗಮನ ಸೆಳೆಯಿತು.

ಈ ಹಿಂದೆಯೂ 2021ರ ಡಿಸೆಂಬರ್‌ನಲ್ಲಿ ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಪರ್ಯಾಯ ಅಧಿವೇಶನ ನಡೆಸಿತ್ತು. 2022ರ ಮಾರ್ಚ್‌ನಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮೂರು ದಿನಗಳ ಪರ್ಯಾಯ ಜನತಾ ಅಧಿವೇಶನವನ್ನು ನಡೆಸಿತ್ತು. ಹೀಗೆ ಕರ್ನಾಟಕದ ಜನಚಳುವಳಿಯಲ್ಲಿ ಮಹತ್ವದ ದಾಖಲೆ ಸೃಷ್ಟಿಸಿದ್ದ ಸಂಯುಕ್ತ ಹೋರಾಟ ಕರ್ನಾಟಕವು ‘ಜನ ಚಳವಳಿ ಬಜೆಟ್ ಅಧಿವೇಶನ’ ನಡೆಸಿ ಬಜೆಟ್ ಮೇಲೆ ಅರ್ಥಪೂರ್ಣ ಚರ್ಚೆಗೆ ನಾಂದಿಯಾಡಿತು.

ಹಿನ್ನಲೆ:

ಸತತ ಮೂರನೇ ಅವಧಿಗೆ ಅಧಿಕಾರಕ್ಕೆ ಏರಿದ ಸ್ವತಂತ್ರ ಭಾರತದ ಅತ್ಯಂತ ಕಾರ್ಪೊರೇಟ್ ಪರ ಆಳ್ವಿಕೆಗೆ ಕುಖ್ಯಾತಿಯಾಗಿರುವ ನರೇಂದ್ರ ಮೋದಿ ಸರ್ಕಾರದ 2025–26ನೇ ಸಾಲಿನ ಬಜೆಟ್ ಅನ್ನು ಫೆಬ್ರವರಿ ಒಂದರಂದು ನಿರ್ಮಲಾ ಸೀತಾರಾಮನ್ ಮಂಡಿಸಿದ್ದರು. 2023ರ ವಿಧಾನಸಭಾ ಚುನಾವಣೆಯಲ್ಲಿ ಕೇಂದ್ರದ ಕಾರ್ಪೊರೇಟ್–ಕೋಮುವಾದಿ ಆಳ್ವಿಕೆಗೆ ಸಹಕಾರಿಯಾಗಿ ಡಬಲ್ ಇಂಜಿನ್ ನಂತೆ ಇದ್ದ ರಾಜ್ಯದ ಬಿಜೆಪಿ ಸರ್ಕಾರವನ್ನು ಸೋಲಿಸಿ, ಪರ್ಯಾಯ ಧೋರಣೆಗಳ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ತನ್ನ ಮೂರನೇ ಬಜೆಟ್ ಅನ್ನು ಮಾರ್ಚ್ 7, 2025ರಂದು ಮಂಡಿಸಿತು.

ಈ ಎರಡೂ ಬಜೆಟ್‌ಗಳ ಆರ್ಥಿಕ ಧೋರಣೆಗಳು ಒಂದೇ ರೀತಿಯಲ್ಲಿ ಇದ್ದವು. ಕೇಂದ್ರ ತನ್ನ ಬಜೆಟ್‌ನಲ್ಲಿ ಕಾರ್ಪೊರೇಟ್ ಪರ ಧೋರಣೆಗಳನ್ನು ನಗ್ನವಾಗಿ ಬಿಚ್ಚಿಟ್ಟಿದ್ದರೆ, ರಾಜ್ಯ ತನ್ನ ಬಜೆಟ್‌ನಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್‌ರವರು ಸೇರಿದಂತೆ ಹಲವಾರು ಪ್ರಗತಿಪರ ಕವಿ, ಸಾಹಿತಿ ಹಾಗೂ ದಾರ್ಶನಿಕರ ಹೇಳಿಕೆಗಳನ್ನು ಉದ್ಧರಿಸುವ ಮೂಲಕ, ಇದೇ ಕಾರ್ಪೊರೇಟ್ ಧೋರಣೆಗಳನ್ನು ಮರೆಮಾಚುವ ಯತ್ನ ನಡೆಸಿತು. ವಿಧಾನಸಭೆಯಲ್ಲಿ, ಸಂಸತ್ ಸಭೆಯಲ್ಲಿ ದುಡಿಯುವ ವರ್ಗದ ಪ್ರಾತಿನಿಧ್ಯ ಅತ್ಯಂತ ನಗಣ್ಯವಾಗಿರುವ ಇವತ್ತಿನ ಸಂದರ್ಭದಲ್ಲಿ ಹಾಗೂ ಸಭಾಧ್ಯಕ್ಷರುಗಳು ಹೆಚ್ಚು ಹೆಚ್ಚು ಆಳುವ ಪಕ್ಷಗಳ ಗುರಾಣಿಯಂತೆ ವರ್ತಿಸುತ್ತಾ, ಪ್ರಜಾಸತ್ತಾತ್ಮಕ ಅವಕಾಶ ನಿರಾಕರಿಸುತ್ತಿರುವ ಕಾರಣದಿಂದಲೂ ಅರ್ಥಪೂರ್ಣ ಚರ್ಚೆಯಾಗುವ ನಿರೀಕ್ಷೆ ಇಟ್ಟುಕೊಳ್ಳುವಂತಿರಲಿಲ್ಲ. ರಾಜ್ಯದಲ್ಲಿ ಪ್ರಧಾನ ವಿರೋಧ ಪಕ್ಷವಾಗಿರುವ ಬಿಜೆಪಿ, ಬಜೆಟ್ ಅನ್ನು ಮತಾಂಧ ಹಾಗೂ ಕೋಮುವಾದಿ ದೃಷ್ಟಿಯಿಂದ ಟೀಕಿಸುತ್ತಾ, ಕಾಂಗ್ರೆಸ್‌ನ ಕಾರ್ಪೊರೇಟ್ ಪರ ನೀತಿಗಳು ಜನತೆಯ ಮುಂದೆ ಬಯಲುಗೊಳ್ಳದಂತೆ ತಡೆಯುತ್ತಿದೆ. ಅದ್ದರಿಂದ ಜನ ಚಳವಳಿಗಳ ಬಜೆಟ್ ಅಧಿವೇಶನವನ್ನು ‘ಸಂಯುಕ್ತ ಹೋರಾಟ ಕರ್ನಾಟಕ’ ಬೆಂಗಳೂರಿನ ಗಾಂಧಿ ಭವನದಲ್ಲಿ ಸಂಘಟಿಸಿತ್ತು.

ಕರಾಳ ಕೃಷಿ ಕಾಯ್ದೆಗಳ ಜಾರಿಗೆ ಯತ್ನ

ಮಾರ್ಚ್ 12, 2025ರಂದು ಬಜೆಟ್ ಮೇಲಿನ ಚರ್ಚೆಗಳು ಕರ್ನಾಟಕ ಪ್ರಾಂತ ರೈತ ಸಂಘ (KPRS) ದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಯಶವಂತ ರವರ ಪ್ರಾಸ್ತಾವಿಕ ಮಾತುಗಳಿಂದ ಆರಂಭಗೊಂಡವು. ಕೇಂದ್ರ ಬಜೆಟ್ ಕುರಿತು ಮಾತನಾಡಿದ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಕಾರ್ಯಕಾರಿ ಸದಸ್ಯ ಆಶಿಶ್ ಮಿಥ್ಥಲ್‌ರವರು ದೇಶದ ಕೃಷಿ, ಕೃಷಿ ಸಂಸ್ಕರಣೆ, ಕೃಷಿ ಮಾರುಕಟ್ಟೆ ಇವುಗಳನ್ನು ಇಡಿಯಾಗಿ ಕಾರ್ಪೊರೇಟ್ ವಲಯಕ್ಕೆ ಹಸ್ತಾಂತರಿಸುವ ನೀತಿಗಳು ಮತ್ತು ಕ್ರಮಗಳನ್ನು ಬಜೆಟ್‌ನಲ್ಲಿ ಒಳಗೊಳ್ಳಲಾಗಿದೆ. ಐತಿಹಾಸಿಕ ದೆಹಲಿ ರೈತ ಹೋರಾಟದಿಂದ ರದ್ದಾದ ಕರಾಳ ಕೃಷಿ ಕಾಯ್ದೆಗಳನ್ನು "ಕೃಷಿ ಮಾರುಕಟ್ಟೆ ಕುರಿತ ರಾಷ್ಟ್ರೀಯ ಧೋರಣಾ ಚೌಕಟ್ಟು" ಮೂಲಕ ಮತ್ತೆ ಜಾರಿಮಾಡಲು ಯತ್ನಿಸುತ್ತಿದೆ ಎಂದು ವಿವರಿಸಿದರು.

ಗ್ಯಾರಂಟಿ ಯೋಜನೆಗಳು ಉಚಿತ ಕೊಡುಗೆಗಳಲ್ಲ

ರಾಜ್ಯ ಬಜೆಟ್ ಕುರಿತು ಪ್ರಸಿದ್ಧ ಅಭಿವೃದ್ಧಿ ಅರ್ಥಶಾಸ್ತ್ರಜ್ಞ ಪ್ರೊ.ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಕಲ್ಯಾಣ ಕಾರ್ಯಕ್ರಮಗಳು ಹಾಗೂ ಗ್ಯಾರಂಟಿ ಯೋಜನೆಗಳು ಉಚಿತ ಕೊಡುಗೆಗಳಲ್ಲ, ಇದು ಮಾನವ ಸಂಪನ್ಮೂಲದ ಮೇಲಿನ ಅರ್ಥಪೂರ್ಣ ಹೂಡಿಕೆಯಾಗಿದ್ದು ಸ್ವಾಗತಾರ್ಹವಾಗಿವೆ. ಆದರೆ ನಿರುದ್ಯೋಗ, ಬೆಲೆ ಏರಿಕೆ, ಬಡತನ, ವಲಸೆ ಮುಂತಾದ ಮೂಲಭೂತ ಸಮಸ್ಯೆಗಳು ಹಾಗೂ ಜನರ ಜೀವನಮಟ್ಟದ ಹೆಚ್ಚಳಕ್ಕೆ ಆಧಾರವಾಗಿರುವ ಕೃಷಿ ಹಾಗೂ ಕೈಗಾರಿಕಾ ವಲಯಗಳ ಉತ್ಪಾದಕತೆಗೆ ಯಾವುದೇ ರೀತಿಯಲ್ಲಿ ನೆರವಾಗದ ಮಿತಿಯನ್ನು ಈ ಬಜೆಟ್ ಹೊಂದಿದೆ ಎಂದು ವಿಶ್ಲೇಷಿಸಿದರು.

ಕೇಂದ್ರ ಮತ್ತು ರಾಜ್ಯ ಬಜೆಟ್ ಧೋರಣೆಗಳೊಂದೆ

ಮಾರ್ಚ್ 13, 2025 ರಂದು ಎಐಯುಟಿಯುಸಿ ರಾಜ್ಯ ಉಪಾಧ್ಯಕ್ಷ ಕೆ.ವಿ. ಭಟ್ ರವರ ಅಧ್ಯಕ್ಷತೆಯಲ್ಲಿ ‘ಕಾರ್ಮಿಕರು ಹಾಗೂ ಬಜೆಟ್ ಧೋರಣೆಗಳು’ ಕುರಿತು ನಾಲ್ಕನೇ ಗೋಷ್ಠಿಯಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಎಐಸಿಸಿಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೈತ್ರಿಯಿ ಕೃಷ್ಣನ್, ಎಐಕೆಎಸ್ ರಾಜ್ಯ ಕಾರ್ಯದರ್ಶಿ ಮೌಲಾ ಮುಲ್ಲಾ ಮಾತಾನಾಡಿದರೆ, ಎನ್.ಸಿ.ಎಲ್.ನ ಲೀಲಾವತಿ ಪ್ರತಿಕ್ರಿಯಿಸಿದರು. ಜನರನ್ನು ಪ್ರಜೆಗಳನ್ನಾಗಿ ನೋಡದೇ, ಫಲಾನುಭವಿಗಳಾಗಿ ನೋಡಲಾಗುತ್ತಿದೆ. ಪ್ರತಿಯೊಬ್ಬ ದುಡಿಮೆಗಾರರನ್ನು ದೈನೇಸಿ ಸ್ಥಿತಿಗೆ ನೂಕಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಬಜೆಟ್‌ಗಳ ಹೂರಣ ಮತ್ತು ಧೋರಣೆಗಳು ಯಾವುದೇ ರೀತಿಯಲ್ಲಿ ಬೇರೆ ಇಲ್ಲ. ಖಾಸಗೀಕರಣ ಮತ್ತು ಜನ ವಿರೋಧಿ ಪಿಪಿಪಿ ಮಾದರಿಗಳೇ ಬಜೆಟ್ ತುಂಬಾ ತುಂಬಿವೆ. ಸಾರ್ವಜನಿಕ ಸಂಪತ್ತನ್ನು ಖಾಸಗಿ ಲಾಭಕ್ಕಾಗಿ ಮೀಸಲಿಡುವ ಸಾರ್ವಜನಿಕ–ಖಾಸಗಿ ಸಹಭಾಗಿತ್ವವು, ಸಾರ್ವಜನಿಕ ಸಂಪತ್ತನ್ನು ಖಾಸಗಿ ಕಂಪನಿಗಳು ದೋಚಲು ಅವಕಾಶ ಅಲ್ಲದೇ ಬೇರೇನೂ ಅಲ್ಲ. ಬಂಡವಾಳಶಾಹಿಗಳಿಗೆ ಬಂಡವಾಳ ಹೂಡಿಕೆ ಸಬ್ಸಿಡಿ, ಉತ್ಪಾದನಾ ಆಧಾರಿತ ಸಬ್ಸಿಡಿ, ಕಾರ್ಮಿಕರಿಗೆ ಪಾವತಿಸುವ ವೇತನಕ್ಕೆ ಪ್ರತಿಯಾಗಿ ಮಾಲೀಕರಿಗೆ ಸಬ್ಸಿಡಿ ಮುಂತಾದ ನೇರ ನಗದು ಪಾವತಿ ಸಬ್ಸಿಡಿಗಳಲ್ಲದೇ, ನೆಲ–ಜಲ, ವಿದ್ಯುತ್, ಬ್ಯಾಂಕ್ ಸಾಲ ಮುಂತಾದ ಹೇರಳವಾದ ನೆರವನ್ನು ಕೇಂದ್ರ ಮತ್ತು ರಾಜ್ಯ ಬಜೆಟ್‌ಗಳು ನೀಡಿವೆ. ಇದೇ ಸಂದರ್ಭದಲ್ಲಿ ಉದ್ಯೋಗ ಸೃಷ್ಟಿ ಪ್ರಮಾಣಕ್ಕೆ ಯಾವುದೇ ಷರತ್ತು ವಿಧಿಸದೇ, ಕಾರ್ಮಿಕರ ಹಕ್ಕುಗಳ ಉಲ್ಲಂಘನೆಗೆ ಎಲ್ಲಾ ರೀತಿಯ ರಕ್ಷಣೆ ಒದಗಿಸಲಾಗುತ್ತಿದೆ.

ರಾಜ್ಯ ಬಜೆಟ್‌ನಲ್ಲಿ ಕಾರ್ಮಿಕ ಕಾನೂನುಗಳ ಉಲ್ಲಂಘನೆಯನ್ನು ಕ್ರಿಮಿನಲ್ ಅಪರಾಧದ ವ್ಯಾಪ್ತಿಯಿಂದ ಹೊರಗಿಡಲು ಕಾಯ್ದೆಯನ್ನು ತರಲಾಗುವುದು ಎಂದು ಘೋಷಿಸಿದೆ. ಆರ್ಥಿಕತೆಯ ಅಡಿಪಾಯವನ್ನು ಖಾಸಗೀಕರಿಸಿ, ಇಡೀ ದೇಶದ ಅಭಿವೃದ್ಧಿಯನ್ನೇ ದಿವಾಳಿ ಎಬ್ಬಿಸುವ ನೀತಿಯನ್ನು ಈ ಬಜೆಟ್ ಒಳಗೊಂಡಿವೆ ಎಂದು ವಿವರವಾಗಿ ಚರ್ಚಿಸಲಾಯಿತು.

‘ಸಾಮಾಜಿಕ ಭದ್ರತೆ, ಮೂಲಭೂತ ಹಕ್ಕುಗಳು ಹಾಗೂ ಬಜೆಟ್ ಧೋರಣೆಗಳು’

ಕರ್ನಾಟಕ ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಮಾಲೀ ಪಾಟೀಲ್ ರವರ ಅಧ್ಯಕ್ಷತೆಯಲ್ಲಿ ನಡೆದ ‘ಸಾಮಾಜಿಕ ಭದ್ರತೆ, ಮೂಲಭೂತ ಹಕ್ಕುಗಳು ಹಾಗೂ ಬಜೆಟ್ ಧೋರಣೆಗಳು’ ಕುರಿತ ಐದನೇ ಗೋಷ್ಠಿಯು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ರವರ ಪ್ರಾಸ್ತಾವಿಕ ಮಾತುಗಳಿಂದ ಆರಂಭಗೊಂಡಿತು. ಸಮಾನ ಶಿಕ್ಷಣ ಕುರಿತು ಶಿಕ್ಷಣ ತಜ್ಞ ಶ್ರೀಪಾದ ಭಟ್, ಜನಾರೋಗ್ಯ ಕುರಿತು ಪ್ರಖ್ಯಾತ ವೈದ್ಯ ಡಾ.ಅನಿಲ್ ಕುಮಾರ್ ಅವುಲಪ್ಪ, ಉದ್ಯೋಗ ಕುರಿತು ಡಿವೈಎಫ್‌ಐ ನ ಮಾಜಿ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ವಸತಿ ಕುರಿತು ಕರ್ನಾಟಕ ಜನಶಕ್ತಿ ರಾಜ್ಯ ಕಾರ್ಯದರ್ಶಿ ಕುಮಾರ್ ಸಮತಲ ಮಾತಾನಾಡಿದರೆ, ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ವಿಜಯ್ ಕುಮಾರ್, ಎಐಎಸ್‌ಎ ರಾಷ್ಟ್ರೀಯ ಕಾರ್ಯದರ್ಶಿ ಲೇಖಾ ಅಡವಿ, ಎಐಡಿಎಸ್‌ಓ ರಾಜ್ಯ ನಾಯಕ ಮಹಾಂತೇಶ್, ಕೆವಿಎಸ್ ಸಂಘಟನೆಯ ರಾಜ್ಯಾಧ್ಯಕ್ಷ ಸರೋವರ ಬೆಂಕಿಕೆರೆ, ರಾಜ್ಯ ರೈತ ಸಂಘದ ಯುವ ಘಟಕ ರಾಜ್ಯಾಧ್ಯಕ್ಷ ಸಿದ್ದನಗೌಡ ಪಾಟೀಲ್ ಪ್ರತಿಕ್ರಿಯಿಸಿದರು.



ರಾಜ್ಯ ನಿರ್ದೇಶಕ ತತ್ವಗಳ ಉಲ್ಲಂಘನೆ

ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳನ್ನು ಸಂಪೂರ್ಣವಾಗಿ ಪ್ರತಿಯೊಂದು ವಿಷಯದಲ್ಲೂ ಸಹ ಕೇಂದ್ರ ಮತ್ತು ರಾಜ್ಯ ಬಜೆಟ್‌ಗಳು ಉಲ್ಲಂಘಿಸುತ್ತಿವೆ. ದುಡಿಯುವ ಜನತೆಗೆ ಸಾಮಾಜಿಕ ಭದ್ರತೆಯನ್ನು ನಿರಾಕರಿಸಲಾಗುತ್ತಿದೆ. ಶಿಕ್ಷಣ, ಆರೋಗ್ಯ, ವಸತಿಯನ್ನು ಸಂಪೂರ್ಣವಾಗಿ ಖಾಸಗೀಕರಣಗೊಳಿಸುವತ್ತ ಬಹಳ ವೇಗವಾಗಿ ಸಾಗುತ್ತಿದೆ. ಜನರ ಜೀವನಮಟ್ಟ ದೊಡ್ಡ ಪ್ರಮಾಣದಲ್ಲಿ ಏರಿಕೆ ಕಾಣಲು ಮೂಲಭೂತ ಅಗತ್ಯದ ಈ ಕ್ಷೇತ್ರಗಳ ಖಾಸಗೀಕರಣ ಪ್ರಮುಖ ಕಾರಣವಾಗಿದೆ. ಈ ಎಲ್ಲಾ ವಲಯಗಳಲ್ಲಿ ಸಾರ್ವಜನಿಕ ಮೂಲಭೂತ ಸೌಕರ್ಯಗಳನ್ನು ಬಳಸಿಕೊಂಡು ಖಾಸಗಿ ಕಂಪನಿಗಳನ್ನು ಕೊಬ್ಬಿಸಲಾಗುತ್ತಿದೆ. ಖಾಸಗೀಕರಣದಿಂದಾಗಿ ಖಾಯಂ ಸ್ವರೂಪದ ಕೆಲಸಗಳೇ ಇಲ್ಲದಂತಾಗಿ ಗುತ್ತಿಗೆ–ಹೊರಗುತ್ತಿಗೆ ಹಾಗೂ ಗಿಗ್ ಮಾದರಿಯ ಉದ್ಯೋಗಗಳು ಸಾರ್ವತ್ರಿಕವಾಗುತ್ತಿವೆ. ಈ ತಕ್ಷಣ ಕರ್ನಾಟಕ ಲೇಬರ್ ಅಧಿವೇಶನ ನಡೆಸುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸಲಾಯಿತು.

ಜನ ವಿರೋಧಿ ಕಾಯ್ದೆಗಳನ್ನು ರದ್ದುಪಡಿಸಬೇಕು

ಹಿರಿಯ ಸಾಮಾಜಿಕ ಕಾರ್ಯಕರ್ತ ಎಸ್.ಆರ್. ಹಿರೇಮಠ್‌ರವರ ಅಧ್ಯಕ್ಷತೆಯಲ್ಲಿ ನಡೆದ ಜನಚಳುವಳಿಗಳ ಬಜೆಟ್ ಅಧಿವೇಶನದ ಸಮಾರೋಪದ ಮಾತುಗಳನ್ನು ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿರವರು, ಬಿಜೆಪಿ ಸರ್ಕಾರದ ಎಲ್ಲಾ ಜನ ವಿರೋಧಿ, ರೈತ ವಿರೋಧಿ, ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ಕಾಂಗ್ರೆಸ್ ಸರ್ಕಾರ ಕೂಡ ಮುಂದುವರೆಸುತ್ತಿದೆ. ಈ ಹಿಂದೆ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ‘ಸಂಯುಕ್ತ ಹೋರಾಟ ಕರ್ನಾಟಕ’ಕ್ಕೆ ಲಿಖಿತ ಭರವಸೆ ನೀಡಿದಂತೆ ಎಲ್ಲಾ ಜನ ವಿರೋಧಿ ಕಾಯ್ದೆಗಳನ್ನು ಕೂಡಲೇ ರದ್ದುಪಡಿಸಬೇಕು. ಕರಾಳ ಕೃಷಿ ಕಾಯ್ದೆಗಳನ್ನು ಹಿಂಬಾಗಿಲಿನಿಂದ ಜಾರಿಗೆ ತರುವ ಎಲ್ಲಾ ಕೃಷಿ ಕಾಯ್ದೆಗಳು ಹಾಗೂ ಭೂ ಸ್ವಾಧೀನ ಕಾಯ್ದೆಗಳನ್ನು ರದ್ದುಪಡಿಸಬೇಕು. ಮೋದಿ ಸರ್ಕಾರದ "ಕೃಷಿ ಮಾರುಕಟ್ಟೆ ಕುರಿತ ರಾಷ್ಟ್ರೀಯ ಧೋರಣಾ ಚೌಕಟ್ಟು" ನೀತಿಯನ್ನು ಸ್ಪಷ್ಟವಾಗಿ ತಿರಸ್ಕರಿಸಬೇಕು. ಕಾರ್ಮಿಕ ವಿರೋಧಿ ನಾಲ್ಕು ಸಂಹಿತೆಗಳನ್ನು, ಕನಿಷ್ಠ ದುಡಿಮೆ ಅವಧಿಯನ್ನು ಹೆಚ್ಚಳ ಮಾಡಿರುವ ಕ್ರಮಗಳನ್ನು ಕೂಡಲೇ ತಿರಸ್ಕರಿಸಬೇಕು ಎಂದು ಆಗ್ರಹಿಸಿದರು.

ಈ ಜನಾಗ್ರಹಗಳನ್ನು ಸ್ವೀಕರಿಸಿ ಮಾತಾನಾಡಿದ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ್‌ರವರು, ಈ ಜನಾಗ್ರಹಗಳನ್ನು ಮುಖ್ಯಮಂತ್ರಿಗಳಿಗೆ ತಲುಪಿಸಲಾಗುವುದು ಮತ್ತು ಈ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿಗಳ ಭೇಟಿ ನಿಗದಿ ಮಾಡಲಾಗುವುದು ಎಂದು ತಿಳಿಸಿ, ಬಜೆಟ್ ಕುರಿತ ಉತ್ಕೃಷ್ಟ ಚರ್ಚೆಗಳು ಜನ ಚಳವಳಿಗಳ ಬಜೆಟ್ ಅಧಿವೇಶನದಲ್ಲಿ ನಡೆದಿವೆ. ಆದರೆ ವೇತನ, ಭತ್ಯೆ, ಶಾಸನಬದ್ದ ಅಧಿಕಾರವನ್ನು ಪಡೆದಿರುವ ಶಾಸಕರು ಬಜೆಟ್ ಮೇಲೆ ಚರ್ಚಿಸದೇ ವಿಧಾನಸಭಾ ಕಲಾಪಗಳಲ್ಲಿ ಖಾಲಿ ಕುರ್ಚಿಗಳು ಕಾಣುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನವ ಉದಾರವಾದಿ ಧೋರಣೆಗಳ ವಿರುದ್ಧ ಪ್ರಬಲ ಐಕ್ಯ ಹೋರಾಟ ರೂಪಿಸುವ ಘೋಷಣೆಯೊಂದಿಗೆ ಜನ ಚಳವಳಿಗಳ ಬಜೆಟ್ ಅಧಿವೇಶನ ಮುಕ್ತಾಯವಾಯಿತು.

ಮರ್ಧನ ಎದುರಿಸಿ, ದಿಟ್ಟವಾಗಿ ನಿಂತ ಸಂಗಾತಿ ಕೆ.ಹೆಚ್. ಹಾಮೀದ್ ಇನ್ನಿಲ್ಲ

ಏಪ್ರಿಲ್ ಒಂದು ಅಂದ್ರೆ ಅದೊಂದು ತಮಾಷೆಗಾಗಿ ಫೂಲ್ ಮಾಡುವ ದಿನ. ಏಪ್ರಿಲ್ ಫೂಲ್ ಶಬ್ದವನ್ನು ಬಳಸಿ ಇಂದಿಗೂ ಜನ ತಮಾಷೆ ನೋಡುವುದಿದೆ. ಆದರೆ 1974 ಎಪ್ರಿಲ್ ಒಂದನೇ ದಿನಾಂಕ ಮಾತ್ರ ಬೀಭತ್ಸವಾಗಿತ್ತು. ಅಂದು ಪಾವೂರು ಹರೇಕಳ ಸುತ್ತಮುತ್ತ ಬೆಳ್ಳಂಬೆಳಗ್ಗೇನೇ ಒಂದು ಭಯಾನಕ ಸುದ್ದಿ ಹರಡಿತ್ತು. ಭೂಮಾಲೀಕನೊಬ್ಬನ ಕೂಲಿಯಾಳು ಕಾಣೆಯಾಗಿದ್ದಾನೆ. ಕಾಣೆಯಾದ ಹಿನ್ನೆಲೆಯಲ್ಲಿ ಅದೇನೇನೋ ಕತೆಗಳು ಹುಟ್ಟಿಕೊಂಡಿತ್ತು. ಧನಿಕನ ಮಗಳೊಂದಿಗೆ ಒಬ್ಬ ಕೂಲಿಯಾಳುವಿನ ಪ್ರೇಮಪ್ರಕರಣಕ್ಕೆ ರೆಕ್ಕೆ ಪುಕ್ಕಗಳು ಬೆಳೆದು ಸುದ್ದಿಯಾದವು.

ಪಾವೂರು ಹರೇಕಳದಲ್ಲಿ ಭೂಮಾಲೀಕರ ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವ ಬಿಸಿರಕ್ತದ ಯುವಕನಾಗಿದ್ದ ಕೆ.ಹೆಚ್.ಹಾಮೀದ್ ರವರ ದೋಸ್ತ್ ಆಗಿದ್ದ ಆ ಕೂಲಿಯಾಳು. ಸುದ್ದಿ ವ್ಯಾಪಕವಾಗಿ ಹರಡುತ್ತಿದ್ದಂತೆ ಪಾವೂರು ಹರೇಕಳ ಗ್ರಾಮದ ಸುತ್ತ ಪೋಲೀಸ್ ಬೂಟು ಸದ್ದು ಮಾಡತೊಡಗಿತು. ಮನೆ ಮನೆಗಳಿಗೆ ಪೋಲೀಸ್ ದಾಳಿ, ದೌರ್ಜನ್ಯ ಜೋರಾಯಿತು. ಜನ ಭಯಪಟ್ಟರು. ಇದ್ದಕ್ಕಿದ್ದಂತೆ ಹಾಮೀದಾಕನ ಮನೆಗೂ ಪೋಲೀಸ್ ದಾಂಗುಡಿಯಿಟ್ಟಿತು.

ಎಲ್ಲಿ ಎಲ್ಲಿ? ಕೂಲಿಯಾಳು ತಿಮ್ಮಪ್ಪ ಎಲ್ಲಿ? ನಿನಗೊತ್ತು, ನೀನೇ ಅಡಗಿಸಿಟ್ಟಿದ್ದೀ, ಹೇಳು... ಹೀಗೆ ಮಾತಾಡುತ್ತಲೇ ಪೋಲೀಸರ ಲಾಠಿಯು ಹಾಮೀದಾಕನ ಬೆನ್ನ ಮೇಲೆ ಬಾಸುಂಡೆ ಬರಿಸುತ್ತಿತ್ತು.

ವಾಸ್ತವ ಏನಂದ್ರೆ ನಿಜವಾಗಿಯೂ ಆತ ಏನಾಗಿದ್ದಾನೆಂಬುದು ಅವರಿಗೂ ತಿಳಿದಿರಲಿಲ್ಲ. ಹಾಮೀದಾಕನನ್ನು ಪೋಲೀಸರು ಎಳಕೊಂಡು ಉಳ್ಳಾಲ ಠಾಣೆಗೆ ಒಯ್ಯುತ್ತಾರೆ. ಸಂಪೂರ್ಣ ಬತ್ತಲೆಗೊಳಿಸಿ ಲಾಕಪ್ಪಿನಲ್ಲಿ ಹಾಕಿ ಒಂದೇ ಸವನೆ ಲಾಠಿಯಿಂದ ಬಡಿಯುತ್ತಾರೆ. ಒಬ್ಬನಿಗೆ ಸುಸ್ತಾದಾಗ ಇನ್ನೊಬ್ಬ ಬಂದು ನಿರಂತರ ಹೊಡೆಯುತ್ತಾನೆ.

ಗಟ್ಟಿಮುಟ್ಟಾದ ಹಾಮೀದಾಕನ ಶರೀರದಲ್ಲಿ ನಾಲ್ಕು ಲಾಠಿಗಳು ಪುಡಿಯಾಗುತ್ತವೆ. ಆದರೂ ಪೋಲೀಸರ ಕಠೋರತೆ ಕಡಿಮೆಯಾಗಿಲ್ಲ. ಆತ ಎಲ್ಲಿದ್ದಾನೆ ಬಾಯಿಬಿಡು ಎನ್ನುತ್ತಾ ಹೊಡೆದರೆ ಹಾಮೀದಾಕನ ಬಾಯಲ್ಲಿ ಮಾತ್ರ "ನನಗೊತ್ತಿಲ್ಲ" ಎಂಬ ಒಂದೇ ಉತ್ತರ ಬರುತಿತ್ತು.

ನಾಲ್ಕು ದಿನಗಳ ಕಾಲ ಹಾಮೀದಾಕನಿಗೆ ಈ ರೀತಿಯ ಶಿಕ್ಷೆ ನಿರಂತರವಾಗಿತ್ತು. ದೇಹ ಪೂರ್ತಿ ನಜ್ಜುಗುಜ್ಜಾದ ಸ್ಥಿತಿಯಲ್ಲಿದ್ದ ಅವರನ್ನು ಅಂಗಾತ ಮಲಗಿಸಿ ರೋಲರ್ ಬಿಡುತ್ತಾರೆ ಪೋಲೀಸರು. ಆಗಲೂ ಇವರ ಬಾಯಲ್ಲಿ ಒಂದೇ ಉತ್ತರ, ಗೊತ್ತಿಲ್ಲ ಎಂಬುದು. ಇದು ಸತ್ಯವೂ ಆಗಿತ್ತು. ಆದರೆ ಪೋಲೀಸರು ಈ ಮಾತನ್ನು ಒಪ್ಪಲು ತಯಾರಿರಲಿಲ್ಲ.

ಮೈಮೇಲೆ ಗಾಯಗಳಾಗಿ ರಕ್ತ ಹೆಪ್ಪುಗಟ್ಟಿತ್ತು. ಇಷ್ಟೆಲ್ಲಾ ಆದರೂ ಕ್ರೂರಿಗಳ ಮನಸ್ಸು ಕರಗಲಿಲ್ಲ. ಆ ನಂತರ ಎರಡೂ ಕೈಗಳನ್ನು ಹಿಂದಕ್ಕೆ ಕಟ್ಟಿ ಏರೋಪ್ಲೇನ್ ಬಿಡಲಾಯ್ತು. ಆಗಲೂ ಅವರ ಉತ್ತರ 'ಗೊತ್ತಿಲ್ಲ ಗೊತ್ತಿಲ್ಲ'.

ಇಷ್ಟೆಲ್ಲಾ ಶಿಕ್ಷೆ ಅನುಭವಿಸಿದರೂ ಹಮೀದಾಕ ಅಯ್ಯೋ ಎಂದು ಕೂಗಲಿಲ್ಲ. ಇದರಿಂದಾಗಿ ಪೋಲೀಸರ ಸಿಟ್ಟು ಇನ್ನಷ್ಟು ಏರಿತ್ತು. ಕೊನೆಗೆ ಗೋಣಿ ಚೀಲ ಹೊಲಿಯುವ ದಬ್ಬಣ ತಂದು ಶಿಶ್ನಕ್ಕೆ ತುರುಕಿಸಿದರು. ಅಯ್ಯೋ ಅನ್ನಲಿಲ್ಲ. ತಲೆಯನ್ನು ಗೋಡೆಗೆ ಬಡಿದು, 'ಇನ್ನಾದರೂ ಹೇಳು ಮಾರಾಯಾ' ಎಂದಾಗ ಹಾಮೀದಾಕನ ಬಾಯಲ್ಲಿ ಬಂದ ಉತ್ತರದಿಂದ ಪೋಲೀಸರು ಮತ್ತಷ್ಟು ಕೆರಳಿದರು. ದಬ್ಬಣ ಹಾಕಿ ರಕ್ತ ಬರಿಸಿದ್ರಲ್ಲಾ... ಇನ್ನು ಶಿಶ್ನವನ್ನೇ ಕೇಳಿ ಅವನೇ ಉತ್ತರಿಸುತ್ತಾನೆಂದು ಗರ್ವದಿಂದ ಹೇಳಿದರು. ಮತ್ತೆ ಹಮೀದಾಕ ಬಾಯಿ ಬಿಡಲೇ ಇಲ್ಲ.

ಮರುದಿವಸ ಸ್ಟೇಷನಿಗೆ ಒಂದು ಸುದ್ದಿ ಬರುತ್ತದೆ. "ಕಾಣೆಯಾಗಿದ್ದ ಕೂಲಿಯಾಳು ಗುಡ್ಡದ ಕಣಿವೆಯೊಂದರಲ್ಲಿ ಶಿಶ್ನ ಕತ್ತರಿಸಲ್ಪಟ್ಟ ಸ್ಥಿತಿಯಲ್ಲಿ ಬಿದ್ದಿದ್ದಾನೆ." ಭೂಮಾಲೀಕರ ಕಡೆಯವರಿಂದಾದ ಈ ಕೃತ್ಯಕ್ಕೆ ಹಾಮೀದಾಕನನ್ನು ಈ ರೀತಿ ಬಡಿಯಲು ಬೇರೆಯೇ ಕಾರಣವಿತ್ತು. ಭೂಮಾಲೀಕರ ಯಾವ ಮಾತಿಗೂ ಹಾಮೀದಾಕ ಬೆಲೆಕೊಡುತ್ತಿರಲಿಲ್ಲ.

ಅವರಿಗೆ ಪೋಲೀಸರ ಮೂಲಕ ಹೊಡೆಸುವಲ್ಲಿ ಭೂಮಾಲೀಕರ ಕುತಂತ್ರವಿತ್ತು. ಹಾಮೀದಾಕನನ್ನು ಒಬ್ಬ ತೀವ್ರವಾದಿ ನಕ್ಸಲ್‌ವಾದಿ ಅಂತ ಬೆಟ್ಟು ಮಾಡಲು ಪ್ರಯತ್ನ ಪಟ್ಟಿದ್ದರು.

ಅವರು ನಕ್ಸಲ್‌ವಾದಿಯೂ ಅಲ್ಲ, ತೀವ್ರವಾದಿಯೂ ಆಗಿರಲಿಲ್ಲ. ಆದರೆ ಅವರೊಬ್ಬ ಹಠವಾದಿ. ಹಿಡಿದ ಕೆಲಸವನ್ನು ಪೂರ್ಣಗೊಳಿಸುವ ಛಲವಿತ್ತು.

ಭೂಮಸೂದೆ ಕಾಯ್ದೆ ಜಾರಿಗೊಳಿಸಬೇಕೆಂಬ ಬೇಡಿಕೆಯೊಂದಿಗೆ ಮಂಗಳೂರಿಂದ ಬೆಂಗಳೂರಿಗೆ ಸಂಘಟಿಸಿದ ರೈತರ ಕಾಲ್ನಡಿಗೆ ಜಾಥಾದಲ್ಲಿ ಹೋದ ಹಾಮೀದಾಕ ಹಿಂತಿರುಗಿ ಬರಲು ಬಸ್ಸಿಗೆ ಟಿಕೇಟಿಗಾಗಿ ಹಣ ಕೊಡಿ ಎಂದಿದ್ದಕ್ಕೆ 'ಹಣ ಇಲ್ಲದಿದ್ದರೆ ನಡೆದು ಬಂದ ದಾರಿಯಲ್ಲೇ ವಾಪಾಸು ನಡೆದು ಹೋಗು' ಎಂದಿದ್ದ ಲೀಡರೊಬ್ಬರ ಮಾತನ್ನು ಕೇಳಿಸಿಕೊಂಡಿದ್ದ ಇನ್ನೊಬ್ಬ ಲೀಡರ್ ಸಂಗಾತಿ ರಾಮಚಂದ್ರರಾವ್ ರವರು, ಬಸ್ಸಿಗೂ ಊಟಕ್ಕೂ ದುಡ್ಡು ಕೊಟ್ಟು ಕಳಿಸಿರುವುದನ್ನು ಆಗಾಗ ನೆನಪಿಸುತ್ತಿದ್ದರು.

ಹರೇಕಳದಲ್ಲಿ ಡಿವೈಎಫ್‌ಐ ಸಂಘಟನೆಗೆ ಹೊಸ ಕಛೇರಿ ತೆರೆದಾಗ, ಅದರಲ್ಲಿ ಸ್ಥಳೀಯ ಕಮ್ಯೂನಿಸ್ಟ್ ಮುಖಂಡರಾಗಿದ್ದ ದಿ.ಕಾಮಣ್ಣ ರೈಯವರ ಹೆಸರನ್ನು ಹಠವಿಡಿದು ಬರೆಸಿದ್ದಾರೆ.



ಮರ್ಧನಕ್ಕೆ ಒಳಗಾದ ಸಂಗಾತಿ ಕೆ.ಹೆಚ್. ಹಾಮೀದ್

ಗೇಣಿದಾರರ, ಹೆಂಚು, ಬೀಡಿ ಕಾರ್ಮಿಕರ ಹೋರಾಟಗಳ ಮೂಲಕ ಕಮ್ಯೂನಿಸ್ಟ್ ಚಳುವಳಿ ಉತ್ತುಂಗದಲ್ಲಿದ್ದ ಸಂದರ್ಭದಲ್ಲಿ, ತ್ಯಾಗ ಬದ್ದತೆಗಳ ಮೂಲಕ ತನ್ನನ್ನು ಚಳುವಳಿಗೆ ಸಮರ್ಪಿಸಿಕೊಂಡಿದ್ದ, ಭೂಗತರಾಗಿಯೂ ಕೆಲಸ ಮಾಡಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಖ್ಯಾತ ಕಮ್ಯೂನಿಸ್ಟ್ ನಾಯಕರ ಒಡನಾಟದಲ್ಲಿದ್ದ ಸಂಗಾತಿ ಹಮೀದ್ ಮಾರ್ಚ್ 9ರಂದು ನಿಧನರಾಗಿದ್ದಾರೆ. ಅವರಿಗೆ 74ವರ್ಷ ವಯಸ್ಸಾಗಿತ್ತು.

ಒಮ್ಮೆ ಬೀಡಿ ಕಾರ್ಮಿಕ ಮುಂದಾಳು ಯು.ಬಿ. ಲೋಕಯ್ಯರವರು ಹರೇಕಳದಲ್ಲಿ ಒಂದು ಮೀಟಿಂಗಲ್ಲಿ ಭಾಗವಹಿಸಲು ಹೋಗಿದ್ದರು. ಮಧ್ಯವರ್ತಿಗಳ ಕಿರುಕುಳದ ವಿರುದ್ದ ಬೀಡಿ ಕಾರ್ಮಿಕರನ್ನು ಸಂಘಟಿಸುತ್ತಿದ್ದ ಯು.ಬಿ.ಯವರಿಗೆ ರಾತ್ರಿ ಹೊತ್ತಲ್ಲಿ ಹೊಡೆಯಲೆಂದು ಇಬ್ಬರು ಮಧ್ಯವರ್ತಿಗಳು ಜನರನ್ನು ರೆಡಿ ಮಾಡಿದ್ದರು. ಹಾಮೀದಾಕನಿಗೆ ಆ ವಿಚಾರ ಅದೇಗೊ ತಿಳಿದು ಹೋಗಿತ್ತು. ಈ ವಿಷಯವನ್ನು ಲೋಕಯ್ಯರಲ್ಲಿ ಹೇಳದೇನೇ ಮೀಟಿಂಗ್ ಮುಗಿದ ಬಳಿಕ ಅವರನ್ನು ಕಳಿಸಿಕೊಟ್ಟರು.

ಹಲ್ಲೆ ಮಾಡಲು ಅಡಗಿ ಕುಳಿತವರಿಗೂ ಲೋಕಯ್ಯರನ್ನು ಹೊಡೆಯಲಾಗಲಿಲ್ಲ. ಆದರೆ ಹಾಮೀದಾಕ ಮಾತ್ರ ಹಲ್ಲೆ ಮಾಡಲೆಂದು ಕುಳಿತಿದ್ದವರಿಗೆ ನಾಲ್ಕೇಟು ಬಾರಿಸಿಯೇ ಕಳಿಸಿದ್ದರು.

ಅಲ್ಲಿನ ಕಾರ್ಯಕರ್ತರು ಏನೇ ಕಾರ್ಯಕ್ರಮ ನಡೆಸುವುದಿದ್ದರೂ ಹಿರಿಯರಾದ ಹಾಮೀದಾಕರಲ್ಲಿ ಸಲಹೆ ಸೂಚನೆ ಕೇಳಿಯೇ ಮುಂದುವರಿಯುತ್ತಿದ್ದರು. ಪಕ್ಷ ಮತ್ತು ಪಕ್ಷಕ್ಕಾಗಿ ದುಡಿಯುವ ಕಾರ್ಯಕರ್ತರ ಬಗ್ಗೆ ಬಾರೀ ಅಭಿಮಾನ ಇಟ್ಟುಕೊಂಡಿದ್ದರು. ಎಷ್ಟೊ ಬಾರಿ ಹರೇಕಳ ಪಾವೂರು ಗ್ರಾಮಗಳಲ್ಲಿ ಬೀಡಿ ಕಾರ್ಮಿಕರ ರೈತರ ಕಾಲ್ನಡಿಗೆ ಜಾಥಾ ಹೊರಟಾಗೆಲ್ಲಾ ಮಧ್ಯಾಹ್ನದ ಊಟಕ್ಕಾಗುವಾಗ ಅವರ ಮನೆಗೆ ತಲಪುವಂತೆ ಜಾಥಾ ರೂಪೀಕರಿಸುತ್ತಿದ್ದರು.

ಮಾವಿನ ವ್ಯಾಪಾರದಲ್ಲಿ ಹಲವಾರು ಸಲ ಕೈಸುಟ್ಟುಕೊಂಡಿದ್ದರು. ಬಡತನದಲ್ಲೇ ಹುಟ್ಟಿ ಬೆಳೆದವರು ಜೀವನ ನಿರ್ವಹಣೆಗಾಗಿ ಕೆಲವೊಮ್ಮೆ ಮೀನು ಮಾರಾಟಕ್ಕಿಳಿದ್ದದ್ದೂ ಇದೆ.

ಇತ್ತೀಚೆಗೆ ಅವರ ಆರೋಗ್ಯ ತೀರಾ ಹದಗೆಟ್ಟು ಹಲವು ಬಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಮೊನ್ನೆ ಆದಿವಾಸಿ ಹಕ್ಕುಗಳ ಹೋರಾಟ ಸಮಿತಿಯ ವತಿಯಿಂದ ನಡೆದ ಹಕ್ಕೊತ್ತಾಯ ಚಳವಳಿಯಲ್ಲಿ ಭಾಗವಹಿಸಲು ಅಖಿಲ ಭಾರತ ಜನನಾಯಕಿ ಸಂಗಾತಿ ಬೃಂದಾ ಕಾರತ್ ಮಂಗಳೂರಿಗೆ ಬಂದಿದ್ದರು. ಅನಾರೋಗ್ಯದಿಂದ ಬಳಲುತಿದ್ದ ಹಾಮೀದಾಕ ಅಂದು ಬೆಳಿಗ್ಗೆ ವೆನ್ಲಾಕ್ ಆಸ್ಪತ್ರೆಗೆ ಅಡ್ಮಿಟ್ ಆಗಲು ಹೋಗುವವರಿದ್ದರು.

ಇಂದಲ್ಲ ನಾಳೆ ಸಾವು ತನ್ನನ್ನು ಬೆನ್ನಟ್ಟಿ ಬರುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಂಡಿದ್ದ ಹಾಮೀದಾಕ, ಸಾಯುವುದಾದರೂ ಬೃಂದಾ ಕಾರತ್ ಅವರನ್ನೊಮ್ಮೆ ನೋಡಿಯೇ ಸಾಯುತ್ತೇನೆಂದು ಹಠ ತೊಟ್ಟು ಆಸ್ಪತ್ರೆಗೆಂದು ಬಂದಿದ್ದ ಅಟೋದಲ್ಲೇ ಕುಳಿತು ಕಾರತ್ ಬರುವವರೆಗೂ ಸಭೆ ನಡೆಯುವಲ್ಲಿ ಇದ್ದು ಹೋದವರು. ನಂತರ ಕಾಯಿಲೆ ಉಲ್ಬಣಗೊಂಡು ಅನಾರೋಗ್ಯದಿಂದ ಮನೆಯಲ್ಲೇ ಇದ್ದರು.

ಸ್ಥಳೀಯ ಸಂಗಾತಿಗಳಲ್ಲಿ ಅನೇಕರು ಅವರ ಮನೆಗೆ ಬೇಟಿ ನೀಡಿ ಹೋಗುತ್ತಿದ್ದರು. ಬಂದವರು ಅವರ ಕೈಗಿತ್ತ ಚೂರು ಪಾರು ಹಣವನ್ನು ಒಟ್ಟು ಹಿಡಿದು ಮಗನನ್ನು ಹತ್ತಿರ ಕರೆದು "ಈ ಹಣವನ್ನು ಇಟ್ಟುಕೋ. ನಾಳೆ ದಿನ ನನ್ನ ಮರಣದ ಖರ್ಚಿಗೆ ಬೇಕಾದೀತು ಎನ್ನುತ್ತಾ ಮಗನ ಕೈಗಿತ್ತರು.

ಅವರು ಹೇಳಿದಂತೆ ಮಾರ್ಚ್ 9, 2025 ಸಂಜೆ ಹೊತ್ತಿಗೆ ಪತ್ನಿ, ಮಗಳು, ಮಗನನ್ನು ಬಿಟ್ಟು ಅಗಲಿದರು. ಬಾಲ್ಯದಿಂದಲೇ ಕಮ್ಯೂನಿಸ್ಟ್ ಪಕ್ಷಕ್ಕಾಗಿ ದುಡಿಯುತ್ತಾ ಜೀವನದ ಕೊನೆಯ ದಿನದವರೆಗೂ ಪಕ್ಷ ನಿಷ್ಠೆಯನ್ನು ತೋರಿದವರು. ಎರಡು ಬಾರಿ ಹರೇಕಳ ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿದ್ದರು. ಅವರ ಪಾರ್ಥಿವ ಶರೀರದ ಮೇಲೆ ದುಡಿವ ಜನರ ಸಂಕೇತವುಳ್ಳ ಕೆಂಬಾವುಟವನ್ನು ಹಾಸಿ ಗೌರವ ಸಲ್ಲಿಸಲಾಯಿತು. ಹರೇಕಳದಲ್ಲಿ ಮುಸ್ಲಿಂ ಯುವಕರು ಎಡಶಕ್ತಿಗಳೊಂದಿಗೆ ಗುರುತಿಸಲ್ಪಡಲು ಮತ್ತು ಅಲ್ಲಿನ ಕೋಮು ಸೌಹಾರ್ದತೆ ಕಾಪಾಡಲು ಹಾಮೀದಾಕನ ಪ್ರಯತ್ನವೂ ಇದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಪಿಶಾಚಿಯ ಆಕ್ರಮಣ–ಹೆಜ್ಜೆ ಹೆಜ್ಜೆಗೂ ಜನರ ಸೆಣಸಾಟ..... ಪುಟ 2 ರಿಂದ

ಸೇದುವ ಪೈಪ್‌ಗಳು, ಗಾಜಿನ ವಸ್ತುಗಳು ಹೀಗೆ ಬಜೆಟ್‌ನಿಂದ ಬಜೆಟ್‌ಗೆ ಹಲ ಹಲವು ವಸ್ತುಗಳ ಮೇಲೆ ತೆರಿಗೆಯನ್ನು ವಿಸ್ತರಿಸುತ್ತಾ ಹೋದರು. ಬಸ್, ರೈಲುಗಳಿಲ್ಲದ ಆ ಸಮಯದಲ್ಲಿ ಕುದುರೆಯ ಕೋಚ್‌ಗಳೇ ಊರಿಂದ ಊರಿಗೆ ಸಂಚಾರದ ಸಾಧನಗಳು. ಅಂತಹ ಕೋಚ್‌ಗಳ ಮೇಲೆ, ಈ ಕೋಚ್‌ಗಳ ಸವಾರರ ಮೇಲೆ ತೆರಿಗೆ ಹಾಕಿದರು.

ಕೋರ್ಟ್‌ಗಳಲ್ಲಿ ನಡೆಯುವ ನ್ಯಾಯ ಪ್ರಕರಣಗಳು, ಭೂ ವ್ಯವಹಾರಗಳ ದಾಖಲಾತಿಗಳ ಮೇಲೆ ಸ್ಟಾಂಪ್ ಶುಲ್ಕ ಹಾಕಲಾಯಿತು. ಅಂದು ಅಪಾರ ಲಾಭ ತರುತ್ತಿದ್ದ ಈಸ್ಟ್ ಇಂಡಿಯಾ ಕಂಪನಿ, ಗುಲಾಮರ ವ್ಯಾಪಾರ ಮಾಡುತ್ತಿದ್ದ ರಾಯಲ್ ಆಫ್ರಿಕನ್ ಕಂಪನಿ, ಅಮೇರಿಕದಲ್ಲಿ ವಸಾಹತು ಸ್ಥಾಪಿಸಲೆಂದೇ ಆರಂಭವಾಗಿದ್ದ ಕಂಪನಿಗಳ ಶೇರುಗಳ ಮೇಲೆ ತೆರಿಗೆ ಹಾಕಲಾಯಿತು.

ಈ ರೀತಿ ಹುಡುಕಿ ಹುಡುಕಿ ಸಾಮಾನ್ಯ ಜನರ ಮೇಲೆ ತೆರಿಗೆ ಹಾಕುತ್ತಾ ಹೋಗುವಾಗ ಜನರ ಹುಟ್ಟು, ಸಾವು, ಮದುವೆಗಳ ಮೇಲೆ ತೆರಿಗೆ ಹೇರಿದರು. ಮದುವೆಯಾದವರ ಮೇಲೆ ಮಾತ್ರ ತೆರಿಗೆ ಹೇರಿ ಬ್ರಹ್ಮಚಾರಿಗಳು, ವಿಧವೆ ವಿಧುರರನ್ನು ಬಿಟ್ಟರೆ ಅನ್ಯಾಯವಲ್ಲವೇ! ಅವರ ಮೇಲೂ ತೆರಿಗೆ ಹೇರಿದರು.

ಗಮನಿಸಿ, ಜನ ಸಾಮಾನ್ಯರ ಮೇಲೆ ಇಷ್ಟೊಂದು ತೆರಿಗೆ ಹೇರಿದರೂ ಶ್ರೀಮಂತರ ಸಂಪತ್ತಿನ ಮೇಲೆ, ವಿಪುಲ ಆದಾಯದ ಮೇಲೆ ತೆರಿಗೆ ಹಾಕುವ ಯೋಚನೆಯೇ ಇನ್ನೂ ಅಂದಿನ ಪ್ರಧಾನಿ, ಅರ್ಥ ಮಂತ್ರಿಗಳು, ಪಾರ್ಲಿಮೆಂಟ್‌ನಲ್ಲಿರುವವರ ತಲೆಗೆ ಬಂದಿರಲಿಲ್ಲ ಎಂಬುದು ಗಮನಾರ್ಹ.

ಜನರ ಬದುಕಿನ ಯಾವ ಅಂಶ, ಅಂಗವನ್ನೂ ಬಿಡದಂತೆ ಯಾವ್ಯಾವುದರ ಮೇಲೆ ತೆರಿಗೆ ಹಾಕಿದರು, ತೆರಿಗೆಯ ಮೇಲೆ ತೆರಿಗೆ, ಯುದ್ಧ ಸಮಯದ ತೆರಿಗೆಗಳು ಈ ತೆರಿಗೆಗಳಿಂದ ಎಷ್ಟು ಆದಾಯ ವಸೂಲಿಯಾಗುತ್ತಿತ್ತು, ಯಾತಕ್ಕಾಗಿ ಈ ಪರಿಯ ತೆರಿಗೆಗಳು, ಈ ತೆರಿಗೆಗಳಿಂದ ಪಡೆದ ಆದಾಯವನ್ನು ಹೇಗೆ ಬಳಸಲಾಯಿತು?

ಒಟ್ಟಾರೆಯಾಗಿ, ಕಂಪನಿಗಳ ಶೇರುಗಳು, ಬ್ಯಾಂಕ್‌ಗಳಲ್ಲಿ ಉಳಿತಾಯ, ಡೆಪಾಸಿಟ್‌ಗಳು, ಸರ್ಕಾರಿ ಬಾಂಡ್‌ಗಳಂತೆ ಈ ತೆರಿಗೆಗಳೂ ಹೇಗೆ ಬಂಡವಾಳ ಸಂಗ್ರಹದ ಮತ್ತೊಂದು ವಿಧಾನವಾಯಿತು? ಜನರ ಬದುಕಿನ ಮೇಲೆ ಈ ತೆರಿಗೆಗಳು ಬೀರಿದ ಪರಿಣಾಮ ಮುಂತಾದವುಗಳ ಬಗ್ಗೆ ಮುಂದಿನ ಲೇಖನದಲ್ಲಿ.

ನೈಜ ಕೈಗಾರಿಕಾ ಬೆಳವಣಿಗೆಗೆ ಒತ್ತು ನೀಡದೇ, ಪ್ರಚಾರಗಿಟ್ಟಿಸುವ

ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ: ಇನ್ವೆಸ್ಟ್ ಕರ್ನಾಟಕ 2025

ಹರ್ಷವರ್ಧನ

ಇತ್ತೀಚಿನ ವರ್ಷಗಳಲ್ಲಿ ದೇಶದ ಬಹುತೇಕ ರಾಜ್ಯಗಳು ದೇಶೀಯ ಮತ್ತು ಪರದೇಶೀಯ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಸಲುವಾಗಿ 'ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ'ಗಳನ್ನು ಆಗಾಗ್ಗೆ ಆಯೋಜಿಸುವುದು ಸಾಮಾನ್ಯವಾಗಿ ಬಿಟ್ಟಿದೆ.

ಕರ್ನಾಟಕ ಸರ್ಕಾರವು ಸಹ ಅಂತಹದೊಂದು ಸಮಾವೇಶವನ್ನು 2000ನೇ ಇಸವಿಯಿಂದೀಚೆಗೆ ಆಗಾಗ್ಗೆ ಆಯೋಜಿಸುತ್ತಾ ಬಂದಿದೆ. ಇತ್ತೀಚೆಗೆ ಫೆಬ್ರುವರಿ 11-14, 2025ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ 100 ಕೋಟಿ ರೂ.ಗಳಿಗೂ ಹೆಚ್ಚು ವೆಚ್ಚದಲ್ಲಿ ಆಯೋಜಿಸಲಾಗಿದ್ದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಒಟ್ಟು 10.27 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆ ಒಪ್ಪಂದವಾಗಿದ್ದು, 6 ಲಕ್ಷ ಜನರಿಗೆ ಉದ್ಯೋಗವಕಾಶ ಸಿಗಲಿದೆ. ಅದರಲ್ಲಿ ಶೇ. 75ರಷ್ಟು ಬೆಂಗಳೂರು ಹೊರತುಪಡಿಸಿ ಮತ್ತು ಶೇ. 45ರಷ್ಟು ಉತ್ತರ ಕರ್ನಾಟಕದಲ್ಲಿ ಬಂಡವಾಳ ಹೂಡಿಕೆಯಾಗಲಿದೆ ಎಂದು ಹೇಳಲಾಗುತ್ತಿದೆ.

ಆದರೆ, ಈ ಕಾರ್ಯಕ್ರಮ ಮತ್ತು ಅಂಕಿಅಂಶಗಳನ್ನು ಮೇಲ್ನೋಟಕ್ಕೆ ನೋಡಿದರೆ, ಇಂತಹ ಕಾರ್ಯಕ್ರಮಗಳು ನಿಜಕ್ಕೂ ಅವಶ್ಯವಿದೆಯೇ ಅಥವಾ ಸರ್ಕಾರವೊಂದರ ಜನಪ್ರಿಯತೆ ಅಥವಾ ಇಮೇಜ್ ಸೃಷ್ಟಿಸಿಕೊಳ್ಳಲು ಕೈಗೊಳ್ಳುವ ಕಸರತ್ತುಗಳೇ ಎಂಬ ಪ್ರಶ್ನೆ ಯಾರಾಲ್ಲಾದರೂ ಮೂಡದೇ ಇರದು.

ಈ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ದೇಶ ವಿದೇಶಗಳ ಪ್ರಮುಖ ನಗರಗಳಲ್ಲಿ ಹೂಡಿಕೆದಾರರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಲು 'ರೋಡ್ ಶೋ'ಗಳನ್ನು ಕೈಗೊಳ್ಳಲಾಗಿದೆ. ತದನಂತರದಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಆಯೋಜನೆ ಮಾಡಲಾಗಿದೆ. ಹೀಗೆ ಆಹ್ವಾನದ ಮೇರೆಗೆ ಸಮಾವೇಶದಲ್ಲಿ ಭಾಗವಹಿಸುವ ಕಾರ್ಪೋರೇಟ್ ಕಂಪನಿಗಳ ಮುಖ್ಯಸ್ಥರುಗಳು ಸರ್ಕಾರದೊಂದಿಗೆ ಹೂಡಿಕೆ ಮಾಡುವುದಕ್ಕಾಗಿ ಒಡಂಬಡಿಕೆ (ಎಂಒಯು)ಗಳಿಗೆ ಸಹಿ ಮಾಡುತ್ತಾರೆ. ಒಡಂಬಡಿಕೆಗಳಿಗೆ ಸಹಿ ಮಾಡಿದ ಕಂಪನಿಗಳು ಮುಂದಿನ 2-3 ವರ್ಷಗಳಲ್ಲಿ ಬಂಡವಾಳ ಹೂಡಿಕೆ ಮಾಡಿ ಕೈಗಾರಿಕೆ ಸ್ಥಾಪನೆ ಮಾಡುತ್ತಾರೆ, ಆ ಮೂಲಕ ಉದ್ಯೋಗಗಳನ್ನು ಸೃಷ್ಟಿಸುತ್ತಾರೆ ಎಂಬ ಅಂತಿಮ ಉದ್ದೇಶ ಈ ಕಾರ್ಯಕ್ರಮದ್ದು. ಸಮಾವೇಶದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆ ಕುರಿತಾದ ವಲಯಗಳೂ ಮತ್ತು ಉದ್ಯೋಗ ಸೃಜನೆಯ ಅವಕಾಶಗಳ ಬಗ್ಗೆ ಕೆಲವು ಗೋಷ್ಠಿಗಳು ನಡೆದವು.

ಈಗಾಗಲೇ ಅನುಮೋದನೆಯಾಗಿರುವ ಪ್ರಸ್ತಾವನೆಗಳನ್ನು ಮತ್ತೆ ಘೋಷಿಸಿರುವುದು:

ಈ ಸಮಾವೇಶದಲ್ಲಿ ಒಟ್ಟು ರೂ. 10.27 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡಲು ಒಡಂಬಡಿಕೆ ಮಾಡಿಕೊಂಡಿರುವ ಪ್ರಸ್ತಾವನೆಗಳ ಪೈಕಿ, ಅಂದಾಜು 4 ಲಕ್ಷ ಕೋಟಿ ರೂ.ಗೂ ಹೆಚ್ಚಿನ ಪ್ರಸ್ತಾವನೆಗಳು ಕಳೆದೆರಡು ವರ್ಷಗಳಲ್ಲಿ ಸರ್ಕಾರ ತನ್ನ ವಿವಿಧ ಅನುಮೋದನೆ ಸಮಿತಿಗಳ ಮೂಲಕ ಅನುಮೋದನೆ ನೀಡಿದ್ದು, ಕೇವಲ ಸಂಖ್ಯೆಗಾಗಿ ಅವುಗಳನ್ನು ಸಹ ಈ ಸಮಾವೇಶದಲ್ಲಿ ಸೇರಿಸಿಕೊಂಡಿದೆ! ಈ ಪರಿಪಾಠ ಕಳೆದ ಬಿಜೆಪಿ ಸರ್ಕಾರ ಆರಂಭಿಸಿದ್ದು ಎನ್ನುವುದನ್ನು ಗಮನಿಸಬೇಕು.

ಈ ಪೈಕಿ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ವಿವಿಧ ಕಂಪನಿಗಳ ಒಟ್ಟು 3.43 ಲಕ್ಷ ಕೋಟಿ ರೂ. ಮೊತ್ತದ ಒಪ್ಪಂದಗಳಿಗೆ ರಾಜ್ಯ ಸರ್ಕಾರದ ಕ್ರೆಡಲ್ ಸಂಸ್ಥೆಯು ಸಹಿ ಹಾಕಿದೆ. ಇದರಿಂದ 78,253 ಮಂದಿಗೆ ಉದ್ಯೋಗಾವಕಾಶ ಸೃಷ್ಟಿಯಾಗಲಿದೆ ಎಂದು ಹೇಳಲಾಗಿದೆ. ನವೀಕರಿಸಬಹುದಾದ ಇಂಧನಗಳ ಪೈಕಿ ಸೋಲಾರ್ ವಿದ್ಯುಚ್ಛಕ್ತಿ ಯೋಜನೆಗಳಿಗೆ ಪ್ರಮುಖವಾಗಿ ಬಂಡವಾಳ ಹೂಡಿಕೆಯಾಗುತ್ತಿರುವುದು ನಿಜವೇ ಆದರೂ, ಹಲವು ಪ್ರಸ್ತಾವನೆಗಳಿಗೆ ಈಗಾಗಲೇ ಅನುಮೋದನೆಯಾಗಿವೆ ಅಥವಾ ಒಡಂಬಡಿಕೆಯನ್ನು ಈಗಾಗಲೇ ಮಾಡಿಕೊಂಡಿವೆ!



ಹೂಡಿಕೆಯ ಅನುಷ್ಠಾನದ ಕುರಿತು ಲೆಕ್ಕಪರಿಶೋಧನೆಯೇ ಇಲ್ಲ

ಕಳೆದ ಎರಡೂವರೆ ದಶಕಗಳಲ್ಲಿ ಇದುವರೆಗೂ ನಡೆದಿರುವ ಇಂತಹ ಹೂಡಿಕೆದಾರರ ಸಮಾವೇಶಗಳಿಂದ, ಹೂಡಿಕೆದಾರರೊಂದಿಗೆ ಮಾಡಿಕೊಂಡ ಒಡಂಬಡಿಕೆಗಳ ಪೈಕಿ ಎಷ್ಟು ಬಂಡವಾಳ ಹೂಡಿಕೆಯಾಗಿದೆ, ಅಂತಹ ಕೈಗಾರಿಕೆಗಳಿಂದ ಎಷ್ಟು ಉದ್ಯೋಗವಕಾಶಗಳು ಸೃಷ್ಟಿಯಾಗಿವೆ ಎಂಬ ಅಂಶಗಳ ಕುರಿತು ಯಾವ ಸರ್ಕಾರವೂ ಲೆಕ್ಕಪರಿಶೋಧನೆ ಮಾಡುವುದಿಲ್ಲ. ಇದರಿಂದಾಗಿ ಕೇವಲ ಪತ್ರಿಕೆ ಮತ್ತು ಮಾಧ್ಯಮಗಳಲ್ಲಿ ಒಡಂಬಡಿಕೆಗಳ ಘೋಷಣೆ ಆಗುತ್ತದೆಯೇ ಹೊರತು ಅದರ ಅನುಷ್ಠಾನದ ಬಗ್ಗೆ, ಒಡಂಬಡಿಕೆಗೂ ಅನುಷ್ಠಾನಕ್ಕೂ ಇರುವ ಅಂತರದ ಬಗ್ಗೆ ಯಾವುದೇ ಪರಾಮರ್ಶೆ ನಡೆಯುವುದಿಲ್ಲ.

ಹಿಂದಿನ ಸಮಾವೇಶಗಳಲ್ಲಿ ಒಡಂಬಡಿಕೆ ಮಾಡಿಕೊಂಡು ಹತ್ತಾರು ಸಾವಿರ ಎಕರೆ ಭೂಮಿ ಹಂಚಿಕೆ ಪಡೆದು ಅನುಷ್ಠಾನವಾಗದೇ ಇರುವ ಹಲವು ಕಂಪನಿಗಳಿವೆ.

ನೈಜ ಕೈಗಾರಿಕಾ ಬೆಳವಣಿಗೆ ಮತ್ತು ಉದ್ಯೋಗ ಸೃಜನೆ

ಕೃಷಿ ರಂಗವು ಜಿಡಿಪಿಗೆ ಕೇವಲ ಶೇ. 20ರಷ್ಟು ಕೊಡುಗೆ ನೀಡುತ್ತಿದ್ದರೂ, ಅದನ್ನು ಅವಲಂಬಿಸಿರುವವರ ಜನ ಸಂಖ್ಯೆ ಶೇ. 60ರಷ್ಟಿದೆ. ಹೀಗಾಗಿ ಆಧುನಿಕ ಕೈಗಾರಿಕಾ ಕ್ರಾಂತಿಯಾಗದೇ, ಉತ್ಪಾದನಾ ವ್ಯವಸ್ಥೆಯನ್ನು ಕ್ರಾಂತಿಕಾರಕವಾಗಿ ಪರಿವರ್ತಿಸದೇ, ದೇಶದ ದೊಡ್ಡ ಸಂಖ್ಯೆಯ ಯುವಜನತೆಗೆ ಉದ್ಯೋಗ ನೀಡುವುದಾಗಲಿ, ಬಡತನ ನಿರ್ಮೂಲನೆ ಮಾಡುವುದಾಗಲಿ ಸಾಧ್ಯವಿಲ್ಲ.

ಕಳೆದ 35 ವರ್ಷಗಳಿಂದ ದೇಶದಲ್ಲಿ ಜಾರಿಗೊಳಿಸುತ್ತಿರುವ ನವ-ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳು ಕೈಗಾರೀಕರಣವನ್ನು ವಿಸ್ತರಿಸುವಲ್ಲಿ, ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ, ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವಲ್ಲಿ ಅದರ ಹಿಂದಿನ ದಶಕಗಳಿಗೆ ಹೋಲಿಸಿದರೆ ಕುಂಠಿತವಾಗಿದೆ ಎಂದು ಅಧ್ಯಯನಗಳು ತೋರಿಸಿಕೊಟ್ಟಿವೆ. ವಾಸ್ತವವಾಗಿ ಉದ್ಯೋಗ-ನಷ್ಟದ ಆರ್ಥಿಕ ಬೆಳವಣಿಗೆಯ ಪಥದಲ್ಲಿ ದೇಶ ಸಾಗುತ್ತಿದೆ ಎಂದು ಹೇಳಲಾಗುತ್ತಿದೆ.

ಇತ್ತೀಚಿನ ದಶಕಗಳಲ್ಲಿ ಕೃತಕ ಬುದ್ಧಿಮತ್ತೆ, ತಂತ್ರಜ್ಞಾನ ಬಳಕೆ ಇತ್ಯಾದಿಗಳಿಂದಲೂ ವ್ಯಾಪಕವಾಗಿ ಉದ್ಯೋಗ ನಷ್ಟವಾಗುತ್ತಿದೆ. ಇ-ಕಾಮರ್ಸ್ ವಹಿವಾಟು ನಡೆಸುವ ವೇದಿಕೆಗಳಿಂದಾಗಿ ಲಕ್ಷಾಂತರ ಕಿರಾಣಿ ಅಂಗಡಿಗಳು ಮುಚ್ಚಿಹೋಗಿದ್ದು ಉದ್ಯೋಗ ನಷ್ಟವಾಗಿದೆ.

ಹಳೆಯ ಮೈಸೂರು ರಾಜ್ಯವು ಕೈಗಾರೀಕರಣದಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲಿಯೂ ಸಾರ್ವಜನಿಕ ಉದ್ದಿಮೆಗಳ ಬೆಳವಣಿಗೆಗೆ ಒತ್ತು ನೀಡಿದ್ದರಿಂದ ಇಂದಿಗೂ ಕರ್ನಾಟಕ ರಾಜ್ಯವು ಉನ್ನತ ಶಿಕ್ಷಣ, ಇಂಜಿನೀಯರಿಂಗ್ ಕೈಗಾರಿಕೆಗಳು, ಸಂಶೋಧನಾ ಸಂಸ್ಥೆಗಳ ಸ್ಥಾಪನೆಯಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಆದರೆ, ಉತ್ಪಾದನಾ ಕೈಗಾರಿಕೆಗಳ ನೆಲೆ ಮತ್ತು ವ್ಯಾಪ್ತಿ ಮಾತ್ರ ವಿಸ್ತರಣೆಯಾಗಿಲ್ಲ, ಪ್ರಾದೇಶಿಕ ಅಸಮತೋಲನ ನಿವಾರಣೆಯಲ್ಲಿ ಪ್ರಗತಿಯಾಗಿಲ್ಲ.

ಕೈಗಾರಿಕೆಗಳ ಬೆಳವಣಿಗೆಯಲ್ಲಿ ಈಗಲೂ ಹಿಂದೆ!

ರಾಜ್ಯವು ರೂಪಿಸಿರುವ ಕಳೆದ 30 ವರ್ಷಗಳ ಕೈಗಾರಿಕಾ ನೀತಿಗಳು, ರಾಜ್ಯದ ದೇಶೀಯ ಆಂತರಿಕ ಉತ್ಪನ್ನದಲ್ಲಿ (ಜಿಡಿಪಿ) ಕೈಗಾರಿಕೆಗಳ ಕೊಡುಗೆಯನ್ನು ಶೇ. 20ಕ್ಕಿಂತ ಹೆಚ್ಚಿಸಲು ಗುರಿ ಹಾಕಿಕೊಂಡಿವೆ. ಆದರೂ ಅದು ಶೇ. 25ರ ಆಸುಪಾಸಿನಲ್ಲಿಯೇ ಇದೆ! ರಾಷ್ಟ್ರಮಟ್ಟದಲ್ಲಿಯೂ ಇದೇ ಪರಿಸ್ಥಿತಿ ಇದೆ. ನಮ್ಮ ದೇಶ ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ಭಾರತವು ಹೊಂದಿದ್ದ ಪ್ರಮಾಣದಲ್ಲಿಯೇ ದೇಶೀಯ ಆಂತರಿಕ ಉತ್ಪನ್ನದಲ್ಲಿ (ಜಿಡಿಪಿ) ಕೈಗಾರಿಕೆಗಳ ಕೊಡುಗೆಯ ಪ್ರಮಾಣವನ್ನು ಹೊಂದಿದ್ದ ದೇಶಗಳು ಇಂದು ನಮಗಿಂತ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಕೈಗಾರಿಕೆಗಳ ಬಲವನ್ನು ಹೆಚ್ಚಿಸಿಕೊಂಡಿವೆ: ಭಾರತ (ಶೇ.27), ಚೀನಾ (ಶೇ.47), ಇಂಡೋನೇಷ್ಯಾ (ಶೇ.47), ದಕ್ಷಿಣ ಕೊರಿಯಾ (ಶೇ.39), ಮಲೇಷ್ಯಾ (ಶೇ.44), ಥೈಲ್ಯಾಂಡ್ (ಶೇ.45).

ಈ ಸಮಾವೇಶದಲ್ಲಿ ಇಂತಹ ನೈಜ ಪ್ರಶ್ನೆಗಳ ಕುರಿತು ಚರ್ಚೆಯಾಗಲೀ, ಅವಲೋಕನವಾಗಲೀ ಊಹಿಸುವುದು ಅಸಾಧ್ಯ.

ವ್ಯಾಪಾರ ಸುಗಮಗೊಳಿಸಲು ಸುಧಾರಣೆಗಳು (Ease of Doing Business) ಮತ್ತು ಕಾರ್ಮಿಕ ಕಾನೂನಿನ ಸಡಿಲತೆಗಳು:

ವ್ಯಾಪಾರ ಪ್ರಕ್ರಿಯೆ ಅಥವಾ ಕೈಗಾರಿಕೆ ಸ್ಥಾಪಿಸುವಲ್ಲಿ ಇರುವ ಅನಗತ್ಯ ಕಾನೂನಿನ ಅಡೆತಡೆಗಳನ್ನು ನಿವಾರಣೆ ಮಾಡುವುದು ಆ ಮೂಲಕ ಕೈಗಾರಿಕೆಗಳನ್ನು ಸ್ಥಾಪಿಸುವುದು ಅತ್ಯವಶ್ಯ. ಆದರೆ, ವ್ಯಾಪಾರ ಸುಗಮಗೊಳಿಸಲು ಕೈಗೊಳ್ಳಲಾಗುತ್ತಿರುವ ಸುಧಾರಣೆಗಳು ವಿಶ್ವಬ್ಯಾಂಕ್ ಪ್ರೇರೇಪಿತ ಸುಧಾರಣೆಗಳಾಗಿದ್ದು, ಕಾರ್ಮಿಕ ಕಾನೂನನ್ನು ವ್ಯಾಪಕವಾಗಿ ಸಡಿಲಗೊಳಿಸುತ್ತಿವೆ. ಹಲವು ಕಾನೂನುಗಳಲ್ಲಿ ಇರುವ ಕೆಲವು ಅಂಶಗಳನ್ನು ಉಲ್ಲಂಘನೆ ಮಾಡಿದಲ್ಲಿ ಅಪರಾಧವೆಂದು ಪರಿಗಣಿಸಿ ಶಿಕ್ಷಿಸುವ ಅಂಶಗಳಿವೆ. ಇದನ್ನು Decriminalize (ಅಪರಾಧೀಯ ಅಲ್ಲವೆಂದು ಪರಿಗಣಿಸುವುದು) ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸರ್ಕಾರವು ಸಮಾವೇಶದಲ್ಲಿ ಘೋಷಿಸಿದ್ದಕ್ಕೆ ಬಂಡವಾಳಗಾರರು ಜೈಕಾರ ಹಾಕಿದ್ದಾರೆ. ಈ ಕುರಿತು ಸಾರ್ವಜನಿಕ ಚರ್ಚೆಯಿಲ್ಲದೇ ಮಾಡುತ್ತಿರುವುದು ಶೋಚನೀಯ.

ಸಾರ್ವಜನಿಕ ಉದ್ದಿಮೆಗಳು ಯಾವುದೇ ದೇಶದ ಬೆಳವಣಿಗೆಯ ಇಂಜಿನ್ ಆದಾಗ ಮಾತ್ರ ಸಮಾಜದ ಎಲ್ಲ ವರ್ಗದವರಿಗೂ ಕೈಗಾರಿಕಾ ಬೆಳವಣಿಗೆಯ ಪ್ರಯೋಜನಗಳು ಲಭಿಸುತ್ತವೆ. ಆದರೆ, ಸಾರ್ವಜನಿಕ ಉದ್ದಿಮೆಗಳ ಬೆಳವಣಿಗೆ ಕುರಿತು ಚರ್ಚೆಯೇ ಆಗುತ್ತಿಲ್ಲ.

ಜಾಗತಿಕ ಹಣಕಾಸು ಬಂಡವಾಳದ ತಾಳಕ್ಕೆ ತಕ್ಕಂತೆ ಕುಣಿಯುವ ಆರ್ಥಿಕ ನೀತಿಗಳಿಗೆ ಅಂಟಿಕೊಂಡಿರುವ ಭಾರತದಂತಹ ದೇಶಗಳಲ್ಲಿ ವ್ಯಾಪಾರ ಸುಗಮಗೊಳಿಸುವ ಸುಧಾರಣೆಗಳ ಹೆಸರಿನಲ್ಲಿ ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸುವುದು, ಉದ್ಯೋಗ ಸೃಜಿಸುವ ನೆಪದಲ್ಲಿ ಅದಕ್ಕೆ ಯಾವುದೇ ಷರತ್ತುಗಳನ್ನು ವಿಧಿಸದೇ ರಾಜ್ಯದ ಸಂಪನ್ಮೂಲಗಳಾದ ಕೈಗಾರಿಕಾ ಭೂಮಿ, ವಿದ್ಯುತ್, ನೀರು, ಇತ್ಯಾದಿಯ ಜೊತೆಗೆ ಹೆಚ್ಚೆಚ್ಚು ತೆರಿಗೆ ವಿನಾಯಿತಿ, ಸಬ್ಸಿಡಿ ಪ್ರೋತ್ಸಾಹಗಳನ್ನು ನೀಡಲು ವಿವಿಧ ರಾಜ್ಯಗಳ ನಡುವೆ ಪೈಪೋಟಿ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರದ ಗೃಹ ಮಂತ್ರಿಯವರಾದ ಶ್ರೀ ರಾಜನಾಥ್ ಸಿಂಗ್ ಮತ್ತು ಇನ್ನಿತರ 3-4 ಕೇಂದ್ರ ಮಂತ್ರಿಗಳಿಗೆ ತಮಗಿಂತ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆಯೆಂದು ಮುನಿಸಿಕೊಂಡು ಕಾಂಗ್ರೆಸ್ ಪಕ್ಷದ ಮುಖಂಡರಾದ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಉದ್ಘಾಟನೆ ಕಾರ್ಯಕ್ರಮಕ್ಕೆ ಬರಲಿಲ್ಲವೆಂದು ಸುದ್ದಿಯಾಗಿತ್ತು.



ನೈಜ ಜನಪರ ಮಾದರಿಯ ಕೈಗಾರಿಕಾಭಿವೃದ್ಧಿ ನೀತಿಗಳ ಬಗ್ಗೆ ಆಲೋಚಿಸದೇ ನವ ಉದಾರವಾದಿ ನೀತಿಗಳಿಗೇ ಅಂಟಿಕೊಂಡಲ್ಲಿ ಕೇವಲ ಹುಸಿ ಕೈಗಾರಿಕಾ ಬೆಳವಣಿಗೆಯ ಕಾರ್ಯಕ್ರಮಗಳನ್ನು ಪ್ರಚಾರಗಿಟ್ಟಿಸಲು ಹೇಗೆ ಮಾಡಬಹುದೆಂಬುದಕ್ಕೆ ಇಂತಹ ಸಮಾವೇಶಗಳು ಸಾಕ್ಷಿಯಷ್ಟೇ.

ಮಾರ್ಕ್ಸ್ ರವರ 142 ನೆಯ ಸ್ಮರಣೆ

ಜಿ.ಎನ್. ನಾಗರಾಜ್

ಮಾರ್ಚ್ 14 ಮಾರ್ಕ್ಸ್ ರವರ 142ನೆಯ ಸ್ಮರಣೆಯ ದಿನ. (5 ಮೇ 1818–14, ಮಾರ್ಚ್ 1883). ಇಡೀ ಮಾನವ ಸಮಾಜವನ್ನು –ಕ್ರಾಂತಿಕಾರಿ ಬದಲಾವಣೆ, ರಾಜಕೀಯ, ಅರ್ಥಶಾಸ್ತ್ರ, ತತ್ವಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ಮಾನವ ಶಾಸ್ತ್ರ, ಮನಶಾಸ್ತ್ರ, ಗಣಿತ, ವಿಜ್ಞಾನ, ಸಾಹಿತ್ಯ, ಕಲೆ, ಸಿನಿಮಾ ಮೊದಲಾದ ಅದರ ಎಲ್ಲ ಆಯಾಮಗಳಲ್ಲಿ ಪ್ರಭಾವಿಸಿದ ಮಾರ್ಕ್ಸ್‌ರವರಂತಹ ಅಸಾಮಾನ್ಯ ಪ್ರತಿಭೆಯನ್ನು ವಿಶ್ವ ಮರೆಯಲಾಗದು. ಮರೆಯಬೇಕೆಂದವರೂ ಅನಿವಾರ್ಯವಾಗಿ ಮತ್ತೆ ಮತ್ತೆ ನೆನೆಸಿಕೊಳ್ಳಲೇಬೇಕಾಗಿದೆ. ಅವರ ನೆನಪನ್ನು ಅಳಿಸಿ ಹಾಕಲೆಂದೇ ಅರ್ಥಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ತತ್ವಶಾಸ್ತ್ರ, ಸಾಹಿತ್ಯ, ರಾಜಕೀಯ ಶಾಸ್ತ್ರಗಳಲ್ಲಿ ಹೊಸ ಹೊಸ ಮಾರ್ಕ್ಸ್‌ವಾದ ವಿರೋಧಿ ಸಿದ್ಧಾಂತಗಳನ್ನು ನೂರಾರು ಮಹಾ ಪ್ರಾಧ್ಯಾಪಕರುಗಳು ಶ್ರಮಿಸಿದ್ದಾರೆ, ಇನ್ನೂ ಶ್ರಮಿಸುತ್ತಿದ್ದಾರೆ. ಅವರ ಪುಸ್ತಕಗಳು ಪುಸ್ತಕ ಭಂಡಾರಗಳಲ್ಲಿ ಕಣ್ಣಿಗೆ ಬೀಳಬಾರದೆಂದು, ಅವರ ಹೆಸರು ಪತ್ರಿಕೆಗಳಲ್ಲಿ ಕಾಣಬಾರದೆಂದು ವಿಶ್ವದಾದ್ಯಂತ ಸೆನ್ಸಾರ್‌ಗಳು ಕುತಂತ್ರಗಳು ನಡೆಯುತ್ತಿವೆ. ಆದರೂ ಮಾರ್ಕ್ಸ್‌ವಾದ ತನ್ನ ಒಳಗಿನ ಪ್ರಖರ ವೈಜ್ಞಾನಿಕತೆ, ವೈಚಾರಿಕತೆಯಿಂದ ಹಬ್ಬುತ್ತಲೇ ಇದೆ.

ತತ್ವಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯ, ವಿಜ್ಞಾನ, ಸಾಹಿತ್ಯ, ಕಲೆ, ಹೀಗೆ ಮೇಲೆ ಹೇಳಿದ ಎಲ್ಲ ಜ್ಞಾನ ತುತ್ತಾಗಿದೆ. ಪರಿಣಾಮವಾಗಿ ಮನುಷ್ಯರ ವ್ಯಕ್ತಿತ್ವವೇ ವಿಭಜನೆಗೆ ಒಳಗಾಗಿದೆ. ಒಡೆದ ಕನ್ನಡಿಯಂತಾಗಿದೆ. ಅದರಿಂದಾಗಿ ಮಾನವ ಸಮಾಜವನ್ನು ವಿರೂಪಗೊಳಿಸಿದ ಮೂಲಭೂತ ಕಾರಣ ಶೋಷಣೆಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು, ಈ ಶೋಷಣೆಯನ್ನು ದಿನನಿತ್ಯ ಅನುಭವಿಸುತ್ತಾ ಸಂಕಟಪಡುವವರಿಗೂ ದೊಡ್ಡ ಅಡ್ಡಿಯನ್ನು ಉಂಟುಮಾಡಿದೆ. ಡಾರ್ವಿನ್ನರ ವಿಕಾಸವಾದ, ನ್ಯೂಟನ್ನನ ನಿಯಮಗಳು, ಗುರುತ್ವಾಕರ್ಷಣೆಯ ತತ್ವ, ಐನ್‌ಸ್ಟೀನರ ಸಾಪೇಕ್ಷತಾವಾದಗಳು ಹೇಗೆ ಜಗತ್ತಿನ ಎಲ್ಲರೂ ಅಧ್ಯಯನ ಮಾಡುತ್ತಿದ್ದಾರೋ, ಅವುಗಳನ್ನು ತಮ್ಮದೇ ಸಂಶೋಧನೆಗಳನ್ನು ಮುಂದುವರೆಸಿ ಬೆಳೆಸುತ್ತಿರುವರೋ, ಅದೇ ರೀತಿ ಮಾರ್ಕ್ಸ್‌ರವರು ಎಂಗೆಲ್ಸ್‌ರವರ ಜೊತೆಗೂಡಿ ರೂಪಿಸಿದ ಮಾರ್ಕ್ಸ್‌ವಾದವನ್ನೂ ಜಗತ್ತಿನೆಲ್ಲ ಜನರು ಅಧ್ಯಯನ ಮಾಡಲೇಬೇಕಾಗುತ್ತದೆ. ಅದರ ಮೂಲಕ ಜಗತ್ತನ್ನು ಶೋಷಣೆ ರಹಿತವಾದ ಹೊಸ ಸಮಾಜವನ್ನು ರೂಪಿಸುತ್ತಾರೆ. ಮನುಷ್ಯರ ವ್ಯಕ್ತಿತ್ವದ ಬೆಳವಣಿಗೆಗೆ ಕಲ್ಲುಬಂಡೆಯಂತೆ ಅಡ್ಡಿಯಾಗಿರುವ ಸಾಮಾಜಿಕ, ಆರ್ಥಿಕ ಅಡ್ಡಿಗಳನ್ನೂ ತೊಡೆದು ಸ್ವಾರ್ಥ, ಅಸೂಯೆ, ದುರಾಸೆಗಳನ್ನು ದೂರ ಇಟ್ಟ ಹೊಸ ಮಾನವರನ್ನು ರೂಪಿಸುತ್ತದೆ.

ಮಾರ್ಕ್ಸ್, ಎಂಗೆಲ್ಸ್ ಪದೇ ಪದೇ ಹೇಳಿದಂತೆ ಮಾರ್ಕ್ಸ್‌ವಾದ ರೂಪುಗೊಂಡದ್ದು ಇಡೀ ವಿಭಾಗಗಳನ್ನೂ ಒಗ್ಗೂಡಿಸಿ, ಐಕ್ಯಗೊಳಿಸಿ, ಅದಕ್ಕೊಂದು ಹೊಸ ಹೊಳಪನ್ನು, ವಿಶ್ವವನ್ನು ಅರಿಯುವ ಪ್ರಖರ ಸಾಮರ್ಥ್ಯವನ್ನು ಮಾರ್ಕ್ಸ್–ಎಂಗೆಲ್ಸ್ ರವರು ನೀಡಿದರು. ಇಂತಹ ಪ್ರಖರತೆಯ ಮೂಲ ಕಾರಣ ಮತ್ತು ಅಡಿಪಾಯವೇ ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರ ನಿರಂತರ ಅಧ್ಯಯನ, ವೈವಿಧ್ಯಮಯವಾದ ಹತ್ತಾರು ಸಾವಿರ ಗ್ರಂಥಗಳ, ಪ್ರಬಂಧಗಳ ಅಧ್ಯಯನ ಮಾತ್ರವಲ್ಲದೆ ನಿರಂತರವಾದ ಕ್ರಿಯಾಶೀಲತೆ. 1848ರಲ್ಲಿ ಯುರೋಪಿನ ಹಲವು ದೇಶಗಳಲ್ಲಿ ವ್ಯಾಪಿಸಿದ ಕ್ರಾಂತಿಗಳಲ್ಲಿ ನೇರವಾಗಿ ಭಾಗವಹಿಸಿದರು. ಕಮ್ಯುನಿಸ್ಟ್ ಲೀಗ್‌ನ ಭಾಗವಾದರು. ಅದಕ್ಕೊಂದು ಹೊಸ ವೈಚಾರಿಕತೆಯನ್ನು, ಹೊಸ ರೂಪವನ್ನು ನೀಡಿದರು. ಸ್ವತಃ ವಿಶ್ವದ ಮೊತ್ತ ಮೊದಲ ಕಾರ್ಮಿಕ ಅಂತರರಾಷ್ಟ್ರೀಯವನ್ನು ಕಟ್ಟಿದರು. ಕ್ರಾಂತಿಕಾರಿ ವೈಚಾರಿಕತೆ ಮತ್ತು ಕಾರ್ಮಿಕ ಚಳುವಳಿಯನ್ನು ವಿಶ್ವಾದ್ಯಂತ ಹಬ್ಬಿಸಲು ಶ್ರಮಿಸಿದರು. ಕಾರ್ಮಿಕರನ್ನು, ಜನರನ್ನು ತಪ್ಪುದಾರಿಗೆಳೆಯುತ್ತಿದ್ದ, ವೈಜ್ಞಾನಿಕ ಸಿದ್ಧಾಂತದ ವಿರುದ್ಧವಾದ ಎಲ್ಲ ವಿಚಾರಗಳ ವಿರುದ್ಧ ಹೋರಾಡುತ್ತಾ ಮಾರ್ಕ್ಸ್‌ವಾದವನ್ನು ರೂಪಿಸಿದರು. ಹೀಗೆ ತತ್ವ ಮತ್ತು ಕ್ರಿಯೆಯ ಏಕತ್ವವೇ ಮಾರ್ಕ್ಸ್‌ವಾದದ ಅಡಿಪಾಯವಾಯಿತು.



ಬಂಡವಾಳಶಾಹಿಗಳು ಒಂದೊಂದು ರೀತಿಯ ಜ್ಞಾನವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವ ವಿಧಾನವನ್ನು ಈ ಸಮಾಜದ ಮೇಲೆ ಹೇರಿದ್ದಾರೆ. ವಿಜ್ಞಾನ ಬೇರೆ, ಸಮಾಜವಿಜ್ಞಾನ ಬೇರೆ, ಸಾಹಿತ್ಯವಂತೂ ಇನ್ನೂ ಬೇರೆ. ವಿಜ್ಞಾನಿಗಳಿಗೆ ತಾವು ಬೆಳೆದು ಬಂದ ಸಮಾಜ, ಅದರ ಇತಿಹಾಸದ ಅರಿವೇ ಇಲ್ಲದಂತಾಗಿದೆ. ಇದರಿಂದಾಗಿ ವಿಜ್ಞಾನ ತಂತ್ರಜ್ಞಾನ ಪದವೀಧರರು ವಿಶ್ವಾದ್ಯಂತ ಫ್ಯಾಸಿಸಮ್ ಬೆಂಬಲಿಗರಾಗುತ್ತಿದ್ದಾರೆ. ನಮ್ಮ ದೇಶದಲ್ಲಿ ಮೋದಿಯ ಮಬ್ಬಕ್ತರಾಗಿದ್ದಾರೆ. ವಿಜ್ಞಾನಗಳ ಒಳಗೂ ವಿಭಜನೆ. ಹೀಗಾಗಿ ಜ್ಞಾನ ತನ್ನ ಪ್ರಖರತೆಯ, ಸರ್ವವ್ಯಾಪಿತ್ವಕ್ಕೆ ಆಧಾರವಾದ ಸಮಗ್ರತೆಯನ್ನು ಕಳೆದುಕೊಂಡು ವಿಭಜನೆಗೆ ಮಾನವ ಸಮಾಜದ ಜ್ಞಾನ ಸಂಪಾದನೆ ಮತ್ತು ಅದನ್ನು ವಾಸ್ತವಗೊಳಿಸುವ ಕ್ರಿಯೆಗಳ ಹೆದ್ದಾರಿಯಲ್ಲಿ. ಅದನ್ನು ಆಯಾ ದೇಶಗಳ ವಿಶಿಷ್ಟ ಪರಿಸ್ಥಿತಿ, ಸಮಾಜಕ್ಕೆ ಅನ್ವಯಿಸಿ ಕ್ರಿಯೆಗಿಳಿಸಬೇಕು. ಬೃಹತ್ ಅಣೆಕಟ್ಟುಗಳನ್ನು ಕಟ್ಟುವ ಮೂಲಭೂತ ತತ್ವಗಳು ಒಂದೇ ಇದ್ದರೂ ಕನ್ನಂಬಾಡಿ, ತುಂಗಭದ್ರಾ, ಭಾಕ್ರಾನಂಗಲ್ ಅಣೆಕಟ್ಟುಗಳನ್ನು ಕಟ್ಟಿದ ವಿಧಾನ, ರೀತಿ ಒಂದೇ ಅಲ್ಲ. ಅದೇ ರೀತಿ ವೈದ್ಯಕೀಯ ವಿಜ್ಞಾನ, ಒಂದು ರೋಗದ ಮೂಲಭೂತ ಕಾರಣ, ಚಿಕಿತ್ಸಾ ವಿಧಾನ ಒಂದೇ ಆದರೂ ಅದನ್ನು ವಿವಿಧ ದೇಶಗಳ ಪ್ರದೇಶಗಳ ಮನುಷ್ಯರ ದೈಹಿಕ ಬೆಳವಣಿಗೆ, ದಾರ್ಢ್ಯತೆ, ವಾತಾವರಣ ಇವುಗಳಿಗೆ ಅನ್ವಯಿಸಿ ಮಾರ್ಪಾಡುಗಳನ್ನು ಮಾಡಿಕೊಳ್ಳಲೇಬೇಕಾಗುತ್ತದೆ. ಹೀಗೆ ಅನ್ವಯಿಸುವ ದಾರಿಯಲ್ಲಿ ಆಯಾ ತಂತ್ರಜ್ಞಾನ, ವಿಜ್ಞಾನಗಳು ಬೆಳೆಯುತ್ತವೆ. ಹಾಗೆಯೇ ಮಾರ್ಕ್ಸ್‌ವಾದವನ್ನೂ ಭಾರತಕ್ಕೆ, ಕರ್ನಾಟಕಕ್ಕೆ, ವಿವಿಧ ಪ್ರದೇಶಗಳ ವಿಶಿಷ್ಟ ಪರಿಸ್ಥಿತಿಗೆ ಅನ್ವಯಿಸಿ ವಾಸ್ತವಗೊಳಿಸಬೇಕಾಗುತ್ತದೆ, ಬೆಳೆಸಬೇಕಾಗುತ್ತದೆ.

ಮಾರ್ಕ್ಸ್‌ವಾದದ ಮೂಲಭೂತ ಅರಿವನ್ನು– ತತ್ವಶಾಸ್ತ್ರ, ಅರ್ಥಶಾಸ್ತ್ರ, ಕ್ರಾಂತಿಕಾರಿ ರಾಜಕೀಯದ ಅರಿವನ್ನು ಭಾರತದ ತತ್ವಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ, ರಾಜಕೀಯದ ಅಧ್ಯಯನದ ಜೊತೆಗೆ ಮೇಳೈಸಬೇಕಾಗಿದೆ. ಇಲ್ಲಿಯ ಪರಿಸ್ಥಿತಿಗೆ ಅನುಗುಣವಾಗಿ ಇಲ್ಲಿಯ ಜನರಿಗೆ ವಿವರಿಸಿ ಜನರನ್ನು ಮಾರ್ಕ್ಸ್‌ವಾದದತ್ತ, ಕ್ರಾಂತಿಕಾರಿ ಬದಲಾವಣೆಯತ್ತ ಸೆಳೆಯಬೇಕಾಗಿದೆ. ಲೆನಿನ್, ಮಾವೋ, ಹೊಚಿಮಿನ್, ಕ್ಯಾಸ್ಟ್ರೋ ರಂತಹ ನಾಯಕರು ಮಹಾನ್ ಆಗಿದ್ದು, ಕೋಟ್ಯಾಂತರ ಜನರನ್ನು ಶೋಷಣೆಯಿಂದ ವಿಮೋಚನೆಗೊಳಿಸಿದ್ದು ಇದೇ ದಾರಿಯಲ್ಲಿ. ಮಾರ್ಕ್ಸ್‌ರವರ ಸ್ಮರಣೆಯ ಈ ದಿನ ಈ ಮುಖ್ಯ ಅಂಶವನ್ನು ಮನಸ್ಸಿಗೆ ತಂದುಕೊಳ್ಳೋಣ. ಮಾರ್ಕ್ಸ್‌ವಾದ ಮತ್ತು ಭಾರತ, ಕರ್ನಾಟಕದ ಪರಿಸ್ಥಿತಿಗಳ ಅಧ್ಯಯನವನ್ನು ಬೆಸೆಯೋಣ.

ನೌಕರರ ಹಕ್ಕುಗಳನ್ನು ರಕ್ಷಿಸುವುದು ಇಂದಿನ ಅಗತ್ಯ-ರಾಜ್ಯಸಭೆಯಲ್ಲಿ ಎ.ಎ. ರಹೀಮ್

ನೌಕರರ ಹಕ್ಕುಗಳನ್ನು ರಕ್ಷಿಸುವುದು ಇಂದಿನ ಅಗತ್ಯವಾಗಿದೆ ಎಂದು ಭಾರತ ಕಮ್ಯುನಿಸ್ಟ್ ಪಕ್ಷ–ಮಾರ್ಕ್ಸ್‌ವಾದಿಯ ರಾಜ್ಯಸಭಾ ಸದಸ್ಯ ಎ.ಎ. ರಹೀಮ್ ಹೇಳಿದ್ದಾರೆ. ಅವರು 2025 ಮಾರ್ಚ್ 12ರಂದು ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಮಾತನಾಡಿದರು. ಅವರ ಮಾತುಗಳು ಹೀಗಿವೆ:



ನೌಕರರ ಹಕ್ಕುಗಳನ್ನು ರಕ್ಷಿಸುವುದು ಮತ್ತು ಸುಸ್ಥಿರ ಕೆಲಸದ ಸಂಸ್ಕೃತಿಯನ್ನು ಉತ್ತೇಜಿಸುವುದು ಇಂದಿನ ಅಗತ್ಯವಾಗಿದೆ. ದೇಶದ ಪ್ರಸ್ತುತ ಉದ್ಯೋಗ ಪರಿಸ್ಥಿತಿ ಮತ್ತು ಯುವಜನರ ಜೀವನ ಪರಿಸ್ಥಿತಿಗಳ ಬಗ್ಗೆ ನಾನು ಮಾತನಾಡಲು ಬಯಸುತ್ತೇನೆ. ನವ ಉದಾರವಾದಿ ನೀತಿಗಳ ಪರಿಣಾಮವಾಗಿ ಭಾರತೀಯ ಉದ್ಯೋಗ ಮಾರುಕಟ್ಟೆಯ ಸ್ವರೂಪವು ವೇಗವಾಗಿ ಬದಲಾಗಿದೆ ಎಂದು ನಮಗೆ ತಿಳಿದಿದೆ. ಸರ್ಕಾರ ಶಾಶ್ವತ ಉದ್ಯೋಗಾವಕಾಶಗಳನ್ನು ಖಚಿತಪಡಿಸಿಕೊಳ್ಳುವಲ್ಲಿ ವಿಫಲವಾಗಿದೆ. ಖಾಸಗೀಕರಣ, ಗುತ್ತಿಗೆ ಮತ್ತು ಕೆಲಸದ ಹೊರಗುತ್ತಿಗೆ ಹೊಸ ಸವಾಲುಗಳನ್ನು ಸೃಷ್ಟಿಸಿವೆ.

ಅತಿಯಾದ ಕೆಲಸದಿಂದ ಉಂಟಾಗುವ ಸಾವುಗಳಲ್ಲಿ ಭಾರತ ಮುಂಚೂಣಿಯಲ್ಲಿದೆ

ಈ ಸದನದಲ್ಲಿ ಕೆಲವು ಪ್ರಮುಖ ಮತ್ತು ಅಪಾಯಕಾರಿ ದತ್ತಾಂಶಗಳನ್ನು ನಾನು ಗಮನಸೆಳೆಯಲು ಬಯಸುತ್ತೇನೆ. 'ವಿಶ್ವದಾದ್ಯಂತ ಕೆಲಸದ ಸಮಯ ಮತ್ತು ಕೆಲಸದ–ಜೀವನ ಸಮತೋಲನ' ಎಂಬ ಶೀರ್ಷಿಕೆಯ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಬಿಡುಗಡೆ ಮಾಡಿದ ವರದಿಯ ಪ್ರಕಾರ, ಭಾರತದಲ್ಲಿ ಶೇಕಡಾ 51 ರಷ್ಟು ಉದ್ಯೋಗಿಗಳು ವಾರಕ್ಕೆ 49 ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡುತ್ತಾರೆ. ಇದು ದೇಶವನ್ನು ಅತಿ ಹೆಚ್ಚು ಕೆಲಸದ ಸಮಯವನ್ನು ಹೊಂದಿರುವ ಪ್ರಮುಖ ದೇಶಗಳಲ್ಲಿ ಒಂದನ್ನಾಗಿ ಮಾಡಿದೆ. ಇದಲ್ಲದೆ, ದೀರ್ಘಾವಧಿಯ ಕೆಲಸದ ಸಮಯದಿಂದ ಉಂಟಾಗುವ ಸಾವುಗಳ ಸಂಖ್ಯೆಯಲ್ಲಿ ಭಾರತವು ಮುಂಚೂಣಿಯಲ್ಲಿದೆ. ವಿಶ್ವ ಆರೋಗ್ಯ ಸಂಸ್ಥೆ ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಜಂಟಿ ಅಧ್ಯಯನವು ದೀರ್ಘ ಕೆಲಸದ ಸಮಯವು ಪಾರ್ಶ್ವವಾಯುವಿನಿಂದ ಸಾವಿನ ಅಪಾಯವನ್ನು ಶೇಕಡಾ 35ರಷ್ಟು ಮತ್ತು ಹೃದಯ ಸಂಭಂದಿ ಕಾಯಿಲೆಯ ಅಪಾಯವನ್ನು ಶೇಕಡಾ 17ರಷ್ಟು ಹೆಚ್ಚಿಸುತ್ತದೆ ಎಂದು ತೋರಿಸುತ್ತದೆ.

ಇಂತಹ ಆಘಾತಕಾರಿ ದತ್ತಾಂಶದ ಬೆಳಕಿನಲ್ಲಿ, ಬಾಧಿತರಾದ ಒಬ್ಬ ವ್ಯಕ್ತಿಯ ಹೆಸರನ್ನು ನಾನು ಉಲ್ಲೇಖಿಸಲು ಬಯಸುತ್ತೇನೆ. ಅವರು ಬೇರೆ ಯಾರೂ ಅಲ್ಲ, ಬಹುರಾಷ್ಟ್ರೀಯ ಕಂಪನಿ Ernst & Young ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಕೇರಳದ ಯುವತಿ ಅನ್ನಾ ಸೆಬಾಸ್ಟಿಯನ್. ಕೆಲಸಕ್ಕೆ ಸಂಬಂಧಿಸಿದ ಒತ್ತಡದಿಂದಾಗಿ ಅವರು ಪ್ರಾಣ ಕಳೆದುಕೊಂಡರು. ಈ ರೀತಿ ಪರಿಣಾಮ ಬೀರಿದವರು ಅವರು ಒಬ್ಬರೇ ಅಲ್ಲ.

90 ಪ್ರತಿಶತ ಉದ್ಯೋಗಿಗಳು ಒತ್ತಡದ ಸ್ಥಿತಿಯಲ್ಲಿದ್ದಾರೆ

'1to1Help' ಸಂಸ್ಥೆ ಬಿಡುಗಡೆ ಮಾಡಿದ ವರದಿಯಲ್ಲಿ ಹೀಗೆ ಹೇಳಲಾಗಿದೆ, ಜನವರಿ 2024ರಿಂದ ನವೆಂಬರ್ 2024ರವರೆಗೆ 83,000 ಕ್ಕೂ ಹೆಚ್ಚು ಸಮಾಲೋಚನಾ ಅವಧಿಗಳು, 12,000 ಸ್ಕ್ರೀನಿಂಗ್‌ಗಳು ಮತ್ತು 42,000 ಮೌಲ್ಯಮಾಪನಗಳಿಂದ ಪಡೆದ ಡೇಟಾವನ್ನು ವಿಶ್ಲೇಷಿಸಿದಾಗ, 25 ವರ್ಷಕ್ಕಿಂತ ಕಡಿಮೆ ವಯಸ್ಸಿನ ಕಂಪನಿ ಉದ್ಯೋಗಿಗಳಲ್ಲಿ 90 ಪ್ರತಿಶತದಷ್ಟು ಜನರು ಒತ್ತಡದಿಂದ ಬಳಲುತ್ತಿದ್ದಾರೆ ಎಂದು ಅದು ಹೇಳುತ್ತದೆ. ಈ ದುರ್ಬಲ ಯುವಕರನ್ನು ರಕ್ಷಿಸಲು ಸರ್ಕಾರ ಮುಂದೆ ಬರಬೇಕೆಂದು ನಾನು ಒತ್ತಾಯಿಸುತ್ತೇನೆ.

ಹೋಳಿಯನ್ನು ಶಾಂತಿಯುತವಾಗಿ ಆಚರಿಸಲು ಅನುವಾಗುವಂತೆ ಕೇಂದ್ರ ಸರಕಾರ ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕು

ಹೋಳಿ ಹಬ್ಬದ ಆಚರಣೆ ಮತ್ತು ರಂಜಾನ್ ಸಮಯದ ಶುಕ್ರವಾರದ ಪ್ರಾರ್ಥನೆ ಎರಡೂ ಒಟ್ಟಿಗೇ ಬಂದಿವೆ. ಹೋಳಿ ಹಬ್ಬದ ಆಚರಣೆಯ ಕುರಿತು ಉತ್ತರ ಪ್ರದೇಶ, ಬಿಹಾರ ಮತ್ತು ಮಧ್ಯಪ್ರದೇಶದ ಸಚಿವರು ಮತ್ತು ಶಾಸಕರು ಸೇರಿದಂತೆ ವಿವಿಧ ಬಿಜೆಪಿ ನಾಯಕರು ಪ್ರಚೋದನಕಾರಿ ಟಪ್ಪಣಿಗಳನ್ನು ನೀಡಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಆದಿತ್ಯನಾಥ್ ಕೂಡ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲಾಗುವುದು ಎಂದು ಭರವಸೆ ನೀಡುವ ಬದಲು, ಈ ವಿಷಯದ ಬಗ್ಗೆ ಮುಸ್ಲಿಮರನ್ನು ಕೆಣಕಿದ್ದಾರೆ ಮತ್ತು ಬೆದರಿಕೆ ಹಾಕಿದ್ದಾರೆ.

ಉದ್ವಿಗ್ನತೆಯನ್ನು ಸೃಷ್ಟಿಸುವುದು ಮತ್ತು ಮುಸ್ಲಿಂ ಸಮುದಾಯವನ್ನು ಹೆದರಿಸುವುದು ಇಂತಹ ಟಿಪ್ಪಣಿಗಳ ಆಶಯ ಎಂದು ಅಭಿಪ್ರಾಯಪಟ್ಟಿರುವ ಪೊಲಿಟ್‌ಬ್ಯುರೊ, ಹೋಳಿಯನ್ನು ಶಾಂತಿಯುತವಾಗಿ ಆಚರಿಸುವಂತೆ ನೋಡಿಕೊಳ್ಳಲು ಕೇಂದ್ರವು ವಿಶೇಷ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ ಮತ್ತು ಯಾವುದೇ ಪ್ರಚೋದನೆಗೆ ಬಲಿಯಾಗಬಾರದು ಎಂದು ಎಲ್ಲಾ ಸಮುದಾಯಗಳ ಜನರಿಗೆ ಮನವಿ ಮಾಡಿದೆ.

ಮಾರ್ಚ್ 11 ಮತ್ತು 12, 2025ರಂದು ನವದೆಹಲಿಯಲ್ಲಿ ನಡೆದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಭೆಯ ನಂತರ ನೀಡಿರುವ ಹೇಳಿಕೆಯಲ್ಲಿ ಈ ಮನವಿಯನ್ನು ಮಾಡಿದೆ.

ಕ್ಷೇತ್ರ ಮರುವಿಂಗಡಣೆ: ಒಮ್ಮತಕ್ಕೆ ಬರಬೇಕು

2026ರ ನಂತರ ನಡೆಸಲಿರುವ ಜನಗಣತಿಯ ನಂತರ ಸಂಸದೀಯ ಮತ್ತು ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆಯು ನಡೆಯಲಿದೆ. ಇತ್ತೀಚಿನ ಜನಸಂಖ್ಯಾ ಅಂಕಿಅಂಶಗಳ ಆಧಾರದ ಮೇಲೆ ಕ್ಷೇತ್ರ ಮರುವಿಂಗಡಣೆ ನಡೆದರೆ, ಅದು ಸಂಸತ್ತಿನಲ್ಲಿ ದಕ್ಷಿಣ ರಾಜ್ಯಗಳ ರಾಜಕೀಯ ಪ್ರಾತಿನಿಧ್ಯದಲ್ಲಿ ಇಳಿಕೆಗೆ ಕಾರಣವಾಗುತ್ತದೆ. ಅಂತಹ ಕಡಿತವು ರಾಜಕೀಯವಾಗಿ ಮತ್ತು ಪ್ರಜಾಸತ್ತಾತ್ಮಕವಾಗಿ ಅನ್ಯಾಯವಾಗುತ್ತದೆ ಮತ್ತು ಒಕ್ಕೂಟ ತತ್ವವನ್ನು ಹಾಳು ಮಾಡುತ್ತದೆ.

ಕ್ಷೇತ್ರ ಮರುವಿಂಗಡಣೆ ವಿಷಯದ ಬಗ್ಗೆ ಒಮ್ಮತಕ್ಕೆ ಬರಬೇಕು ಎಂಬುದು ತನ್ನ ಅಭಿಪ್ರಾಯವಾಗಿದ್ದು, ಇದರಿಂದಾಗಿ ಯಾವುದೇ ರಾಜ್ಯಕ್ಕೆ ತನ್ನ ಪಾಲಿನ

ಪುಟ 10 ಕ್ಕೆ

ಅಮೆರಿಕದ ತೆರಿಗೆ ಏರಿಕೆಗೆ ಮೋದಿ ಸರಕಾರದ ಅಂಜುಬುರುಕ ಪ್ರತಿಕ್ರಿಯೆ

ಪ್ರಕಾಶ್ ಕಾರತ್

ಅಮೆರಿಕದ ವಾಣಿಜ್ಯ ನೀತಿಗಳ ಲಾಭ ಪಡೆಯುತ್ತಿವೆ ಎಂದು ಭಾವಿಸಿರುವ ದೇಶಗಳ ಮೇಲೆ ತೆರಿಗೆಗಳನ್ನು (ಟ್ಯಾರಿಫ್) ಹೇರುವುದಾಗಿ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಅಮೆರಿಕ ಸಂಸತ್‌ನಲ್ಲಿ (ಕಾಂಗ್ರೆಸ್) ಮಾಡಿದ ಮೊದಲ ಭಾಷಣದಲ್ಲಿ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ್ದರು. ಅವರ ಪಟ್ಟಿಯಲ್ಲಿ ಕೆನಡಾ, ಚೀನಾ, ಮೆಕ್ಸಿಕೋ, ಬ್ರೆಜಿಲ್ ಮತ್ತು ಐರೋಪ್ಯ ಒಕ್ಕೂಟದ ಜತೆ ಭಾರತವೂ ಇದೆ. ಅಮೆರಿಕದ ಉತ್ಪನ್ನಗಳ ಮೇಲೆ ಮಿತಿಮೀರಿದ ತೆರಿಗೆ ಹೇರುವ ದೇಶ ಭಾರತ ಎಂದು ಟ್ರಂಪ್ ಪದೇ ಪದೇ ಹೇಳುತ್ತಿದ್ದಾರೆ. ಭಾರತ 'ಟ್ಯಾರಿಫ್ ದೊರೆ' ಎಂದೂ ಅವರು ಕರೆದಿದ್ದಾರೆ. ಏಪ್ರಿಲ್ 2ರಿಂದ 'ಪ್ರತಿಸುಂಕ' (ರೆಸಿಪ್ರೋಕಲ್ ಟ್ಯಾರಿಫ್) ಹೇರುವುದಾಗಿಯೂ ಟ್ರಂಪ್ ಬೆದರಿಕೆ ಹಾಕಿದ್ದಾರೆ.

ಕೆನಡಾದಿಂದ ಆಮದು ಮಾಡಿಕೊಳ್ಳುವ ಸ್ಟೀಲ್ ಮತ್ತು ಅಲ್ಯುಮಿನಿಯಂ ಉತ್ಪನ್ನಗಳ ಮೇಲೆ ಅಮೆರಿಕ ಹೆಚ್ಚುವರಿ 25 ಶೇಕಡ ಟ್ಯಾರಿಫ್‌ಅನ್ನು ಹೇರಿದೆ. ಮೆಕ್ಸಿಕೋ ಮತ್ತು ಚೀನಾಕ್ಕೆ ರಫ್ತು ಮಾಡುವ ಹಲವು ಸರಕುಗಳ ಮೇಲೆಯೂ ಈ ರೀತಿ ತೆರಿಗೆ ವಿಧಿಸಿದೆ. ಅಮೆರಿಕದ ಈ ಕ್ರಮಗಳಿಂದ ಸಂತ್ರಸ್ತವಾದ ದೇಶಗಳು ಬಲವಾದ ಪ್ರತಿರೋಧವನ್ನು ದಾಖಲಿಸಿವೆ. ಹಿಂದೆ ಅಮೆರಿಕದೊಂದಿಗೆ ಮಾಡಿಕೊಂಡಿದ್ದ ಬಹುಮುಖಿ ವಾಣಿಜ್ಯ ಒಡಂಬಡಿಕೆಗಳು ಮತ್ತು ವಿಶ್ವ ವಾಣಿಜ್ಯ ಸಂಸ್ಥೆ (ಡಬ್ಲ್ಯುಟಿಒ) ನಿಯಮಗಳನ್ನು ಅದು ಉಲ್ಲಂಘಿಸುತ್ತವೆ ಎನ್ನುವ ಕಾರಣಕ್ಕೆ ಅಮೆರಿಕದ ನಡೆಗೆ ಸಂತ್ರಸ್ತ ದೇಶಗಳಿಂದ ಭಾರಿ ವಿರೋಧ ವ್ಯಕ್ತವಾಗಿದೆ. ಅಮೆರಿಕದ ಕ್ರಮಕ್ಕೆ ಪ್ರತಿಯಾಗಿ ಅದರ ಉತ್ಪನ್ನಗಳ ಮೇಲೆ ಮೆಕ್ಸಿಕೋ ಮತ್ತು ಚೀನಾ ಪ್ರತೀಕಾರದ ಸುಂಕ ಹೇರಿವೆ. ಅದೇ ರೀತಿ ಮಾಡುವುದಾಗಿ ಕೆನಡಾ ಕೂಡ ಪ್ರಕಟಿಸಿದೆ.

ಪೇಲವ ಪ್ರತಿಕ್ರಿಯೆ

ಈ ದೇಶಗಳಂತಲ್ಲದೆ ಭಾರತ ಸರ್ಕಾರದ ಪ್ರತಿಕ್ರಿಯೆಯು ತೀರಾ ಪೇಲವವಾಗಿದೆ.

'ಅಮೆರಿಕದ ಉತ್ಪನ್ನಗಳ ಮೇಲಿನ ಟ್ಯಾರಿಫ್‌ಅನ್ನು ಗಣನೀಯವಾಗಿ ಇಳಿಸಲು' ಭಾರತ ಒಪ್ಪಿದೆ ಎಂದು ಅಧ್ಯಕ್ಷ ಟ್ರಂಪ್ ಹೇಳಿಕೊಂಡರೂ ಭಾರತ ಸರ್ಕಾರ ಅದಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಈ ಸಂಬಂಧ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿರುವ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ, 'ಟ್ಯಾರಿಫ್ ಉದಾರೀಕರಣವು ಭಾರತದ ವಾಣಿಜ್ಯ ಒಡಂಬಡಿಕೆಗಳ ಭಾಗವಾಗಿದೆ' ಎಂದು ಹೇಳಿದ್ದಾರೆ. ರಾಜತಾಂತ್ರಿಕ ಪರಿಭಾಷೆಗೆ ಹೊರತಾದ ಈ ಮಾತು, ಅಮೆರಿಕದ ಒತ್ತಡಕ್ಕೆ ಭಾರತ ಬಲಿಯಾಗಿರುವುದನ್ನು ಸೂಚಿಸುತ್ತದೆ. ಹಾರ್ಲೆ-ಡೇವಿಡ್ಸನ್ ಮೋಟರ್‌ಸೈಕಲ್‌ಗಳು, ಬರ್ಬೋನ್ ವಿಸ್ಕಿ, ಎಲೆಕ್ಟ್ರಿಕ್ ವಾಹನಗಳು (ಇವಿ), ವೈನ್‌ಗಳು ಮತ್ತು ಇತರ ಹಲವು ಉತ್ಪನ್ನಗಳ ಮೇಲಿನ ಸುಂಕವನ್ನು ಇಳಿಸಿರುವ ಕೇಂದ್ರ ಬಜೆಟ್, ಭಾರತದ ಶರಣಾಗತಿಯ ಪಕ್ಷಿನೋಟವನ್ನು ಒದಗಿಸುತ್ತದೆ.

ಟ್ರಂಪ್ ಮರು ಆಯ್ಕೆ ಆದ ನಂತರ ಅವರನ್ನು ಅಭಿನಂದಿಸಲು ಧಾವಿಸಿದ ಕೆಲವೇ ವಿದೇಶಿ ಮುಖಂಡರಲ್ಲಿ ಮೋದಿ ಕೂಡ ಒಬ್ಬರು. ಈ ಭೇಟಿಯು ಮೋದಿ ನಾಯಕತ್ವಕ್ಕೆ ಸಂದ ಮಾನ್ಯತೆಯೆಂದು ಬಿಜೆಪಿ ಮತ್ತು ಅದರ ಮಾಧ್ಯಮ ಮಿತ್ರರು ಬಿಂಬಿಸಿದರು. ಆದರೆ, ಟ್ರಂಪ್‌ರ ಮುಖಸ್ತುತಿಯ ಹಿಂದೆ ಮೋದಿಯ ಕೈತಿರುಚುವ ತಂತ್ರ ಅಡಗಿದ್ದು ಅದಕ್ಕೆ ಮೋದಿ ಈಡಾಗಿದ್ದಾರೆ. ಜಂಟಿ ಮಾಧ್ಯಮಗೋಷ್ಠಿಯಲ್ಲಿ, ಅಮೆರಿಕದ ಸರಕುಗಳ ಮೇಲೆ ಭಾರತದ ಸುಂಕದ ಬಗ್ಗೆ ಟ್ರಂಪ್ ಟೀಕಾ ಪ್ರಹಾರ ಮುಂದುವರಿಸಿದ್ದರು. ಆದರೆ ಮೋದಿ ಅದನ್ನೆಲ್ಲ ಕೇಳಿಸಿಕೊಂಡು ಜಾಣ ಕಿವುಡರಾಗಿ ಕುಳಿತುಕೊಂಡಿದ್ದರು. 'ಸಮಗ್ರ ದ್ವಿಪಕ್ಷೀಯ ವಾಣಿಜ್ಯ ಒಪ್ಪಂದ' ರೂಪಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಜಂಟಿ ಹೇಳಿಕೆಯಲ್ಲಿ ನಮೂದಿಸಿರುವುದೇ ಸಮಾಧಾನದ ವಿಚಾರ ಎಂದು ಭಾರತ ಸರಕಾರ ಹೇಳಿಕೊಳ್ಳುತ್ತಿದೆ. ದ್ವಿಪಕ್ಷೀಯ ವಾಣಿಜ್ಯ ಒಪ್ಪಂದ (ಬಿಟಿಎ) ಕುರಿತ ಸಂಧಾನದಿಂದಾಗಿ ಅಮೆರಿಕದ ಸುಂಕಗಳಿಂದ ಭಾರತ ತಪ್ಪಿಸಿಕೊಳ್ಳಬಹುದು ಎಂದು ಬಿಜೆಪಿ ಸರಕಾರ ಭಾವಿಸಿದೆ.

ಅಮೆರಿಕದ ವಾಣಿಜ್ಯ ಕಾರ್ಯದರ್ಶಿ (ಸಚಿವ) ಹೊವಾರ್ಡ್ ಲುಟ್ನಿಕ್ ಇತ್ತೀಚೆಗೆ ಮಾಧ್ಯಮದೊಂದಿಗೆ ನಡೆಸಿದ ಸಂವಾದದಲ್ಲಿ ಪ್ರಸ್ತಾಪಿತ ದ್ವಿಪಕ್ಷೀಯ ವಾಣಿಜ್ಯ ಒಪ್ಪಂದದ ಸ್ವರೂಪವನ್ನು ಬಹಿರಂಗಪಡಿಸಿದ್ದರು. ವಾಣಿಜ್ಯದಲ್ಲಿ 'ಭಾರಿ ದೊಡ್ಡದನ್ನೇ' ಸಾಧಿಸುವ ಗುರಿಯನ್ನು ಅಮೆರಿಕ ಇಟ್ಟುಕೊಳ್ಳಬೇಕು ಎಂದಿದ್ದ ಲುಟ್ನಿಕ್, 'ಒಂದೊಂದೇ ಸರಕಿನ' ಬಗ್ಗೆ ಒಪ್ಪಂದ ಮಾಡಿಕೊಳ್ಳಬಾರದು, 'ಇಡಿಯಾಗಿ ಒಪ್ಪಂದ' ರೂಪಿಸಬೇಕು ಎಂದು ಹೇಳಿದ್ದರು. ಅಸ್ಪಷ್ಟತೆಯನ್ನು ನಿವಾರಿಸುವ ಸಲುವಾಗಿ, 'ಭಾರತ ತನ್ನ ಕೃಷಿ ಮಾರುಕಟ್ಟೆಯನ್ನು ಮುಕ್ತಗೊಳಿಸಬೇಕೆನ್ನುವುದು' ಅಮೆರಿಕದ ಬಯಕೆಯಾಗಿದೆ ಎಂದವರು ಸ್ಪಷ್ಟವಾಗಿ ಹೇಳಿದ್ದರು. ಬಿಟಿಎ ಮೂಲಕ ಅಮೆರಿಕ ಟ್ಯಾರಿಫ್ ರಿಯಾಯಿತಿಯನ್ನು ಬಯಸುವುದು ಮಾತ್ರವಲ್ಲದೆ ಕೃಷಿ ಸಬ್ಸಿಡಿಗಳಲ್ಲಿ ಕಡಿತ, ಸರಕಾರಿ ಖರೀದಿಯನ್ನು ಅಮೆರಿಕನ್ ಕಂಪನಿಗಳಿಗೆ ಮುಕ್ತಗೊಳಿಸುವುದು, ಅಮೆರಿಕದ ಔಷಧ ಕಂಪನಿಗಳಿಗೆ ಲಾಭವಾಗುವಂತೆ ಪೇಟೆಂಟ್ ಕಾನೂನುಗಳನ್ನು ತಿದ್ದುಪಡಿ ಮಾಡುವುದು ಮತ್ತು ಯಾವುದೇ ನಿರ್ಬಂಧವಿಲ್ಲದೆ ದತ್ತಾಂಶಗಳು (ಡೇಟಾ) ಹರಿದುಬರಲು ಅವಕಾಶ ಕಲ್ಪಿಸುವುದು ಸೇರಿದಂತೆ ವಿಸ್ತೃತವಾದ ಬದಲಾವಣೆಗಳನ್ನು ಮಾಡುವಂತೆ ಒತ್ತಾಯಿಸುತ್ತಿದೆ. ಭಾರತದ ವಾಣಿಜ್ಯ ಸಚಿವರೊಂದಿಗೆ ಅಮೆರಿಕದಲ್ಲಿ ಸಭೆ ನಡೆಸಿದ ನಂತರ ಲುಟ್ನಿಕ್ ಈ ಹೇಳಿಕೆ ನೀಡಿದ್ದಾರೆನ್ನುವುದು ಗಮನಾರ್ಹವಾಗಿದೆ.

ಬಿಟಿಎ ಮೂಲಕ ಭಾರತದ ಕೃಷಿ ಕ್ಷೇತ್ರವನ್ನು ಅಮೆರಿಕಕ್ಕೆ ಮುಕ್ತಗೊಳಿಸುವುದು ಹಾಗೂ ಟ್ಯಾರಿಫ್‌ಗಳನ್ನು ಕಡಿಮೆಗೊಳಿಸುವುದರಿಂದ ದೇಶದ ಮೇಲೆ ವಿನಾಶಕಾರಿ ಪರಿಣಾಮ ಉಂಟಾಗುತ್ತದೆ. ನಮ್ಮ ಸುಮಾರು 70 ಕೋಟಿ ಜನರು ಜೀವನೋಪಾಯಕ್ಕೆ ಕೃಷಿಯನ್ನು ಅವಲಂಬಿಸಿದ್ದಾರೆ. ಅಮೆರಿಕದ ಕೃಷಿ ಉತ್ಪನ್ನಗಳು ರಿಯಾಯಿತಿಗಳ ಮೂಲಕ ಭಾರತೀಯ ಮಾರುಕಟ್ಟೆಗೆ ಬರಲು ಬಿಟ್ಟರೆ ಈಗಾಗಲೇ ದೀರ್ಘಕಾಲಿನ ಕೃಷಿ ಬಿಕ್ಕಟ್ಟಿನಿಂದ ನಲುಗುತ್ತಿರುವ ದೊಡ್ಡ ಸಂಖ್ಯೆಯ ನಮ್ಮ ಜನರಿಗೆ ವಿನಾಶ ಕಟ್ಟಿಟ್ಟ ಬುತ್ತಿಯಾಗಲಿದೆ.

ಅದೇ ರೀತಿ, ಭಾರತದ ಪೇಟೆಂಟ್ ಕಾನೂನುಗಳನ್ನು ದುರ್ಬಲಗೊಳಿಸಿದರೆ ದೇಶೀಯ ಕೈಗಾರಿಕೆ, ಅದರಲ್ಲೂ ಮುಖ್ಯವಾಗಿ ಔಷಧಿ ಕೈಗಾರಿಕೆಗೆ ದೊಡ್ಡ ಹೊಡೆತ ಬೀಳುತ್ತದೆ. ಅಮೆರಿಕ ಮಾರುಕಟ್ಟೆಯಲ್ಲಿನ ದುಬಾರಿ ದರಕ್ಕೆ ಹೋಲಿಸಿದರೆ ಕೈಗೆಟಕುವ ದರದಲ್ಲಿ ಒದಗಿಸುವ ಔಷಧಿಗಳನ್ನು ಭಾರತೀಯ ಕಂಪನಿಗಳು ಉತ್ಪಾದಿಸುತ್ತವೆ. ಎಲೆಕ್ಟ್ರಿಕ್ ವಾಹನಗಳ ಟ್ಯಾರಿಫ್‌ಗಳನ್ನು ತಗ್ಗಿಸುವುದು, ಟ್ರಂಪ್‌ರ ಬಲಗೈ ಬಂಟ ಎಲಾನ್ ಮಸ್ಕ್‌ರ ಕಂಪನಿ ಉತ್ಪಾದಿಸುವ ಟೆಸ್ಲಾ ಆಟೋಮೊಬೈಲ್‌ಗಳು ಭಾರತ ಪ್ರವೇಶಿಸುವುದಕ್ಕೆ ಅನುಕೂಲ ಮಾಡುವ ಹುನ್ನಾರವಾಗಿದೆ.

ಪದೇ ಪದೇ ಕ್ಷಮೆ ಕೋರಿಕೆ

ಭಾರತೀಯ ಸರಕಾರ ಅಮೆರಿಕದ ಜತೆ ಪದೇ ಪದೇ ಕ್ಷಮೆ ಕೋರುವ ಹಾಗೂ ಒತ್ತಡ ತಂತ್ರಗಳಿಗೆ ಬಲಿಯಾಗುವ ಒಂದೇ ಬಗೆಯ ವಿಧಾನ ಪುನರಾವರ್ತನೆಯಾಗುತ್ತಿದೆ. ಭಾರತೀಯ ಅಕ್ರಮ ವಲಸೆಗಾರರ ಮೊದಲ ತಂಡವನ್ನು ಕೋಳ ತೊಡಿಸಿ ಹಾಗೂ ಕೆಟ್ಟದಾಗಿ ನಡೆಸಿಕೊಂಡು ಮಿಲಿಟರಿ ವಿಮಾನದಲ್ಲಿ ಅಮೆರಿಕ ವಾಪಸ್ ಕಳಿಸಿದಾಗ, 'ಮಹಿಳೆಯರು ಮತ್ತು ಮಕ್ಕಳನ್ನು' ಈ ರೀತಿಯಾಗಿ ನಡೆಸಿಕೊಂಡಿಲ್ಲ ಎಂದು ವಿದೇಶಾಂಗ ಸಚಿವರು ಸುಳ್ಳು ಸುಳ್ಳೇ ಹೇಳಿದ್ದರು. ಕೈಕೋಳ ಹಾಗೂ ಕಾಲುಗಳಿಗೆ ಸಂಕೋಲೆ ಹಾಕುವುದು 'ಪ್ರಮಾಣಿತ ಕಾರ್ಯಾಚರಣೆ ನಿಯಮವಾಗಿದೆ' ಎಂದು ಎಸ್. ಜೈಶಂಕರ್ ನಾಚಿಕೆಯಿಲ್ಲದೆ ಅಮೆರಿಕದ ಕ್ರಮವನ್ನು ಸಮರ್ಥಿಸಿ ಕೊಂಡಿದ್ದರು. ಸಾರ್ವಜನಿಕ ಆಕ್ರೋಶ ಸ್ಫೋಟಗೊಂಡ ನಂತರವಷ್ಟೇ ಈ ವಿಚಾರವನ್ನು ಅಮೆರಿಕ ಆಡಳಿತದ ಗಮನಕ್ಕೆ ತರುವುದಾಗಿ ಸರಕಾರ ತನ್ನ ವಕ್ತಾರರ ಮೂಲಕ ತುಂಬಾ ಕ್ಷೀಣ ದನಿಯ ಹೇಳಿಕೆಯನ್ನು ಬಿಡುಗಡೆ ಮಾಡಿತ್ತು. ವಲಸಿಗರನ್ನು ನಡೆಸಿಕೊಂಡ ರೀತಿಯನ್ನು ಸರಕಾರ ಖಂಡಿಸಬಹುದು ಅಥವಾ ಪ್ರತಿಭಟನೆಯನ್ನು ದಾಖಲಿಸಬಹುದೆಂಬ ಸಹಜ ನಿರೀಕ್ಷೆ ಹುಸಿಯಾಯಿತು.

ಬಿಜೆಪಿ ಸರಕಾರದ ಶರಣಾಗುವ ಧೋರಣೆಗೆ ವ್ಯತಿರಿಕ್ತವಾಗಿ ಮೆಕ್ಸಿಕೋ ಮತ್ತು ಕೊಲಂಬಿಯಾದಂಥ ಸಣ್ಣ ದೇಶಗಳು, ತಮ್ಮ ಪ್ರಜೆಗಳನ್ನು ಅಮೆರಿಕ ಇದೇ ರೀತಿ ನಡೆಸಿಕೊಂಡಿದ್ದನ್ನು ಬಲವಾಗಿ ಪ್ರತಿಭಟಿಸಿವೆ. ಉದಾಹರಣೆಗೆ, ಕೊಲಂಬಿಯಾ ತನ್ನ ಪ್ರಜೆಗಳನ್ನು ವಾಪಸ್ ಕರೆದೊಯ್ಯಲು ತನ್ನದೇ ವಿಮಾನಗಳನ್ನು ಕಳಿಸಿಕೊಟ್ಟಿತ್ತು. ಮಾತ್ರವಲ್ಲದೆ, ಅಮೆರಿಕದ ಮಿಲಿಟರಿ ವಿಮಾನಗಳು ತನ್ನ ದೇಶದೊಳಗೆ ಪ್ರವೇಶಿಸುವುದಕ್ಕೆ ಅವಕಾಶ ನಿರಾಕರಿಸಿತ್ತು.

ಟ್ಯಾರಿಫ್‌ಗಳ ವಿಚಾರದಲ್ಲಿ ಕೂಡ ಬಿಜೆಪಿ ಸರಕಾರ ಬಹಳ ದಯನೀಯವಾಗಿ ನಡೆದು ಕೊಂಡಿದೆ. ವಿದೇಶಾಂಗ ಸಚಿವರು ಲಂಡನ್ ಭೇಟಿ ವೇಳೆ ಅಮೆರಿಕದ ಬಹು-ಧ್ರುವೀಯ ನಡೆಗಳು ಭಾರತದ ಹಿತಾಸಕ್ತಿಗಳಿಗೆ ಅನುಗುಣವಾಗಿವೆ ಎಂದು ಹೇಳಿದ್ದರು. ಟ್ಯಾರಿಫ್ ಕುರಿತು ಪ್ರಶ್ನೆ ಕೇಳಿದಾಗಲೂ ಪ್ರಸ್ತಾಪಿತ ಬಿಟಿಎ ವಿಚಾರ ಹೇಳಿ ಗಮನವನ್ನು ಬೇರೆಡೆ ಸೆಳೆದು ಮೂಲ ವಿಚಾರವನ್ನು ಮರೆ ಮಾಚಿದರು.


ಅಮೆರಿಕವನ್ನು ಮೆಚ್ಚಿಸಲು ಎಷ್ಟು ಬೇಕಾದರೂ ಹಿಂದೆ ಬಗ್ಗುತ್ತೇವೆ ಎನ್ನುವುದನ್ನು ಬಿಜೆಪಿ ಸಚಿವರುಗಳ ಹೇಳಿಕೆಗಳು ಮತ್ತು ಕ್ರಮಗಳು ಸುಸ್ಪಷ್ಟವಾಗಿ ತೋರಿಸಿವೆ. ಕೃಷಿಯಂಥ ಭಾರತದ ಪ್ರಮುಖ ಹಿತಾಸಕ್ತಿಗಳನ್ನು ಕೂಡ ತ್ಯಾಗ ಮಾಡುವ ಸಹಿತ ಯಾವುದೇ ಬೆಲೆಯನ್ನು ತೆರುತ್ತಿರುವಂತೆ ಕಾಣಿಸುತ್ತದೆ. ಈ ವರ್ಷದ ಅಂತ್ಯದಲ್ಲಿ ಭಾರತದ ಆತಿಥ್ಯದಲ್ಲಿ ನಡೆಯಲಿರುವ ಕ್ವಾಡ್ ಶೃಂಗಸಭೆಯಲ್ಲಿ ಭಾಗವಹಿಸಲು ಟ್ರಂಪ್ ಆಗಮಿಸುವ ಮುನ್ನ ಅವರನ್ನು ಓಲೈಸಲು ವಾಣಿಜ್ಯ ಒಪ್ಪಂದವೊಂದನ್ನು ಅಂತಿಮಗೊಳಿಸಲು ಸರಕಾರ ಶ್ರಮಿಸುತ್ತಿದೆ. 'ಕ್ವಾಡ್ ಉದ್ಯಮ ಪಾಲುದಾರಿಕೆಯ' (ಶೇರ್ಡ್ ಎಂಟರ್‌ಪ್ರೈಸ್) ಭಾಗವಾಗಬೇಕೆಂಬ ಕಾತರದಲ್ಲಿ ಬಿಜೆಪಿ ಸರಕಾರವು ಭಾರತದ ಸ್ವಾವಲಂಬನೆ ಮತ್ತು ರಾಷ್ಟ್ರೀಯ ಸಾರ್ವಭೌಮತ್ವದೊಂದಿಗೆ ರಾಜಿ ಮಾಡಿಕೊಳ್ಳುತ್ತಿದೆ. ಇದಕ್ಕೆ ಯಾವ ಕಾರಣಕ್ಕೂ ಅವಕಾಶ ನೀಡಬಾರದು.

ಅಮೆರಿಕ ಸಾಮ್ರಾಜ್ಯಶಾಹಿಗೆ ಮೋದಿ ಸರಕಾರದ ಶರಣಾಗತಿಯನ್ನು ಬಹಿರಂಗಗೊಳಿಸುವುದು ಮತ್ತು ಜನರನ್ನು ದೊಡ್ಡ ಪ್ರಮಾಣದಲ್ಲಿ ಅಣಿನೆರೆಯಿಸುವುದು ಅನಿವಾರ್ಯವಾಗಿದೆ. ನಮ್ಮ ದೇಶದ ಭವಿಷ್ಯದ ಪ್ರಗತಿ ಮತ್ತು ಸಾರ್ವಭೌಮತ್ವ ಅಪಾಯದಲ್ಲಿದೆ.

ಅನು: ವಿಶ್ವಾಸ್



ಕೃಪೆ: ಪಿ.ಮಹಮ್ಮದ್



ಕೃಪೆ: ಪೊನ್ನಪ್ಪ, ದಿ ಫೆಡರಲ್.ಕಾಂ.



ಕೃಪೆ: ಸಜೀತ್ ಕುಮಾರ್

"ನಾವು ಕಾರ್ಪೊರೇಟ್ ಗುಲಾಮರಲ್ಲ" - "ನಾವು ಕಾರ್ಮಿಕರು, ನಾವು ಜ್ವಾಲೆ!"
"ಆರೋಗ್ಯಕರ ಕೆಲಸ-ಜೀವನ ಸಮತೋಲನ ಪ್ರತಿಯೊಬ್ಬ ಉದ್ಯೋಗಿಯ ಹಕ್ಕು"

ಹೋರಾಟಕ್ಕಿಳಿದ ಬೆಂಗಳೂರಿನ ಐಟಿ ಉದ್ಯೋಗಿಗಳು

700ಕ್ಕೂ ಹೆಚ್ಚು ಐಟಿ ಮತ್ತು ಐಟಿಇಎಸ್ ಉದ್ಯೋಗಿಗಳು ಭಾಗವಹಿಸಿದ್ದ ಈ ಪ್ರತಿಭಟನಾ ಸಮಾವೇಶದಲ್ಲಿ, ಆರೋಗ್ಯಕರ ಕೆಲಸ–ಜೀವನ ಸಮತೋಲನದ ಹಕ್ಕನ್ನು ರಕ್ಷಿಸಲು ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿದರು.

KITU ಪ್ರಧಾನ ಕಾರ್ಯದರ್ಶಿ ಸುಹಾಸ್ ಅಡಿಗ ಮಾತನಾಡಿ, ಐಟಿ ಕ್ಷೇತ್ರದಲ್ಲಿ ಉದ್ಯೋಗಿಗಳ ಮೂಲಭೂತ ಹಕ್ಕು ಮತ್ತು ವೈಯಕ್ತಿಕ ಜೀವನದ ಹಕ್ಕುಗಳು ನಿರಂತರವಾಗಿ ಅಪಾಯಕ್ಕೆ ಒಳಗಾಗುತ್ತಿವೆ, ಇದು ಐಟಿ ಕ್ಷೇತ್ರದಲ್ಲಿ ವಿಷಕಾರಿ ಕೆಲಸದ ಸಂಸ್ಕೃತಿಯನ್ನು ಹುಟ್ಟುಹಾಕಿದೆ ಎಂದು ಆರೋಪಿಸಿದರು. ಆರೋಗ್ಯಕರ ಕೆಲಸ–ಜೀವನ ಸಮತೋಲನವನ್ನು ಖಚಿತಪಡಿಸಿಕೊಳ್ಳಲು ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಸರ್ಕಾರವನ್ನು ಅವರು ಒತ್ತಾಯಿಸಿದರು.

ಸಂಘದ ಅಧ್ಯಕ್ಷರಾದ ವಿಜೆಕೆ ನಾಯರ್, ಉಪಾಧ್ಯಕ್ಷರಾದ ರಶ್ಮಿ ಚೌಧರಿ ಮುಂತಾದವರು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು.

ಈ ಪ್ರದರ್ಶನವು ಬೆಂಗಳೂರಿನಲ್ಲಿ ಸಾವಿರಾರು ಐಟಿ ವೃತ್ತಿಪರರು ಎದುರಿಸುತ್ತಿರುವ ಅನಿಶ್ಚಿತ ಕೆಲಸದ ಪರಿಸ್ಥಿತಿಗಳನ್ನು ಎತ್ತಿ ತೋರಿಸುತ್ತದೆ.

ಪೊಲೀಸರ ಅಡ್ಡಿ ವಾಗ್ವಾದ

ಈ ಸಂದರ್ಭದಲ್ಲಿ, ಐಟಿ ನೌಕರರು ಹೆಚ್ಚಿದ ಕೆಲಸದ ಸಮಯಕ್ಕಾಗಿ ವಕಾಲತ್ತು ನಡೆಸುತ್ತಿರುವ ಇನ್ಫೋಸಿಸ್ ಸಂಸ್ಥಾಪಕ ನಾರಾಯಣಮೂರ್ತಿ ಹಾಗೂ ಎಲ್&ಟಿ ಚೇರ್ಮನ್ ಎಸ್. ಎನ್.ಸುಬ್ರಹ್ಮಣ್ಯನ್ ರವರ ಭಾವಚಿತ್ರವಿರುವ ಪೋಸ್ಟರ್‌ಗಳನ್ನು ಸುಡಲು ಪ್ರತಿಭಟನಾಕಾರರು ಮುಂದಾದರು. ಸ್ಥಳದಲ್ಲಿದ್ದ ಪೊಲೀಸರು ಅದನ್ನು ತಡೆಯಲು ಯತ್ನಿಸಿದರು. ಈ ಸಮಯದಲ್ಲಿ ಪ್ರತಿಭಟನಾಕಾರರು ಮತ್ತು ಪೊಲೀಸರ ನಡುವೆ ತೀವ್ರ ವಾಗ್ವಾದ ನಡೆಯಿತು. ನೌಕರರು ಪ್ರತಿಭಟನೆಯ ಹಕ್ಕುಗಳನ್ನು ದಮನಮಾಡಲು ಯತ್ನಿಸಿದ ಪೊಲೀಸರ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರು.

ಪೊಲೀಸರನ್ನು ಧೈರ್ಯದಿಂದ ಪ್ರತಿರೋಧಿಸಿದ ಟೆಕ್ ಕಾರ್ಮಿಕರು ಐಟಿ ಉದ್ಯಮಿ ನಾರಾಯಣ ಮೂರ್ತಿ ಅವರ "70–ಗಂಟೆಗಳ ಕೆಲಸದ ವಾರ" ಕ್ಕೆ ಕರೆ ನೀಡುವ ಕಾರ್ಡ್‌ಬೋರ್ಡ್ ಭಾವಚಿತ್ರವನ್ನು ಸುಟ್ಟುಹಾಕಿದರು. ಪ್ರತಿಭಟನಾಕಾರರ ವೃತ್ತದ ಹಿಂದೆ ನಿಂತಿದ್ದ ಪೊಲೀಸರು, ಮೂರ್ತಿಯವರ ಭಾವಚಿತ್ರವು ಸುಟ್ಟುಹೋಗುವುದನ್ನು ಗಂಭೀರವಾಗಿ ವೀಕ್ಷಿಸಿದರು. ಆದರೆ "ನಾವು ಕಾರ್ಮಿಕರು, ನಾವು ಜ್ವಾಲೆ!" ಎಂಬ ಘೋಷಣೆಗಳು ಮುಂದುವರೆದವು.

"ಭಾರತದ ಐಟಿ ಕ್ಷೇತ್ರದ ಪಿತಾಮಹ" ಎಂದು ಟೈಮ್ಸ್ ನಿಯತಕಾಲಿಕೆಯಿಂದ ವೈಭವೀಕರಿಸಲ್ಪಟ್ಟ ಇನ್ಫೋಸಿಸ್ ಸಹ–ಸಂಸ್ಥಾಪಕರ ಚಿತ್ರವು ನಿಧಾನವಾಗಿ ಸುಟ್ಟುಹೋಗುತ್ತಿದ್ದಂತೆ, ಪ್ರತಿಭಟನಾ ನಿರತ ಕಾರ್ಮಿಕರು ಕೆಂಪು ಧ್ವಜಗಳನ್ನು ಹಿಡಿದು ವೃತ್ತದಲ್ಲಿ ನಿಂತು, ಘೋಷಣೆಗಳನ್ನು ಕೂಗಿದರು:

"ಹೇ, ಶ್ರೀ ನಾರಾಯಣ ಮೂರ್ತಿ,
ನಾವು ಇನ್ನು ಮುಂದೆ ಗುಲಾಮರಲ್ಲ!"

ಪೊಲೀಸರ ಈ ನಡೆಯನ್ನು ಖಂಡಿಸಿರುವ ಕೆಐಟಿಯು, ಶಾಂತಿಯುತ ಪ್ರತಿಭಟನೆಯಲ್ಲಿ ಪೊಲೀಸರ ಹಸ್ತಕ್ಷೇಪವು ಕರ್ನಾಟಕ ಸರ್ಕಾರದ ನಿಜವಾದ ವರ್ಗಗುಣವನ್ನು ಬಯಲು ಮಾಡುತ್ತದೆ, ತಮ್ಮ ಕಾರ್ಪೊರೇಟ್ ಬಾಸ್‌ಗಳ ವಿರುದ್ಧ ಯಾವುದೇ ಪ್ರತಿಭಟನೆ ಸಹಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶ ರವಾನಿಸುತ್ತದೆ ಎಂದು ಆರೋಪಿಸಿದೆ.

"ಆರೋಗ್ಯಕರ ಕೆಲಸ–ಜೀವನ ಸಮತೋಲನ ಪ್ರತಿಯೊಬ್ಬ ನೌಕರರ ಹಕ್ಕು" ಎಂಬ ಘೋಷವಾಕ್ಯದೊಂದಿಗೆ" ಕರ್ನಾಟಕ ರಾಜ್ಯ ಐಟಿ/ಐಟಿಎಸ್ ನೌಕರರ ಒಕ್ಕೂಟದ (ಕೆಐಟಿಎಸ್) ಬ್ಯಾನರ್‌ನಲ್ಲಿ ಮಾರ್ಚ್ ೯ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಐಟಿ ವಲಯದ ನೌಕರರ ಬೃಹತ್ ಪ್ರತಿಭಟನಾ ಸಮಾವೇಶ ನಡೆಯಿತು. ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸುವುದು, ಅತಿಯಾದ ಕೆಲಸದ ಸಮಯವನ್ನು ಕೊನೆಗೊಳಿಸುವುದು ಮತ್ತು ಕಚೇರಿ ಸಮಯದ ಆಚೆಗೆ ಕೆಲಸದಿಂದ ಸಂಪರ್ಕ ಕಡಿತಗೊಳಿಸುವ ಹಕ್ಕನ್ನು ಒತ್ತಾಯಿಸಿ ಈ ಹೋರಾಟ ನಡೆಯಿತು.



ಬೆಂಗಳೂರಿನ ತಂತ್ರಜ್ಞಾನ ವಲಯದಲ್ಲಿ ವ್ಯಾಪಕ ಬಿಕ್ಕಟ್ಟು

1.5 ಮಿಲಿಯನ್‌ಗಿಂತಲೂ ಹೆಚ್ಚು ತಂತ್ರಜ್ಞಾನ ಕಾರ್ಮಿಕರಿಗೆ ನೆಲೆಯಾಗಿರುವ ಬೆಂಗಳೂರು ನಗರವು ಇತ್ತೀಚಿನ ವರ್ಷಗಳಲ್ಲಿ ಸಾಮೂಹಿಕ ವಜಾಗಳು, ವೇತನ ಕಡಿತಗಳು ಮತ್ತು ಹೆಚ್ಚುತ್ತಿರುವ ಕೆಲಸದ ಒತ್ತಡಕ್ಕೆ ಸಾಕ್ಷಿಯಾಗಿದೆ. ಜಾಗತಿಕ ಆರ್ಥಿಕ ಮಂದಗತಿ ಮತ್ತು ಯಾಂತ್ರೀಕರಣವನ್ನು ಉಲ್ಲೇಖಿಸಿ ಹಲವಾರು ಪ್ರಮುಖ ಐಟಿ ಸಂಸ್ಥೆಗಳು ತಮ್ಮ ಕಾರ್ಯಪಡೆಯನ್ನು ಕಡಿಮೆ ಮಾಡಿವೆ, ಇದರಿಂದಾಗಿ ಅನೇಕ ಉದ್ಯೋಗಿಗಳಿಗೆ ಆರ್ಥಿಕ ಭದ್ರತೆ ಇಲ್ಲದಂತಾಗಿದೆ.

ಅದೇ ಸಮಯದಲ್ಲಿ, ಬೆಂಗಳೂರಿನ ಐಟಿ ವೃತ್ತಿಪರರು ಪ್ರತಿಕೂಲ ಕೆಲಸದ ವಾತಾವರಣ ಮತ್ತು ಹೆಚ್ಚುತ್ತಿರುವ ಮಾನಸಿಕ ಆರೋಗ್ಯ ಸಮಸ್ಯೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. 2023ರ ಸಮೀಕ್ಷೆಯ ಪ್ರಕಾರ ಶೇ. 70ಕ್ಕಿಂತ ಹೆಚ್ಚು ಐಟಿ ಉದ್ಯೋಗಿಗಳು ಆತಂಕ ಮತ್ತು ಒತ್ತಡದ ಲಕ್ಷಣಗಳನ್ನು ವರದಿ ಮಾಡಿದ್ದಾರೆ.

ಹಲವಾರು ಅಧ್ಯಯನಗಳು ಮತ್ತು ಸಮೀಕ್ಷೆಗಳು ಭಾರತದಲ್ಲಿ ಐಟಿ ಉದ್ಯೋಗಿಗಳಲ್ಲಿ ದೀರ್ಘ ಕೆಲಸದ ಸಮಯದ ಹಾನಿಕಾರಕ ಪರಿಣಾಮಗಳನ್ನು ಎತ್ತಿ ತೋರಿಸುತ್ತವೆ. ಐಟಿ ಉದ್ಯೋಗಿಗಳ ಯಕೃತ್ತು ಮತ್ತು ಒಟ್ಟಾರೆ ಆರೋಗ್ಯದ ಮೇಲೆ ಋಣಾತ್ಮಕವಾಗಿ ಪರಿಣಾಮ ಬೀರುತ್ತದೆ. ಆದರೂ, ಅನೇಕ ಕಂಪನಿಗಳು ಮಾನಸಿಕ ಆರೋಗ್ಯ ಬೆಂಬಲ ಅಥವಾ ಸರಿಯಾದ ದೂರು ಕಾರ್ಯವಿಧಾನಗಳನ್ನು ಹೊಂದಿಲ್ಲ.

ವೇತನವಿಲ್ಲದ ಓವರ್‌ಟೈಮ್ ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳು

ಭಾರತದ ಅತಿದೊಡ್ಡ ಆರ್ಥಿಕ ಕೇಂದ್ರಗಳಲ್ಲಿ ಒಂದಾಗಿದ್ದರೂ, ಬೆಂಗಳೂರಿನ ಐಟಿ ಕಾರ್ಯಪಡೆಯು ದೀರ್ಘ, ಅನಿಯಂತ್ರಿತ ಕೆಲಸದ ಸಮಯದೊಂದಿಗೆ ಹೋರಾಡುತ್ತಲೇ ಇದೆ. ಕೆಐಟಿಯು ಪ್ರಕಾರ, ಎಂಟರಿಂದ ಒಂಬತ್ತು ಗಂಟೆಗಳ ಕೆಲಸದ ದಿನವು ಒಂದು ಪುರಾಣ, ಏಕೆಂದರೆ ನೌಕರರು ವಾರಾಂತ್ಯಗಳನ್ನು ಒಳಗೊಂಡಂತೆ ಪರಿಹಾರವಿಲ್ಲದೆ ಓವರ್‌ಟೈಮ್ ಕೆಲಸ ಮಾಡಬೇಕಾಗುತ್ತದೆ.

ಅನಿಯಂತ್ರಿತ ವಾತಾವರಣದಲ್ಲಿ ಅವಾಸ್ತವಿಕ ಗಡುವನ್ನು ಪೂರೈಸುವ ಒತ್ತಡವು ಆತಂಕಕಾರಿ ಪರಿಣಾಮಗಳಿಗೆ ಕಾರಣವಾಗಿದೆ. ಕೆಲಸದ ಸಮಯದಿಂದಾಗಿ ಕಚೇರಿ ಕೆಲಸ ಮತ್ತು ವೈಯಕ್ತಿಕ ಜೀವನದ ನಡುವಿನ ಗೆರೆ ಮಸುಕುಗೊಂಡಿದೆ. ಉದ್ಯೋಗದಾತರ ನಿರಂತರ ಒತ್ತಡವು ಕಾರ್ಮಿಕರಿಗೆ ಗಂಭೀರ ದೈಹಿಕ ಮತ್ತು ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡುತ್ತಿದೆ. ಇದು ಉದ್ಯಮದ ಒಳಗೆ ಮತ್ತು ಹೊರಗೆ ಗಂಭೀರ ಚರ್ಚೆಗೆ ಕಾರಣವಾಗಿದೆ. ಉದ್ಯಮದ ಪ್ರಮುಖರ ಇತ್ತೀಚಿನ ಹೇಳಿಕೆಗಳು ಮತ್ತು ಗರಿಷ್ಠ ಕೆಲಸದ ಸಮಯವನ್ನು ಹೆಚ್ಚಿಸುವ ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿಗಳ ಪ್ರಸ್ತಾಪ, ಇವುಗಳು ಈ ಕ್ಷೇತ್ರದ ಉದ್ದಿಮೆಗಳ ನೌಕರರನ್ನು ಕೆರಳಿಸಿದೆ.

ಹಲವು ಮನವಿಗಳ ನಂತರವೂ ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲ

ಇಂತಹ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಕೆಐಟಿಯು ಬಯಸಿದೆ. ಐಟಿ/ಐಟಿಇಎಸ್ ಕಂಪನಿಗಳು ಹೆಚ್ಚಿನ ಅವಧಿಗೆ ವೇತನವನ್ನು ಪರಿಹಾರ ನೀಡುತ್ತಿಲ್ಲ ಮತ್ತು ನಿಯಮಿತ ಅವಧಿ ಮೀರಿ ಕೆಲಸದ ಸಮಯವನ್ನು ವಿಸ್ತರಿಸುತ್ತಿವೆ ಎಂದು ಆರೋಪಿಸಿ ಹಾಗೂ ಕೆಲಸದ ಸಮಯ ಮತ್ತು ಓವರ್‌ಟೈಮ್ ಪರಿಹಾರದ ಮೇಲೆ ಕಠಿಣ ನಿಯಮಗಳನ್ನು ಒತ್ತಾಯಿಸಿ ಕೆಐಟಿಯು ಮಾರ್ಚ್ 2024ರಲ್ಲಿ ಕಾರ್ಮಿಕ ಸಚಿವರಿಗೆ ಮನವಿ ಪತ್ರವನ್ನು ಸಲ್ಲಿಸಿತು. ಆದಾಗ್ಯೂ, ಅನೇಕ ಸಭೆಗಳು ಮತ್ತು ಪ್ರತಿಭಟನೆಗಳ ಹೊರತಾಗಿಯೂ, ಸರ್ಕಾರವು ನಿರ್ದಿಷ್ಟ ಕ್ರಮ ಕೈಗೊಳ್ಳಲು ವಿಫಲವಾಗಿದೆ.

2024 ಮಾರ್ಚ್ 13ರಂದು ಕಾರ್ಮಿಕ ಸಚಿವರಿಗೆ ಮನವಿ ಸಲ್ಲಿಸಲಾಯಿತು. ನೈಜ ಕೆಲಸದ ಸಮಯ ಮತ್ತು ಅಧಿಕ ಸಮಯ ಪಾವತಿಗಳ ಬಗ್ಗೆ ತನಿಖೆ ನಡೆಸಬೇಕೆಂದು ಒಕ್ಕೂಟವು ಸರ್ಕಾರಕ್ಕೆ ಒತ್ತಾಯಿಸಿದೆ. ಆದರೆ ಹಲವು ಸಭೆಗಳು, ಪ್ರತಿಭಟನೆಗಳು ನಡೆದು ಒಂದು ವರ್ಷ ಕಳೆದರೂ ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವ ಮೂಲಕ ಕೆಲಸದ ಸಮಯವನ್ನು ನಿಯಂತ್ರಿಸಲು ಸರ್ಕಾರದಿಂದ ಯಾವುದೇ ಪ್ರಯತ್ನ ನಡೆದಿಲ್ಲ.

ಈ ಕಾರಣದಿಂದಾಗಿ, ದೈನಂದಿನ ಕೆಲಸದ ಸಮಯದ ಮಿತಿಗಳನ್ನು ಜಾರಿಗೊಳಿಸಿ, ಅತಿಯಾದ ಓವರ್‌ಟೈಮ್ ಗೆ ತಡೆಹಾಕಿ, ಕೈಗಾರಿಕಾ ಉದ್ಯೋಗ (ಸ್ಟ್ಯಾಂಡಿಂಗ್ ಆದೇಶಗಳು) ಕಾಯ್ದೆಯಿಂದ ಐಟಿ ಕ್ಷೇತ್ರಕ್ಕೆ ನೀಡಲಾದ ವಿನಾಯ್ತಿ ರದ್ದುಗೊಳಿಸಿ, ಕಾರ್ಮಿಕ ಕಾನೂನು ಉಲ್ಲಂಘನೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ ಎಂಬ ಬೇಡಿಕೆಗಳೊಂದಿಗೆ ಕರ್ನಾಟಕ ರಾಜ್ಯ ಐಟಿ/ಐಟಿಎಸ್ ನೌಕರರ ಒಕ್ಕೂಟ (ಕೆಐಟಿಯು) ಐಟಿ ವಲಯದ ನೌಕರರ ಪ್ರತಿಭಟನಾ ಸಮಾವೇಶವನ್ನು ಆಯೋಜಿಸಿತು.

ದೊಡ್ಡ ಮಟ್ಟದಲ್ಲಿ ಸಜ್ಜುಗೊಳಿಸುವಿಕೆ

ಮಾರ್ಚ್ 9ರ ಕಾರ್ಯಕ್ರಮದ ತಯಾರಿಯಾಗಿ ಬೆಂಗಳೂರಿನಾದ್ಯಂತ ಘಟಕ ಮಟ್ಟದ ಸಭೆಗಳು ನಡೆದವು. ಹಲವು ಪ್ರಚಾರ ಸಮಿತಿಗಳನ್ನು ರಚಿಸಲಾಯಿತು. "ಆರೋಗ್ಯಕರ ಕೆಲಸ–ಜೀವನ ಸಮತೋಲನ ಪ್ರತಿಯೊಬ್ಬ ನೌಕರರ ಹಕ್ಕು" ಎಂಬ ಘೋಷವಾಕ್ಯದೊಂದಿಗೆ ಬೆಂಗಳೂರಿನಾದ್ಯಂತ ಮಾಹಿತಿ ತಂತ್ರಜ್ಞಾನ ಕಂಪನಿಗಳಿರುವ ಪ್ರದೇಶಗಳಲ್ಲಿ ಗೇಟ್ ಮೀಟಿಂಗ್ ಮತ್ತು ಬೀದಿ ಪ್ರಚಾರ ನಡೆಸಲಾಯಿತು. ಕೆಐಟಿಯುನ ಮುಖಂಡರು ಮತ್ತು ಕಾರ್ಯಕರ್ತರು ವ್ಯಾಪಕವಾಗಿ ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡರು. ಕೆಂಪು ಬಾವುಟಗಳು ಮತ್ತು ಫಲಕಗಳನ್ನು ಹಿಡಿದ ಯುವಕರ ತಂಡಗಳು ಕಂಪನಿಗಳ ಬಳಿ ನಿಂತು, ಉದ್ಯೋಗಿಗಳಿಗೆ ಕರಪತ್ರ ವಿತರಣೆ ಮಾಡುತ್ತ, ಅವರೊಡನೆ ಸಂವಾದ ಮಾಡುವ ಮೂಲಕ ಚಳುವಳಿಗೆ ಬೆಂಬಲ ಗಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡರು. ಎರಡು ತಿಂಗಳುಗಳ ಕಾಲ KITU ನೇತೃತ್ವದಲ್ಲಿ ಕರ್ನಾಟಕದಲ್ಲಿ ಐಟಿ ಮತ್ತು ಐಟಿಎಸ್ ಉದ್ಯೋಗಿಗಳು ಸಕ್ರಿಯವಾಗಿ ಸಂಘಟಿಸಿದರು. ಇವರ ಇಂತಹ ಸಾಮೂಹಿಕ ಪ್ರಯತ್ನದಿಂದಾಗಿ ಪ್ರತಿಭಟನೆಗೆ ಹೆಚ್ಚಿನ ಐಟಿ ಉದ್ಯೋಗಿಗಳು ಭಾಗವಹಿಸಿದರು.





ಮಾ-15-16, ಬೆಂಗಳೂರಿನಲ್ಲಿ 'ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್'ನ ರಾಷ್ಟ್ರೀಯ ಸಮನ್ವಯ ಸಮಿತಿ ಸಭೆ

'ಮೂಲನಿವಾಸಿ'ಗಳು ಎಂದು ಕರೆಯುವ ಆದಿವಾಸಿಗಳಿಗೇ ಮೂಲಭೂತ ಸೌಕರ್ಯಗಳು ಇಲ್ಲ!!-

'ಆದಿವಾಸಿ-ಅಲೆಮಾರಿ ಸಮುದಾಯಗಳ ಸಬಲೀಕರಣ' ಕುರಿತ ವಿಚಾರ ಸಂಕಿರಣದಲ್ಲಿ ಪ್ರೊ. ಬರಗೂರು

ವರದಿ: ಆರ್. ರಾಮಕೃಷ್ಣ

"ನಾವು 'ಮೂಲನಿವಾಸಿಗಳು' ಎಂದು ಕರೆಯುವ ಆದಿವಾಸಿಗಳಿಗೇ ಮೂಲಭೂತ ಸೌಕರ್ಯಗಳು ಇಲ್ಲದ ಪರಿಸ್ಥಿತಿ ಇರುವುದು ವಿಷಾದನೀಯ. ಆದಿವಾಸಿಗಳು ಸರಿಯಾದ ಶಿಕ್ಷಣ, ಸಾಮಾಜಿಕ ಗೌರವವೂ ಇಲ್ಲದೆ, ಊರಿನ ಅಂಚಿನಲ್ಲಿ ವಾಸಿಸುತ್ತಿದ್ದಾರೆ. ಊರಿನಿಂದ ದೂರದಲ್ಲಿ ವಾಸಿಸುತ್ತಿರುವವರ ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ" ಎಂದು ಹಿರಿಯ ಬಂಡಾಯ ಸಾಹಿತಿಗಳು, ಖ್ಯಾತ ಚಲನಚಿತ್ರ ನಿರ್ದೇಶಕರೂ ಆದ ನಾಡೋಜ ಡಾ. ಬರಗೂರು ರಾಮಚಂದ್ರಪ್ಪನವರು ವಿಷಾದಿಸಿದರು.

ಆದಿವಾಸಿಗಳ ಬದುಕಿನ ಸಮಸ್ಯೆ-ಸವಾಲುಗಳ ಕುರಿತು ಚರ್ಚಿಸಿ ರಾಷ್ಟ್ರವ್ಯಾಪಿಯಾದ ಹೋರಾಟ-ಕಾರ್ಯಕ್ರಮಗಳನ್ನು ರೂಪಿಸುವ ನಿಟ್ಟಿನಲ್ಲಿ, ಮಾರ್ಚ್ 15 ಮತ್ತು 16, 2025 ರಂದು ಬೆಂಗಳೂರಿನಲ್ಲಿ ನಡೆದ 'ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್(ಎ.ಎ.ಆರ್.ಎಂ.)'ನ ರಾಷ್ಟ್ರೀಯ ಸಮನ್ವಯ ಸಮಿತಿಯ ಸಭೆಯ ಪ್ರಯುಕ್ತ ಹಾಗೂ ಆದಿವಾಸಿಗಳಲ್ಲಿ ಅವರ ಹಕ್ಕುಗಳ ಬಗೆಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳ ಭಾಗವಾಗಿ ಮಾರ್ಚ್ 15, 2025 ರಂದು ಸಂಜೆ 'ಆದಿವಾಸಿ-ಅಲೆಮಾರಿ ಸಮುದಾಯಗಳ ಸಬಲೀಕರಣ:ಸಾಧ್ಯತೆ ಮತ್ತು ಸವಾಲುಗಳು' ಎಂಬ ಕುರಿತು ಬೆಂಗಳೂರಿನ ಎಸ್.ಸಿ.ಎಂ. ಹೌಸ್‌ನಲ್ಲಿ ಸಂಘಟಿಸಲಾಗಿದ್ದ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಪ್ರೊ.ಬರಗೂರು ಅವರು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಬರಗೂರು ಅವರು "2011 ರ ಜನಗಣತಿ ಪ್ರಕಾರ ದೇಶದಲ್ಲಿ ಶೇ. 8.6 ರಷ್ಟು ಪರಿಶಿಷ್ಟ ಬುಡಕಟ್ಟು ಜನರಿದ್ದಾರೆ. ದೇಶದಲ್ಲಿ ಒಟ್ಟಾರೆ 11 ಕೋಟಿ ಅಲೆಮಾರಿ, ಅರೆ ಅಲೆಮಾರಿ, ಆದಿವಾಸಿ ಜನರು ಇದ್ದಾರೆ. 2012 ರ ಬೆಂಗಳೂರಿನ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಸಮೀಕ್ಷೆಯೊಂದರ ಪ್ರಕಾರ 74 ಸಾವಿರ ಚದರ ಮೈಲಿ ಪ್ರದೇಶದಲ್ಲಿ 26 ಆದಿವಾಸಿ ಕುಟುಂಬಗಳು ವಾಸಿಸುತ್ತಿವೆ. ಈ ಆದಿವಾಸಿಗಳಲ್ಲಿ ಶೇ. 25 ರಷ್ಟು ಜನ ಮಾತ್ರ ಅಕ್ಷರಸ್ತರಾಗಿದ್ದಾರೆ. ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದವರ ಪ್ರಮಾಣ ಶೇ. 0.2 ಮಾತ್ರ ಇದೆ. ಅಂದರೇ ಶೇ.1 ರಷ್ಟೂ ಇಲ್ಲ. ಆದಿವಾಸಿಗಳಿಗೆ ಶಿಕ್ಷಣ, ಸಾಮಾಜಿಕ ಗೌರವಗಳು, ಆರ್ಥಿಕ ಸವಲತ್ತುಗಳು ಸಿಗಬೇಕು. ಆಗ ಮಾತ್ರ ಆದಿವಾಸಿ ಸಮುದಾಯದ ಸಬಲೀಕರಣ ಸಾಧ್ಯ" ಎಂದು ಹೇಳಿದರು. ಬುಡಕಟ್ಟು ಸಮುದಾಯದ ಸಾಂಸ್ಕೃತಿಕ ಆಸ್ಮಿತೆಯನ್ನು ಉಳಿಸಿಕೊಂಡು ಆದಿವಾಸಿಗಳಲ್ಲಿ ಆಧುನಿಕತೆಯನ್ನು ತರುವುದು ಸವಾಲಿನ ಕೆಲಸ ಎಂದು ವಿಶ್ಲೇಷಿಸಿದ ಬರಗೂರು ಅವರು ಆಧುನಿಕತೆ ಎಂದರೆ ಪ್ರಸ್ತುತತೆಯ ಅಳವಡಿಸಿಕೊಂಡು ಮುಂದುವರಿಯುವುದು, ಆದರೆ ಮೌಢ್ಯಗಳನ್ನು ಉಳಿಸಿಕೊಳ್ಳುವುದು ಎಂಬುದಲ್ಲ ಎಂದು ಸ್ಪಷ್ಟೀಕರಿಸಿದರು.



ಆದಿವಾಸಿಗಳ ಬದುಕಿನ ಕಠೋರ ಪರಿಸ್ಥಿತಿಯನ್ನು ವಿವರಿಸುತ್ತಾ, 'ಗಂಟಿ ಚೋರ್' ಎಂಬ ಬುಡಕಟ್ಟು ಸಮುದಾಯಕ್ಕೆ ಸೇರಿದ ಲಕ್ಷ್ಮಣ ಗಾಯಕ್ವಾಡ್ ಎಂಬ ಖ್ಯಾತ ಮರಾಠಿ ಲೇಖಕರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಾಗ ಕಳ್ಳರು ಕಾಕರಿಗೆಲ್ಲ ಪ್ರಶಸ್ತಿಗಳು ಸಿಗುವ ಕಾಲ ಬಂತು ಎಂದು ಹಲವರು ಅಪಹಾಸ್ಯ ಮಾಡಿದ್ದರು. ಒಪ್ಪೊತ್ತಿನ ಊಟಕ್ಕಾಗಿ ಯಾರಾದರೂ ಏನಾದರೂ ಕದ್ದರೆ ಅವರನ್ನು ಮಹಾ ಅಪರಾಧಿಗಳು ಎಂಬಂತೆ ನೋಡಲಾಗುತ್ತದೆ. ಆದರೆ ಬೇರೆಯವರ ಸಂಪತ್ತನ್ನು ಲೂಟಿ ಮಾಡುವವರ ಬಗೆಗೆ ಅಂತಹವರು ಏನೂ ಮಾತನಾಡುವುದಿಲ್ಲ ಎಂದು ಬರಗೂರು ಅವರು ಹೇಳಿದರು.



ಬದುಕಲ್ಲಿ ಮೂಲಭೂತ ಬದಲಾವಣೆ ಬರಲಿಲ್ಲ -ಆದರ್ಶ ಯಲ್ಲಪ್ಪ

'ಎಸ್.ಸಿ.-ಎಸ್.ಟಿ. ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳ ಒಕ್ಕೂಟ(ರಿ)'ದ ರಾಜ್ಯಾಧ್ಯಕ್ಷರಾದ ಆದರ್ಶ ಯಲ್ಲಪ್ಪ ಅವರು ಮಾತನಾಡಿ "ಇತಿಹಾಸದುದ್ದಕ್ಕೂ ಅಲೆಮಾರಿ ಸಮುದಾಯಗಳು ಆಳುವವರಿಂದ ಅನುಭವಿಸುತ್ತಾ ಬಂದ ದಬ್ಬಾಳಿಕೆ, ಅತಂತ್ರ ಬದುಕಿನ ಪರಿಸ್ಥಿತಿಗಳನ್ನು ಎಳೆ ಎಳೆಯಾಗಿ ಬಿಡಿಸಿ ವಿವರಿಸಿದರು. ಸ್ವಾತಂತ್ರ್ಯ ನಂತರ ಸರಕಾರಗಳು ಹಲವು ಕ್ರಮಗಳನ್ನು ವಹಿಸಿದ್ದರೂ ಸಹ ಪರಿಸ್ಥಿತಿಯಲ್ಲಿ ಮೂಲಭೂತ ಬದಲಾವಣೆಗಳು ಅಷ್ಟಾಗಿ ಕಂಡು ಬರಲಿಲ್ಲ. ಅಲೆ ಮಾರಿ, ಅರೆ ಅಲೆಮಾರಿ ಸಮುದಾಯಗಳ ಸಮಸ್ಯೆಗಳ ಪರಿಹಾರಕ್ಕಾಗಿ ಹಾಗೂ ಬದುಕಿನಲ್ಲಿ ಬದಲಾವಣೆ ತರಲು ಸರಕಾರಗಳು ಇನ್ನಷ್ಟು ಕ್ರಮ ವಹಿಸುವುದು, ಸಮಗ್ರ ಕ್ರಮ ವಹಿಸುವುದು ಅಗತ್ಯ" ಅವರು ಹೇಳಿದರು.

ಕಾಡು ನಮ್ಮ ಎರಡನೇ ತಾಯಿ-ಡೋಬಿ ಅಣ್ಣ

ಕೊಡಗು ಜಿಲ್ಲೆಯ ದುಬಾರೆ ಕಾಡಿನ ಆದಿವಾಸಿ ಸಮುದಾಯದ ಹಿರೀಕರಾದ ಡೋಬಿ ಅಣ್ಣ ಅವರು ಮಾತನಾಡಿ "ಆದಿವಾಸಿಗಳಾದ ನಮ್ಮ ಮೂಲ ನೆಲೆ ಅರಣ್ಯ. ಕಾಡು ನಮ್ಮ ಎರಡನೇ ತಾಯಿ. ಕಾಡು ನಮ್ಮನ್ನು ಸಲಹುತ್ತದೆ. ನಾವು ಕಾಡನ್ನು ಸಲಹುತ್ತೇವೆ. ಸಾವಿರಾರು ವರ್ಷಗಳಿಂದ ಇಲ್ಲಿ ನೆಲೆ ಇರುವ ನಮಗೆ ಈಗ ನೆಲೆ ತಪ್ಪಿದ ಪರಿಸ್ಥಿತಿ ಇದೆ. ಆದಿವಾಸಿಗಳ ಬದುಕು, ಸಂಸ್ಕೃತಿ, ಜ್ಞಾನಗಳನ್ನು ರಕ್ಷಿಸಲು ಸರಕಾರಗಳು ಇನ್ನೂ ಹೆಚ್ಚಿನ ಮುತುವರ್ಜಿ ವಹಿಸಬೇಕು" ಎಂದು ಹೇಳಿದರು.

ಮಂಚ್‌ನ ರಾಷ್ಟ್ರೀಯ ಉಪಾಧ್ಯಕ್ಷರು, ಮಾಜಿ ಸಂಸದರೂ ಆದ ಬೃಂದಾ ಕಾರಟ್ ವಿಚಾರ ಸಂಕಿರಣದಲ್ಲಿ ಮಾತನಾಡಿದರು. ಮಂಚ್‌ನ ರಾಷ್ಟ್ರೀಯ ಅಧ್ಯಕ್ಷರು, ತ್ರಿಪುರ ರಾಜ್ಯದ ವಿರೋಧ ಪಕ್ಷದ ಮುಖಂಡರೂ ಜಿತೇಂದ್ರ ಚೌಧುರಿಯವರು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕರಾದ ಡಾ.ಎಸ್.ವೈ. ಗುರುಶಾಂತ್ ಅವರು ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನು ಆಡಿದರು.

ಪಶ್ಚಿಮ ಬಂಗಾಳದ ಮಾಜಿ ಸಚಿವರಾದ ರವೀಂದ್ರನಾಥ್ ಹೇಮ್‌ಬ್ರಮ್, ಮಾಜಿ ಸಚಿವೆ ಡೆಬೊಲಿನಾ ಹೇಮ್‌ಬ್ರಮ್, ತಮಿಳು ನಾಡಿನ ಮಾಜಿ ಶಾಸಕರು ಹಾಗೂ ಆದಿವಾಸಿ ಮಂಚ್‌ನ ಅಖಿಲ ಭಾರತ ಖಜಾಂಚಿ ದಿಲ್ಲಿಬಾಬು, ಮಂಚ್‌ನ ಹಿಂದಿನ ಅಧ್ಯಕ್ಷರಾದ ಮಾಜಿ ಸಂಸದ ಡಾ. ಬಾಬುರಾವ್, ಮಾಜಿ ಸಂಸದರು ಹಾಗೂ ಮಂಚ್‌ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಪುಲಿನ್ ಬಿಹಾರಿ ಭಾಸ್ಕಿ ಅವರುಗಳಲ್ಲದೇ, ದೇಶದ

ಪುಟ 15 ಕ್ಕೆ



ಕೈಮುಗಿದಿರುವವರು ದುಬಾರೆ ಅರಣ್ಯದ ಡೋಬಿ ಅಣ್ಣ

'ಸುಂದರ' ಕುಟುಂಬದ ಹೋರಾಟಕ್ಕೆ ಮನ್ನಣೆ ಅಭಿನಂದನೆ ಮೂಲಕ ವಿಚಾರ ಸಂಕಿರಣ ಉದ್ಘಾಟನೆ

ಆರಂಭದಲ್ಲಿ ಬೆಳ್ತಂಗಡಿ ತಾಲೂಕಿನ ನೆರಿಯ ಗ್ರಾಮದಲ್ಲಿ ಭೂಮಾಲಿಕರ ದೌರ್ಜನ್ಯಕ್ಕೆ ಈಡಾಗಿ ಕಾನೂನು ಹೋರಾಟ ಸೇರಿದಂತೆ ಸುದೀರ್ಘ ಹೋರಾಟದಿಂದ ಇತ್ತೀಚೆಗೆ ನ್ಯಾಯಾಲಯದ ಮೂಲಕ ನ್ಯಾಯ ಪಡೆದ ಸುಂದರ ಮಲೆಕುಡಿಯ ಅವರನ್ನು ಅಭಿನಂದಿಸುವ ಮೂಲಕ ವಿಚಾರ ಸಂಕಿರಣ ಉದ್ಘಾಟನೆಗೊಂಡಿತು. ವೇದಿಕೆಯ ಗಣ್ಯರು ಸುಂದರ ಮಲೆಕುಡಿಯ ಅವರಿಗೆ ಹೂವಿನ ಹಾರ ಹಾಕಿ, ಶಾಲು ಹೊದೆಸಿ, ಪೇಟ ತೊಡಿಸುವ ಮೂಲಕ ಅಭಿನಂದಿಸಲಾಯಿತು.

ಇದೇ ಸಂದರ್ಭದಲ್ಲಿ ಪರ್ತಕರ್ತರಾದ ವಿಠಲ ಮಲೆಕುಡಿಯ ಅವರು ಮಾತನಾಡಿ ಸುಂದರ ಮಲೆಕುಡಿಯ ಅವರ ಕುಟುಂಬದ ಮೇಲೆ ನಡೆದ ದೌರ್ಜನ್ಯಗಳು ಹಾಗೂ ದೀರ್ಘ ಹೋರಾಟದ ವಿವರ ನೀಡಿದರು. ಕಾಟಾಜೆ ಗ್ರಾಮದ ದ ಭೂಮಾಲಿಕ ಗೋಪಾಲಕೃಷ್ಣಗೌಡನಿಗೆ ಎಷ್ಟಿದ್ದರೂ ಮತ್ತಷ್ಟು ಭೂಮಿ ಬೇಕು ಎಂಬ ದಾಹ. ಅದಕ್ಕಾಗಿ ದುರ್ಬಲರು, ಆದಿವಾಸಿಗಳ ಮೇಲೆ ಆತನ ಮತ್ತು ಆತನ ಗೂಂಡಾಗಳ ದೌರ್ಜನ್ಯ. 1999 ರಲ್ಲಿಯೇ ಸುಂದರ ಮಲೆಕುಡಿಯರ ಮನೆಗೆ ನುಗ್ಗಿ ಸುಂದರರ ಹೆಂಡತಿ ರೇವತಿಯವರ ಮೇಲೆ ಹಲ್ಲೆ ನಡೆಸಿ, ಬೆರಳು ಕತ್ತರಿಸಿದ್ದ ಗೋಪಾಲಗೌಡ. ಆ ನಂತರ ಜುಲೈ 26, 2015 ರಂದು ಬೇಲಿ ಪೊದೆ ಕತ್ತರಿಸುವ ನೆಪದಲ್ಲಿ ಪೊದೆ-ಕಳೆ ಕತ್ತರಿಸುವ ಯಂತ್ರದೊಂದಿಗೆ ತಾನು ತನ್ನ ಹೆಂಡತಿ ಸಮೇತವಾಗಿ ಬಂದ ಗೋಪಾಲಕೃಷ್ಣಗೌಡ ಸುಂದರರ ಜಮೀನಿಗೆ ನುಗ್ಗಿ ಜಗಳ ತೆಗೆದು ಕತ್ತರಿಸುವ ಯಂತ್ರದಿಂದ ಸುಂದರರನ್ನು ಕೊಲ್ಲುಲು ಯತ್ನಿಸಿದ್ದ. ಎಡ ತೋಳು ಬಹುತೇಕ ಕತ್ತರಿಸಿದ. ಬಲಗೈನ ನಾಲಕ್ಕು ಬೆರಳುಗಳೂ ತುಂಡರಿಸಿ ನೆಲಕ್ಕೆ ಬಿದ್ದವು. ಬಂಧನದ ಭೀತಿಯಿಂದ ತಂಡ ತಲೆ ತಪ್ಪಿಸಿಕೊಂಡಿತು. ಆಸ್ಪತ್ರೆಯ ಚಿಕಿತ್ಸೆಯಲ್ಲಿ ವೈದ್ಯರ ಪರಿಶ್ರಮದಿಂದ ಹೇಗೋ ಎಡ ತೋಳು ಉಳಿದುಕೊಂಡಿತು. ಅದರೆ ಬಲಗೈಯ ಬೆರಳುಗಳು ಶಾಶ್ವತವಾಗಿ ನಷ್ಟವಾದವು. ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ನೇತೃತ್ವದಲ್ಲಿ



ಆದಿವಾಸಿಗಳು-ಜನರು ತೀವ್ರ ಪ್ರತಿಭಟನೆ ನಡೆಸಿದರು. ಸಿಪಿಐ(ಎಂ) ಹೋರಾಟವನ್ನು ಬೆಂಬಲಕ್ಕೆ ನಿಂತಿತು. ಪಕ್ಷದ ನಾಯಕರಾದ ಸೀತರಾಮ್ ಯೆಚೂರಿ ಯವರು ಆಸ್ಪತ್ರೆಗೆ ಭೇಟಿ ನೀಡಿ ಸೂಕ್ತ ಚಿಕಿತ್ಸೆಗೆ ಹಾಗೂ ನ್ಯಾಯಕ್ಕಾಗಿ ಆಗ್ರಹಿಸಿದ್ದರು. ಮತ್ತೊಂದು ಕಡೆ ಆಂಧ್ರದಲ್ಲಿ ತಲೆಮರೆಸಿಕೊಂಡಿದ್ದ ಗೋಪಾಲಕೃಷ್ಣಗೌಡ ಮತ್ತು ಸಹಚರರನ್ನು ಎ.ಎಸ್.ಪಿ. ರಾಹುಲ್ ಕುಮಾರ್ ಶಾಪುರವಾಡ್ ತಮ್ಮ ದಕ್ಷ ಕಾರ್ಯಾಚರಣೆಯಿಂದ ಬಂಧಿಸಿದರು. ನ್ಯಾಯಾಲಯ ಸುದೀರ್ಘ ವಿಚಾರಣೆ ನಡೆಸಿ ಇತ್ತೀಚೆಗೆ ಗೊಪಾಲಕೃಷ್ಣಗೌಡನಿಗೆ 3 ವರ್ಷ, ಉಳಿದ 3 ಅಪರಾಧಿಗಳಿಗೆ 2 ವರ್ಷಗಳ ಸಜೆ ಶಿಕ್ಷೆ-ದಂಡ ವಿಧಿಸಿ ತೀರ್ಪು ನೀಡಿದೆ. ಸುಂದರರ ಕುಟುಂಬಕ್ಕೆ ಕೊಂಚ ಆರ್ಥಿಕ ಪರಿಹಾರವನ್ನೂ ಆದೇಶಿಸಿದೆ ಎಂಬೆಲ್ಲಾ ಮಾಹಿತಿಗಳನ್ನು ವಿಠಲ ಮಲೆಕುಡಿಯ ಸಭೆಗೆ ನೀಡಿದರು.



ಫೆಬ್ರವರಿ 11, 2025ರಂದು ಬಿಡುಗಡೆಯಾದ ಟ್ರಾನ್ಸ್ ಪರೆನ್ಸಿ ಇಂಟರ್ ನ್ಯಾಷನಲ್ ವರದಿಯ ಪ್ರಕಾರ, 2024ರ ಭ್ರಷ್ಟಾಚಾರ ಗ್ರಹಿಕೆ ಸೂಚ್ಯಂಕ (ಅಕು)ದಲ್ಲಿ ಭಾರತವು 180 ದೇಶಗಳ ಪಟ್ಟಿಯಲ್ಲಿ 96ನೇ ಸ್ಥಾನದಲ್ಲಿದೆ. 2014ರ ಚುನಾವಣೆಯಲ್ಲಿ ಬಿಜೆಪಿ ಶೇ. 31ರಷ್ಟು ಮತ ಪಡೆದು ನರೇಂದ್ರ ಮೋದಿ ಪ್ರಧಾನಿಯಾಗಲು ದೇಶದಲ್ಲಿನ ಅಂದಿನ ಭ್ರಷ್ಟಾಚಾರವೂ ಒಂದು ಕಾರಣವಾಗಿತ್ತು. ಅಂದು, ಭ್ರಷ್ಟಾಚಾರದ ವಿಷಯ ಸಂಘಪರಿವಾರದ ಚುನಾವಣಾ ಪ್ರಚಾರದ ಒಂದು ಅಸ್ತ್ರವಾಗಿತ್ತು. 2014ರಲ್ಲಿ 175 ದೇಶಗಳ ಪಟ್ಟಿಯಲ್ಲಿ 85ನೆಯ ಸ್ಥಾನದಲ್ಲಿತ್ತು. ಉದ್ಯಮಿಗಳ ಹಲವು ಭ್ರಷ್ಟಾಚಾರಗಳನ್ನು ಕಾನೂನುಬದ್ಧ ಗೊಳಿಸಿದ ನಂತರವೂ, 180 ದೇಶಗಳ ಪಟ್ಟಿಯಲ್ಲಿ ಭಾರತ 96ನೆಯ ಸ್ಥಾನದಲ್ಲಿದೆ ಎಂಬುದನ್ನು ನಾವಿಲ್ಲಿ ಗಮನಿಸಬೇಕಿದೆ. 11 ವರ್ಷಗಳ ಹಿಂದಿನ ಮೋದಿಯವರ 'ಭ್ರಷ್ಟಾಚಾರ ಮುಕ್ತ ಭಾರತ'ದ ಭರವಸೆ ಏನಾಯ್ತು?

ಭ್ರಷ್ಟಾಚಾರ ಗ್ರಹಿಕೆ ಸೂಚ್ಯಂಕ: 180 ದೇಶಗಳ ಪಟ್ಟಿಯಲ್ಲಿ 96ನೇ ಸ್ಥಾನದಲ್ಲಿ ಭಾರತ

'ಭ್ರಷ್ಟಾಚಾರ ಮುಕ್ತ ಭಾರತ'ದ ಭರವಸೆ ಏನಾಯ್ತು?

ಸಿ.ಸಿದ್ದಯ್ಯ

ಫೆಬ್ರವರಿ 11, 2025ರಂದು ಬಿಡುಗಡೆಯಾದ ಟ್ರಾನ್ಸ್ ಪರೆನ್ಸಿ ಇಂಟರ್ ನ್ಯಾಷನಲ್ ವರದಿಯ ಪ್ರಕಾರ, 2024ರ ಭ್ರಷ್ಟಾಚಾರ ಗ್ರಹಿಕೆ ಸೂಚ್ಯಂಕದಲ್ಲಿ (ಸಿಪಿಐ) ಭಾರತವು 180 ದೇಶಗಳಲ್ಲಿ 96ನೇ ಸ್ಥಾನದಲ್ಲಿದೆ. ಅದರ ಒಟ್ಟಾರೆ ಅಂಕಗಳು 38ಕ್ಕೆ ಇಳಿದಿದೆ. 2023ರ ವರದಿಯಲ್ಲಿ 100 ಅಂಕಗಳಲ್ಲಿ ಭಾರತ 40 ಅಂಕಗಳನ್ನು ಪಡೆದಿತ್ತು. ಸೂಚ್ಯಂಕವು 0 ಯಿಂದ 100ರವರೆಗಿನ ಮಾಪಕವನ್ನು ಬಳಸುತ್ತದೆ, ಅಲ್ಲಿ 0 ಅಂಕಗಳನ್ನು ಪಡೆದ ದೇಶ ಹೆಚ್ಚು ಭ್ರಷ್ಟವಾಗಿದೆ ಮತ್ತು 100 ಅಂಕಗಳನ್ನು ಪಡೆದ ದೇಶ ಭ್ರಷ್ಟಾಚಾರ ಮುಕ್ತವಾಗಿದೆ. ಸಾರ್ವಜನಿಕ ವಲಯದ ಭ್ರಷ್ಟಾಚಾರದ ಮಟ್ಟವನ್ನು ಆಧರಿಸಿ ಅಂಕಗಳನ್ನು ನೀಡಲಾಗುತ್ತದೆ. ಈ 180 ದೇಶಗಳ ಪಟ್ಟಿಯಲ್ಲಿ 90 ಅಂಕಗಳನ್ನು ಪಡೆದ ಡೆನ್ಮಾರ್ಕ್ ಅಗ್ರಸ್ಥಾನದಲ್ಲಿದ್ದರೆ, ನಂತರದ ಸ್ಥಾನದಲ್ಲಿ ಫಿನ್ಲ್ಯಾಂಡ್ (88) ಮತ್ತು ಸಿಂಗಾಪುರ (84) ಇವೆ. ಪ್ರತಿ ದೇಶಕ್ಕೆ ಅಂಕವನ್ನು 13 ವಿಭಿನ್ನ ಭ್ರಷ್ಟಾಚಾರ ಸಮೀಕ್ಷೆಗಳು ಮತ್ತು ಮೌಲ್ಯಮಾಪನಗಳಿಂದ ಆಯ್ಕೆ ಮಾಡಲಾದ ಕನಿಷ್ಠ ಮೂರು ಡೇಟಾ ಮೂಲಗಳಿಂದ ಪಡೆಯಲಾಗುತ್ತದೆ. ಈ ಮೂಲಗಳನ್ನು ವಿಶ್ವ ಬ್ಯಾಂಕ್ ಮತ್ತು ವಿಶ್ವ ಆರ್ಥಿಕ ವೇದಿಕೆಯಂತಹ ಹಲವಾರು ಪ್ರತಿಷ್ಠಿತ ಸಂಸ್ಥೆಗಳು ಸಂಗ್ರಹಿಸುತ್ತವೆ.

ಭ್ರಷ್ಟಾಚಾರ ರಹಿತ ಆಡಳಿತದ ಭರವಸೆ ಏನಾಯ್ತು?

ನರೇಂದ್ರ ಮೋದಿಯವರು ತನ್ನ 11 ವರ್ಷಗಳ ಆಡಳಿತದಲ್ಲಿ, ಎಷ್ಟು ಭ್ರಷ್ಟರನ್ನು ಜೈಲಿಗಟ್ಟಿದ್ದಾರೆ? ಎಷ್ಟು ಭ್ರಷ್ಟ ಹಣ ವಶಪಡಿಸಿಕೊಂಡಿದ್ದಾರೆ? 2ಜಿ, ಕಲ್ಲಿದ್ದಲು ಗಣಿಗಳ ಹಗರಣಗಳಲ್ಲಿ ಲಕ್ಷಾಂತರ ಕೋಟಿ ದೋಚಿದ ಟಾಟಾ, ಬಿರ್ಲಾ, ಅಂಬಾನಿಯಂತಹ ದೊಡ್ಡ ಬಂಡವಾಳಗಾರರ ವಿರುದ್ದ ಮೋದಿ ಒಂದೂ ಮಾತನಾಡುತ್ತಿಲ್ಲ ಏಕೆ? ಅಂಥ ಲೂಟಿಕೋರರ ಜೊತೆ ವಿಮಾನದಲ್ಲಿ ವಿದೇಶ ಸುತ್ತುತ್ತಿರುವುದೇಕೆ? ಸಾರ್ವಜನಿಕರ ಹಣವನ್ನು ದೋಚಿ ವಿದೇಶಗಳಿಗೆ ಪರಾರಿಯಾದ ವಿಜಯ್ ಮಲ್ಯ, ನೀರವ್ ಮೋದಿ, ಮೆಹುಲ್ ಚೋಕ್ಸಿ, ಲಲಿತ್ ಮೋದಿ ಅವರನ್ನು ಹಿಡಿದು ತಂದು ಶಿಕ್ಷಿಸಲಿಲ್ಲವೇಕೆ? ಬಿಜೆಪಿ ಆಡಳಿತದ ಮಧ್ಯಪ್ರದೇಶದ ವ್ಯಾಪಂ ಹಗರಣದ ಪ್ರಕರಣದಲ್ಲಿ ಹತ್ತಾರು ಸಾಕ್ಷಿಗಳು ಸಾವಿಗೀಡಾದ ನಿಗೂಢತೆ ಏನು?

500 ಮತ್ತು 1000 ಮುಖಬೆಲೆಯ ನೋಟುಗಳ ಅಮಾನ್ಯೀಕರಣದ ಸಂದರ್ಭದಲ್ಲಿ ಅಮಿತ್ ಶಾ ಮಗ ಜಯ್ ಶಾ ಒಂದೇ ವರ್ಷದಲ್ಲಿ 80 ಕೋಟಿ ರೂ. ಸಂಪತ್ತು ಹೆಚ್ಚಳವಾಯಿತು ಎಂಬ ಆರೋಪದ ಬಗ್ಗೆ ತನಿಖೆ ನಡೆಸುತ್ತಿಲ್ಲವೇಕೆ? ಪನಾಮ ಪೇಪರ್ಸ್ ಹಗರಣದಲ್ಲಿ ಕೇಳಿಬಂದ ಭಾರತೀಯರಿಗೆ ಶಿಕ್ಷೆ ಕೊಡಲಿಲ್ಲವೇಕೆ? ಕೃಷ್ಣ–ಗೋದಾವರಿ ಬೇಷಿನ್‌ನಲ್ಲಿ ರಿಲಯನ್ಸ್ ಕಂಪನಿಯು ಒಎನ್‌ಜಿಸಿ ಬ್ಲಾಕ್‌ನಲ್ಲಿ ಕದ್ದು ತೈಲ ತೆಗೆಯುತ್ತಿದ್ದರೂ ಅವರ ವಿರುದ್ದ ಕ್ರಮ ಕೈಗೊಳ್ಳುತ್ತಿಲ್ಲವೇಕೆ? ಬ್ಯಾಂಕುಗಳಿಗೆ 20 ಲಕ್ಷ ಕೋಟಿ ರೂ. ಗಳಷ್ಟು ಸಾಲ ಪಡೆದು ವಸೂಲಾಗದ ಸಾಲದ ಪ್ರಮಾಣ(NPA)ಕ್ಕೆ ಕಾರಣರಾದವರ ಯಾರ ಆಸ್ತಿಯನ್ನೂ ಹರಾಜು ಹಾಕಲಿಲ್ಲವೇಕೆ? ಅಂತಹ ವಂಚಕರನ್ನು ಬಂದಿಸುತ್ತಿಲ್ಲ ಏಕೆ? ಅಂಬಾನಿ, ಅದಾನಿ, ಟಾಟಾ, ಬಿರ್ಲಾರ ಕುಟುಂಬ ಪಡೆದ ಸಾಲವೆಷ್ಟು, ಮನ್ನಾ ಮಾಡಿದ ಸಾಲವೆಷ್ಟು ಎಂದು ಬಹಿರಂಗ ಪಡಿಸುತ್ತಿಲ್ಲವೇಕೆ? ಸರ್ಕಾರಿ ಕಛೇರಿಗಳಲ್ಲಿ ಲಂಚ ಕೊಡದೆ ಕಡತ ಮುಂದೆ ತೆವಳದ ಸ್ಥಿತಿ ಇಂದಿಗೂ ಇದೆಯಲ್ಲವೇ? ಹೇಳಲು ಇನ್ನೂ ಸಾಕಷ್ಟಿವೆ. ಸಂಘಪರಿವಾರ, ಬಿಜೆಪಿ, ಮೋದಿ ಇವುಗಳಿಗೆಲ್ಲಾ ಉತ್ತರ ಕೊಡುತ್ತಾರೆಯೇ? ಅವರು ಕೊಡುವುದಿಲ್ಲ, ನಾವು ಪಟ್ಟು ಬಿಡದೆ ಕೇಳಿ ಉತ್ತರ ಪಡೆಯಬೇಕು. ಏಕೆಂದರೆ, ಇವರು ದೋಚಿದ್ದೆಲ್ಲವೂ ಸಾರ್ವಜನಿಕರ ಸಂಪತ್ತು.

ಸ್ವತಃ ಒಪ್ಪಿಕೊಂಡ ಪ್ರಧಾನಿ

ಪ್ರಧಾನಮಂತ್ರಿ ಮೋದಿಯವರು ತಮ್ಮ 76ನೇ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದ ಅವಳಿ ಸವಾಲುಗಳನ್ನು ಗುರಿಯಾಗಿಸಿಕೊಂಡು ಮಾತನಾಡುತ್ತಾ, ಅವುಗಳನ್ನು ನಿಗ್ರಹಿಸುವ ತುರ್ತು ಅಗತ್ಯವನ್ನು ಪ್ರಸ್ತಾಪಿಸಿದರು. ಅದಕ್ಕೂ 10 ವರ್ಷಗಳ ಹಿಂದೆಯೂ, ಪ್ರಧಾನಿಯಾಗುವ ಮೊದಲು, ತಾನು ಪ್ರಧಾನಿಯಾದರೆ ಭ್ರಷ್ಟಾಚಾರ ನಿರ್ಮೂಲನೆ ಮಾಡುವುದಾಗಿ ಅವರು ಜನತೆಗೆ ವಾಗ್ದಾನ ಮಾಡಿದ್ದರು ಎಂಬುದನ್ನು ನೆನಪಿಸಿಕೊಳ್ಳಬೇಕು. ಅಂದರೆ, ಭ್ರಷ್ಟಾಚಾರ ನಿರ್ಮೂಲನೆ ಮಾಡುವ ತಮ್ಮ ಹಿಂದಿನ ವಾಗ್ದಾನದಂತೆ ತಾನು ನಡೆದುಕೊಂಡಿಲ್ಲ ಎಂಬುದನ್ನು ಸ್ವತಃ ಮೋದಿಯವರೇ ಒಪ್ಪಿಕೊಂಡಂತಾಗಿದೆ.

ಜನತೆ ನಮಗೆ ಮತ ನೀಡಿ ಕೇಂದ್ರದಲ್ಲಿ ನಮ್ಮನ್ನು ಅಧಿಕಾರಕ್ಕೆ ತಂದರೆ, ಶುದ್ಧ ಆಡಳಿತ ನೀಡುವುದಾಗಿಯೂ, ದೇಶದಲ್ಲಿನ ಭ್ರಷ್ಟಾಚಾರ ನಿರ್ಮೂಲನೆ ಮಾಡುವುದಾಗಿಯೂ, ಭ್ರಷ್ಟರು ಬಿಜೆಪಿಯವರೇ ಆದರೂ ಸರಿಯೇ ಅವರೆಲ್ಲರನ್ನು ಜೈಲಿನ ಕಂಬಿಯ ಹಿಂದೆ ಹಾಕುವುದಾಗಿಯೂ 2014ರ ಚುನಾವಣೆಯ ಸಂದರ್ಭದಲ್ಲಿ ಮೋದಿ ಪ್ರತಿಜ್ಞೆ ಮಾಡಿದ್ದರು. ಹಿಂದಿನ ಆಡಳಿತದ ಅವಧಿಯಲ್ಲಿನ ವ್ಯಾಪಕ ಭ್ರಷ್ಟಾಚಾರದ ಬೆಂಕಿಯ ಬಿಸಿಯಿಂದ ನೊಂದಿದ್ದ ಒಂದಷ್ಟು ಜನರು ಮೋದಿಯವರ ಮಾತುಗಳನ್ನು ನಿಜವೆಂದೇ ನಂಬಿದ್ದರು. ಬಿಜೆಪಿ ಶೇ. 31 ರಷ್ಟು, ಒಟ್ಟಾರೆಯಾಗಿ ಎನ್‌ಡಿಎ ಶೇ. 38.5ರಷ್ಟು, ಅಂದರೆ, ಅರ್ಧಕ್ಕಿಂತ ಕಡಿಮೆ ಮತಗಳನ್ನು ಪಡೆದರೂ, ಶೇ. 61.5 ಮತದಾರರು ವಿರೋಧಿಸಿದರೂ ಸಹ, ನಮ್ಮ ಚುನಾವಣಾ ವ್ಯವಸ್ಥೆಯ ಲಾಭ ಪಡೆದು ಬಿಜೆಪಿ ಆಧಿಕಾರಕ್ಕೆ ಬಂದು, ನರೇಂದ್ರ ಮೋದಿ ಮೊದಲ ಬಾರಿಗೆ ಪ್ರಧಾನಿಯಾದರು.

ಭ್ರಷ್ಟಾಚಾರವನ್ನೇ ಕಾನೂನು ಬದ್ದಗೊಳಿಸಿದರು

ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಹಲವು ಭ್ರಷ್ಟಾಚಾರ ಮಾರ್ಗಗಳನ್ನು ಕಾನೂನು ಬದ್ದಗೊಳಿಸಿದರು. ಬ್ಯಾಂಕುಗಳ ಹಣವನ್ನು ದೋಚಲು ರೈಟ್‌ಆಫ್ ಮತ್ತು ಸಾಲಮನ್ನಾ ಮಾಡುವುದು, ನಿಕೃಷ್ಟ ಬೆಲೆಗೆ ಸಾರ್ವಜನಿಕ ಉದ್ಯಮಗಳ ಆಸ್ತಿ ಮತ್ತು ಷೇರು ಮಾರಾಟ, ಕಾರ್ಪೊರೇಟ್ ತೆರಿಗೆ ಕಡಿತ, ನೋಟು ರದ್ದತಿ ಮೂಲಕ ಕಪ್ಪು ಹಣವನ್ನು ಬಿಳಿ ಹಣವನ್ನಾಗಿ ಮಾಡಿದ್ದು, ರಫೆಲ್ ಯುದ್ಧ ವಿಮಾನ ಒಪ್ಪಂದದ ಹಗರಣಕ್ಕೆ ಕ್ಲೀನ್‌ಚಿಟ್ ಪಡೆದದ್ದು, ಪ್ರಕೃತಿ ಸಂಪತ್ತಿನ ಲೂಟಿಗೆ ಕಾನೂನುಬದ್ದ ಅವಕಾಶ, ಖಾಸಗಿಯವರಿಂದ ಸರಕುಗಳ ಶೇಖರಣೆಗೆ ಮಿತಿ ತೆಗೆದುಹಾಕುವ ಮೂಲಕ ಸರಕು ಮತ್ತು ಸೇವೆಗಳಿಗೆ ಮನಬಂದಂತೆ ಬೆಲೆ ನಿಗದಿಗೆ ಅವಕಾಶ, ರಾಜಕೀಯ ಪಕ್ಷಗಳಿಗೆ ದೇಣಿಗೆ ಕೊಡುವವರ ಹೆಸರು ಗೌಪ್ಯವಾಗಿಡುವ 'ಚುನಾವಣಾ ಬಾಂಡ್' ಪದ್ದತಿ, ಇತ್ಯಾದಿ. ಈ ರೀತಿ ಸಾರ್ವಜನಿಕ ಸಂಪತ್ತಿನ ದೋಚುವಿಕೆಯೂ ಮತ್ತು ಗ್ರಾಹಕರ ಶೋಷಣೆಯೂ ಭ್ರಷ್ಟಾಚಾರ ವ್ಯಾಪ್ತಿಗೆ ಬರದಂತೆ ಮಾಡಲಾಗಿದೆ. ಜೊತೆಗೆ, ತಮ್ಮ ಪಕ್ಷಕ್ಕೆ ಸೇರಿಕೊಂಡ ಅಥವಾ ತಮ್ಮ ನೀತಿ ನಿಲುವುಗಳಿಗೆ ಸಹಕರಿಸಿದ ಹಲವು ರಾಜಕಾರಣಿಗಳ ಭ್ರಷ್ಟಾಚಾರಗಳನ್ನು ಮುಚ್ಚಿಹಾಕಲಾಗಿದೆ.

ಭ್ರಷ್ಟಾಚಾರಿಗಳಿಗೆ ಯಾವುದೇ ಅಳುಕಿಲ್ಲ

56 ಇಂಚಿನ ಎದೆಯ ಮೋದಿಯವರನ್ನು ಕಂಡರೆ ಭ್ರಷ್ಟರು ಗಢಗಢ ನಡುತ್ತಾರೆ ಎಂದೇ ಸಂಘಪರಿವಾರದ 'ಭಕ್ತರು' ಜನರನ್ನು ನಂಬಿಸಿದ್ದರು. ಅಧಿಕಾರಕ್ಕೆ ಬಂದು 11 ವರ್ಷಗಳು ಸಮೀಪಿಸುತ್ತಾ ಬಂದಿದೆಯಾದರೂ ದೇಶದಲ್ಲಿನ ಭ್ರಷ್ಟಾಚಾರ ಕಡಿಮೆಯಾಗಲಿಲ್ಲ, ಮಾತ್ರವಲ್ಲ, ಭ್ರಷ್ಟಾಚಾರಿಗಳು ಯಾವುದೇ ಅಳುಕಿಲ್ಲದೆ ಭ್ರಷ್ಟಾಚಾರದಲ್ಲಿ ತೊಡಗಿಕೊಂಡಿದ್ದಾರೆ. ಭ್ರಷ್ಟಾಚಾರ ನಿಗ್ರಹ ಕಾನೂನುಗಳು ಮೂಲೆಯಲ್ಲಿ ನರಳುತ್ತಿವೆ. ವಾರ್ಡ್ ಸದಸ್ಯನಿಂದ ಹಿಡಿದು ಕೇಂದ್ರ ಸಚಿವರವರೆಗೆ ಎಲ್ಲರೂ ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಲಂಚ ಕೊಡದೆ ಫೈಲ್ ಚಲಿಸುವುದಿಲ್ಲ ಎಂಬಂತಾಗಿದೆ. ಅಳತೆಯಲ್ಲಿನ ಮೋಸ, ಕಳಪೆ ಸರಕುಗಳು, ತೆರಿಗೆ ವಂಚನೆ, ನಕಲಿ ಮತ್ತು ಆನ್ಲೈನ್ ವಂಚನೆಗಳು, ಡಿಜಿಟಲ್ ಅರೆಸ್ಟ್‌ಗಳು ಸಾಮಾಜಿಕ ಆರೋಗ್ಯದ ಮೇಲೆ ಪಿಡುಗಾಗಿ ಮಾರ್ಪಟ್ಟಿವೆ.

"ಪೊಲೀಸ್, ರಾಜಕೀಯ ಅಪರಾಧಿಗಳು, ಕ್ರಿಮಿನಲ್ ಗ್ಯಾಂಗ್‌ಗಳು ಮತ್ತು ಭ್ರಷ್ಟ ಸ್ಥಳೀಯ ಅಧಿಕಾರಿಗಳ ದಾಳಿಗೆ ಬಲಿಯಾದ ಪತ್ರಕರ್ತರು ಮತ್ತು ಕಾರ್ಯಕರ್ತರ ಬಗೆಗಿನ ವರದಿಗಳು ಕಳವಳವನ್ನು ಎತ್ತಿ ತೋರಿಸಿದೆ. ಸರ್ಕಾರದ ವಿರುದ್ಧ ಮಾತನಾಡುವ ನಾಗರಿಕ ಸಮಾಜದ ಸಂಘಟನೆಗಳ ವಿರುದ್ಧ ಮಾನನಷ್ಟ, ದೇಶದ್ರೋಹ, ದ್ವೇಷ ಭಾಷಣ ಮತ್ತು ನ್ಯಾಯಾಲಯದ ನಿಂದನೆ ಆರೋಪಗಳನ್ನು ಹೊರಿಸುವುದು ಮತ್ತು ವಿದೇಶಿ ನಿಧಿಯ ಮೇಲಿನ ನಿಯಮಗಳೊಂದಿಗೆ ಗುರಿಯಾಗಿಸಿಕೊಂಡಿವೆ" ಎಂದು ಸಿಪಿಐ ಸೂಚ್ಯಂಕದ ವರದಿಯಲ್ಲಿ ಹೇಳಲಾಗಿದೆ.

2024ರಲ್ಲಿ ಲೋಕಸಭೆಗೆ ಹೊಸದಾಗಿ ಆಯ್ಕೆಯಾದ 543 ಸದಸ್ಯರಲ್ಲಿ 251 ಜನರ ವಿರುದ್ಧ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಮತ್ತು ಅವರಲ್ಲಿ 27 ಜನರು ಶಿಕ್ಷೆಗೊಳಗಾಗಿದ್ದಾರೆ ಎಂದು ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್ ಮಾಡಿದ ವಿಶ್ಲೇಷಣೆ ಬಹಿರಂಗಪಡಿಸಿದೆ. ದೇಶಾದ್ಯಂತ 4,000 ಕ್ಕೂ ಹೆಚ್ಚು ಶಾಸಕರು ಪ್ರಕರಣಗಳನ್ನು ಎದುರಿಸುತ್ತಿದ್ದಾರೆ.

ಯಾವುದೇ ಒಂದು ದೇಶದಲ್ಲಿ ಭ್ರಷ್ಟಾಚಾರ ಹೆಚ್ಚಾದಾಗ ಅಲ್ಲಿ ಬಡತನ, ಅಶಾಂತಿ, ಹಿಂಸೆ, ಆರ್ಥಿಕ ಕುಸಿತ, ಅಪರಾಧ, ಹಸಿವು ಮತ್ತು ಆರ್ಥಿಕ ಅಸಮಾನತೆ ಮೇಲುಗೈ ಸಾಧಿಸುತ್ತದೆ ಎಂದು ಇತಿಹಾಸ ಕಲಿಸುತ್ತದೆ. ಅಪರಾಧಿಗಳು ಹೊಸ ನಾಯಕರಾಗಿ ಅವತಾರವೆತ್ತಿರುವ ಉದಾಹರಣೆಗಳು ನಮ್ಮ ಮುಂದಿವೆ. ಪ್ರಜಾಪ್ರಭುತ್ವವು ಭ್ರಷ್ಟಾಚಾರದಿಂದ ಅಪಹಾಸ್ಯಕ್ಕೊಳಗಾಗುವುದನ್ನು ನಾವು ನೋಡುತ್ತೇವೆ, ಸರ್ಕಾರಗಳು ಅಸ್ಥಿರವಾಗುತ್ತವೆ ಮತ್ತು ದೇಶದ ಪ್ರಗತಿಯು ಹಿಂಜರಿತದತ್ತ ಸಾಗುತ್ತದೆ. ಭ್ರಷ್ಟಾಚಾರ ಮತ್ತು ಅಧಿಕಾರದ ದುರುಪಯೋಗಗಳು ವೈಯಕ್ತಿಕ ಸ್ವಾತಂತ್ರ್ಯ, ಆರೋಗ್ಯ, ಜೀವನ ಮಟ್ಟ, ಮಾನವ ಹಕ್ಕುಗಳು, ಸಾಮಾಜಿಕ ನ್ಯಾಯ, ಆಡಳಿತ ಮತ್ತು ಸಮಾಜದ ಭವಿಷ್ಯಕ್ಕೆ ಹಾನಿಕಾರಕವಾಗುತ್ತವೆ.

ಭ್ರಷ್ಟಾಚಾರದ ವಿರುದ್ಧ ಎಲ್ಲರೂ ಒಗ್ಗೂಡಿ ಹೋರಾಡಬೇಕಿದೆ. ನಮ್ಮಲ್ಲಿ ನೈತಿಕತೆ, ಪಾರದರ್ಶಕತೆ, ಕಾನೂನುಗಳನ್ನು ಗೌರವಿಸುವುದು, ಹೊಣೆಗಾರಿಕೆ ಮತ್ತು ಸಮರ್ಪಣಾ ಮನೋಭಾವ ಹೆಚ್ಚಬೇಕಿದೆ. ನಾವೆಲ್ಲರೂ ಭ್ರಷ್ಟಾಚಾರ ಮುಕ್ತ ಸಮಾಜದ ಸ್ಥಾಪನೆಗೆ ಶ್ರಮಿಸಬೇಕಿದೆ.

ಹೋಳಿಯನ್ನು ಶಾಂತಿಯುತವಾಗಿ ಆಚರಿಸಲು...... ಪುಟ 6 ರಿಂದ

ಸೀಟುಗಳ ಅನುಪಾತದಲ್ಲಿ ಇಳಿಕೆ ಆಗಬಾರದು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಅಮೆರಿಕದ ಸುಂಕಗಳ ಬೆದರಿಕೆ

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಮೆರಿಕಕ್ಕೆ ರಫ್ತುಮಾಡುವ ಭಾರತೀಯ ಸರಕುಗಳ ಮೇಲಿನ ಸುಂಕವನ್ನು ಹೆಚ್ಚಿಸುವುದಾಗಿ ಬೆದರಿಕೆ ಹಾಕುತ್ತಿದ್ದಾರೆ ಮತ್ತು ಏಪ್ರಿಲ್ 2ರಿಂದ ಪ್ರತಿಯಾಗಿ ಸುಂಕಗಳನ್ನು ವಿಧಿಸಲಾಗುವುದು ಎಂದು ಘೋಷಿಸಿದ್ದಾರೆ. ಮೋದಿ ಸರ್ಕಾರ ಈ ವಿಷಯದ ಬಗ್ಗೆ ಮೌನವಾಗಿದೆ ಮತ್ತು ದೇಶದ ಹಿತಾಸಕ್ತಿಗಳನ್ನು ಬಲಿಕೊಟ್ಟು ಟ್ರಂಪ್ ಅವರನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದೆ.

ಭಾರತೀಯ ಉದ್ಯಮದ ಹಿತದೃಷ್ಟಿಯಿಂದ ಭಾರತ ಸರ್ಕಾರ ಒಂದು ದೃಢವಾದ ನಿಲುವನ್ನು ತೆಗೆದುಕೊಳ್ಳಬೇಕು ಮತ್ತು ಸೂಕ್ತ ಪ್ರತೀಕಾರದ ಕ್ರಮ ಕೈಗೊಳ್ಳಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಪಕ್ಷದ ಮಹಾಧಿವೇಶನ

ಪಕ್ಷದ 24ನೇ ಮಹಾಧಿವೇಶನಕ್ಕೆ ಸಲ್ಲಿಸಲಿರುವ ಸಂಘಟನೆ ಕುರಿತಾದ ಕರಡು ವರದಿಯನ್ನು ಪೊಲಿಟ್‌ಬ್ಯೂರೋ ಚರ್ಚಿಸಿತು. ಅದನ್ನು ಮಾರ್ಚ್ 22–23ರಂದು ಕೇಂದ್ರ ಸಮಿತಿ ಸಭೆಯ ಮುಂದೆ ಅನುಮೋದನೆಗೆ ಮತ್ತು ಅಂತಿಮಗೊಳಿಸಲು ಮಂಡಿಸಲಾಗುವುದು ಎಂದು ಪೊಲಿಟ್‌ಬ್ಯುರೊ ಹೇಳಿಕೆ ತಿಳಿಸಿದೆ.

ಪ್ರತ್ಯೇಕತಾವಾದಿಗಳೊಂದಿಗೆ ಬಿಜೆಪಿ ಗುಪ್ತ ಮೈತ್ರಿ– ಎಡ ಕಾರ್ಯಕರ್ತರ ಮೇಲೆ ಹಲ್ಲೆ–ಕೊಲೆ–ಗೂಂಡಾಗಿರಿ

ತ್ರಿಪುರ:ಅಂದು–ಇಂದು'–ಸಂವಾದದಲ್ಲಿ ಜಿತೇಂದ್ರ ಚೌಧುರಿ

ಈ ತ್ರಿಪುರಾದ ಮಾಜಿ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅವರು ತಮ್ಮ ಕ್ಷೇತ್ರಕ್ಕೆ ಹೋಗುವುದೂ ದುಸ್ಸಾಹಸವಾಗಿರುವ ಭೀಕರ ಪರಿಸ್ಥಿತಿ ಕುರಿತು ತ್ರಿಪುರದ ಎಡರಂಗ ಸರಕಾರದಲ್ಲಿ 21 ವರ್ಷ ಸಚಿವರಾಗಿದ್ದ, ಪ್ರಸ್ತುತ ತ್ರಿಪುರ ರಾಜ್ಯದ ವಿರೋಧ ಪಕ್ಷದ ಮುಖಂಡರಾದ ಜಿತೇಂದ್ರ ಚೌಧುರಿಯವರು ವಸ್ತುಸ್ಥಿತಿ ಕುರಿತು ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ. ತ್ರಿಪುರ ರಾಜ್ಯದ ಹಿಂದಿನ ಪರಿಸ್ಥಿತಿ ಹಾಗು ಪ್ರಸ್ತುತ ಪರಿಸ್ಥಿತಿಗಳ ಕುರಿತು 'ಸೌಹಾರ್ದ ಕರ್ನಾಟಕ', 'ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ' ಜಂಟಿಯಾಗಿ ಮಾರ್ಚ್ 16, 2025 ರಂದು, ಸಂಜೆ ಬೆಂಗಳೂರಿನ ಎಸ್.ಸಿ.ಎಂ. ಹೌಸ್‌ನಲ್ಲಿ 'ಸಂವಾದ' ಕಾರ್ಯಕ್ರಮವನ್ನು ಸಂಘಟಿಸಿದ್ದವು. ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್‌ವಾದ)ದ ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್ ರವರು ಸಂವಾದಕ್ಕೆ ಚಾಲನೆ ನೀಡಿದರು. ಮುಂದೆ ಇರುವುದು ಜಿತೇಂದ್ರ ಅವರ ಮಾತುಗಳು.



1947 ರಲ್ಲಿ ತ್ರಿಪುರದಲ್ಲಿ ಕೇವಲ 3 ರಿಂದ 4 ಲಕ್ಷ ಜನಸಂಖ್ಯೆ ಇತ್ತು. ಅದರಲ್ಲಿ ಶೇ.70 ರಷ್ಟು ಬುಡಕಟ್ಟು ಜನರಿದ್ದರು. ದೇಶ 1947 ರಲ್ಲಿ ಸ್ವಾತಂತ್ರ್ಯ ಗಳಿಸಿದರೂ, ತ್ರಿಪುರ ರಾಜ್ಯವು 1949 ರಲ್ಲಿ ಭಾರತ ಒಕ್ಕೂಟಕ್ಕೆ ಸೇರಿತು. ಆಗ ಕೇವಲ ಶೇ.2 ರಷ್ಟು ಬುಡಕಟ್ಟು ಜನರು ಮಾತ್ರವೇ ಸಾಕ್ಷರರಾಗಿದ್ದರು. ಆದಿವಾಸಿ ಮಹಾರಾಜನ ಆಡಳಿತದಲ್ಲಿ ಬುಡಕಟ್ಟು ಜನರ ತೀವ್ರ ಶೋಷಣೆ ನಡೆದಿತ್ತು. 1945 ರಲ್ಲಿಯೇ ಬುಡಕಟ್ಟು ನಾಯಕ ದಶರಥ ದೇಬ್ ಬರ್ಮಾ ಅವರ ನೇತೃತ್ವದ 'ಜನಶಿಕ್ಷಾ ಆಂದೋಲನ' ಎಂಬ ಸಾಕ್ಷರತಾ ಚಳುವಳಿ, ಆದಿವಾಸಿಗಳಿಗೆ ಅಕ್ಷರ ಕಲಿಸುವ ಆಂದೋಲನ ಆರಂಭವಾಗಿತ್ತು. ಮಹಾರಾಜ ಅದನ್ನೂ ವಿರೋಧಿಸಿದ್ದ. ದಶರಥ ದೇಬರ ತಲೆ ಕಡಿದು ತಂದು ಕೊಟ್ಟವರಿಗೆ ಆ ಕಾಲದಲ್ಲೇ 10 ಸಾವಿರ ನಗದು ಬಹುಮಾನ ಕೊಡುವುದಾಗಿ ಘೋಷಿಸಿದ್ದ. ಭಾರತದ ವಿಭಜನೆಯ ನಂತರ ತ್ರಿಪುರ ರಾಜ್ಯದಲ್ಲಿ ಬಂಗಾಳಿಗಳ ಅಪಾರ ಪ್ರಮಾಣದ ವಲಸೆಯಿಂದ ಜನಸಂಖ್ಯೆಯ ಸ್ವರೂಪವೇ ಬದಲಾಗಿ ಬುಡಕಟ್ಟು ಜನರು ಅಲ್ಪಸಂಖ್ಯಾತರಾಗಿ, ಬುಡಕಟ್ಟೇತರರು ಬಹುಸಂಖ್ಯಾತರಾದರು. ದಶರಥ ದೇಬರ ನೇತೃತ್ವದ ಚಳುವಳಿ ಅಲ್ಲದೆ, ಬಿರೇನ್ ದತ್ತಾ, ನೃಪೇನ್ ಚಕ್ರವರ್ತಿ ಮುಂತಾದ ಕಮ್ಯೂನಿಸ್ಟ್ ಪಕ್ಷ ಮುಖಂಡರ ನೇತೃತ್ವದ ಬ್ರಿಟೀಷ್ ವಿರೋಧಿ ಸ್ವಾತಂತ್ರ್ಯ ಹೋರಾಟ, ಬುಡಕಟ್ಟು ಹಾಗೂ ಬುಡಕಟ್ಟೇತರ ಜನರ ಐಕ್ಯತೆ ಆಧಾರಿತವಾದ ಪ್ರಬಲ ಕಮ್ಯೂನಿಸ್ಟ್ ಚಳುವಳಿಯ ಫಲವಾಗಿ ರಾಜ್ಯದಲ್ಲಿ ಪ್ರಜಾಪ್ರಭುತ್ವ ಚಳುವಳಿ ಬಲಗೊಂಡಿತು. 1952 ರಲ್ಲಿ ದೇಶದ ಮೊದಲ ಲೋಕಸಭಾ ಚುನಾವಣೆ ನಡೆದಾಗಲೂ ದಶರಥ ದೇಬ್ ಬಹಿರಂಗವಾಗಿ ಎಲ್ಲಿಯೂ ಪ್ರಚಾರ ಮಾಡಲಾಗಲಿಲ್ಲ. ಭೂಗತರಾಗಿಯೇ ಇದ್ದು ಅವರು ಚುನಾವಣೆಯನ್ನು ಗೆದ್ದರು. ಗೆದ್ದ ಮೇಲೂ ತ್ರಿಪುರದಿಂದ ಬಾಂಗ್ಲಾದೇಶದ ಒಳ ಮಾರ್ಗದ ಮೂಲಕ ಗುಪ್ತವಾಗಿ ಪ್ರಯಾಣಿಸಿ ದೆಹಲಿ ತಲುಪಿ ಅವರು ಸಂಸತ್ತು ಪ್ರವೇಶಿಸಬೇಕಾಯಿತು.

ಎಡರಂಗದಿಂದ ಭೂಮಿ ಹಂಚಿಕೆ, ಶೈಕ್ಷಣಿಕ ಸುಧಾರಣೆ ಇತ್ಯಾದಿ..

ಹಲವು ದಶಕಗಳ ಜನಾಂದೋಲನಗಳ ಫಲವಾಗಿ 1978 ರಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರಕಾರ ಅಧಿಕಾರಕ್ಕೆ ಬಂದಿತು. ತ್ರಿಪುರದ ಭೂಮಿಯಿಲ್ಲದವರಿಗೆ ಭೂಮಿ ನೀಡುವ ಭೂ ಹಂಚಿಕೆ ನೀತಿ, ವೃದ್ಧಾಪ್ಯ ವೇತನ ಜಾರಿ, ಶಾಲೆಗಳಲ್ಲಿ ಮಧ್ಯಾಹ್ನದ ಊಟದ ಯೋಜನೆ, ಅಧಿಕಾರ ವಿಕೇಂದ್ರೀಕರಣ, ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳಾ ಮೀಸಲಾತಿ ಮುಂತಾದ ನಾನಾ ಜನಪರ ಕಾರ್ಯಕ್ರಮಗಳು ದೇಶದ ಗಮನ ಸೆಳೆದು ಬೇರೆ ಹಲವು ರಾಜ್ಯಗಳಿಗೂ ಮಾದರಿಯಾದವು. ಜನರ ತಾಯಿನುಡಿಗೆ ಆದ್ಯತೆ, ರಕ್ಷಣೆ, ಬುಡಕಟ್ಟು ಜನರ ಅಭಿವೃದ್ಧಿಗಾಗಿ ಪ್ರಜಾಸತ್ತಾತ್ಮಕ ಬುಡಕಟ್ಟು ಸ್ವಾಯತ್ತ ಮಂಡಳಿ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. 1988 ರಲ್ಲಿ ಪ್ರತ್ಯೇಕತವಾದಿ ಉಗ್ರಗಾಮಿಗಳೊಂದಿಗಿನ ಶಾಮಿಲಾತಿ, ಗೂಂಡಾಗಿರಿ, ರಿಗ್ಗಿಂಗ್ ಮೂಲಕ ಕಾಂಗ್ರೆಸ್ ಅಧಿಕಾರ ಗಳಿಸಿ 1993 ರ ವರೆಗೆ ಆಡಳಿತ ನಡೆಸಿತು. ಮತ್ತೆ 1993 ರಿಂದ 2018 ರ ವರೆಗೆ ಸತತವಾಗಿ 25 ವರ್ಷಗಳ ಕಾಲ ಎಡರಂಗ ತ್ರಿಪುರದಲ್ಲಿ ಆಡಳಿತ ನಡೆಸಿ ಹಲವು ರಂಗಗಳಲ್ಲಿ ಪ್ರಗತಿ ದಾಖಲಿಸಿತು. ಶೇ. 97 ರಷ್ಟು ಸಾಕ್ಷರತೆ ಸಾಧಿಸಿ ತ್ರಿಪುರ ರಾಜ್ಯವು ಕೇರಳವನ್ನೂ ಮೀರಿಸಿ ಮೊದಲ ಸ್ಥಾನ ಪಡೆಯಿತು. ಆದರೂ ಮೂರು ದಿಕ್ಕುಗಳಲ್ಲೂ ಬಾಂಗ್ಲಾದೇಶದ ಗಡಿಯನ್ನು ಹೊಂದಿರುವ, ದೇಶದ ಉಳಿದ ಭಾಗಕ್ಕೆ ಸುಲಭವಾದ ಸಾರಿಗೆ–ಸಂಪರ್ಕ ವ್ಯವಸ್ಥೆ ಇಲ್ಲದ ಪುಟ್ಟ ಗುಡ್ಡಗಾಡು ರಾಜ್ಯ ತ್ರಿಪುರದಲ್ಲಿ ಬಂಡವಾಳ ಹೂಡಲು ಉದ್ಯಮಿಗಳು ಯಾರು ಮುಂದೆ ಬರುವುದಿಲ್ಲವಾದ್ದರಿಂದ ಉದ್ಯೋಗ ಸೃಷ್ಟಿಯ ವಿಷಯದಲ್ಲಿ ತ್ರಿಪುರ ಗಂಭೀರ ಸವಾಲುಗಳನ್ನು ಎದುರಿಸಿತು.

ಮೋದಿ–ಅಮಿತ್ ಶಾರ ಅಗಣಿತ 'ಆಮಿಷ'ಗಳು

2018ರಲ್ಲಿ ನರೇಂದ್ರ ಮೋದಿ, ಅಮಿತ್ ಶಾ ನೇತೃತ್ವದಲ್ಲಿ ಬಿಜೆಪಿಯು, ಡಬಲ್ ಎಂಜಿನ್ ಸರಕಾರದಿಂದ ತ್ರಿಪುರ ಅಭಿವೃದ್ಧಿ ಸಾಧಿಸುತ್ತದೆ, ಮಾಣಿಕ್ ಸರ್ಕಾರ್ ಪ್ರಾಮಾಣಿಕರಾದರೂ ಅವರ ಆಡಳಿತದಿಂದ ಬಂಡವಾಳ ಹೂಡಿಕೆ, ಉದ್ಯೋಗ ಸೃಷ್ಟಿ ಆಗುವುದಿಲ್ಲ. ಬಿಜೆಪಿ ಅಧಿಕಾರಕ್ಕೆ ಬಂದರೆ ಆರು ತಿಂಗಳಲ್ಲಿ 50 ಸಾವಿರ ಸರಕಾರಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು, ನೌಕರರ ವೇತನ ದ್ವಿಗುಣ ಮಾಡಲಾಗುವುದು. ರಬ್ಬರ್, ಗ್ಯಾಸ್ ಮುಂತಾದ ವಲಯಗಳಲ್ಲಿ ಉದ್ದಿಮೆಗಳನ್ನು ತಂದು, 7 ಲಕ್ಷ ಉದ್ಯೋಗ ಸೃಷ್ಟಿಸಲಾಗುವುದು ಎಂದೆಲ್ಲಾ ಭರವಸೆ ನೀಡಿ, 299 ಭರವಸೆಗಳ 'ಮಿಷನ್ ಡಾಕ್ಯುಮೆಂಟ್' ಆಧಾರದಲ್ಲಿ ಮತ ಕೇಳಿ, (ಕಾಂಗ್ರೆಸ್ ಶಾಸಕರು ಸೇರಿದಂತೆ ಇಡಿಯಾಗಿ ಕಾಂಗ್ರೆಸ್ ಪಕ್ಷವನ್ನೇ ಬಿಜೆಪಿಗೆ ಪಕ್ಷಾಂತರ ಮಾಡಿಸಿಕೊಂಡು) ಬಿಜೆಪಿ ಅಧಿಕಾರಕ್ಕೆ ಬಂದಿತು. ಆದರೆ ಎಂಟು ವರ್ಷಗಳು ಕಳೆದರೂ ಜನತೆಗೆ ಕೊಟ್ಟ ಯಾವ ಭರವಸೆಗಳೂ ಈಡೇರಿಲ್ಲ.

ಹಲ್ಲೆ–ಕೊಲೆ–ದಾಳಿ

ಮತ್ತೊಂದೆಡೆ ಈಗ ತ್ರಿಪುರದಲ್ಲಿ ವಿರೋಧ ಪಕ್ಷವು ಪ್ರಚಾರ ಮಾಡುವಂತಿಲ್ಲ, ಗೂಂಡಾಗಿರಿ ತಾಂಡವವಾಡುತ್ತಿದೆ. ಚುನಾವಣೆಗಳಲ್ಲಿ ಬೂತ್‌ಗಳಿಗೆ ಏಜೆಂಟರನ್ನು ಹಾಕುವಂತಿಲ್ಲ. 35 ಸಿಪಿಐ(ಎಂ) ಕಾರ್ಯಕರ್ತರ ಕೊಲೆಗಳಾಗಿವೆ. ರಾಜ್ಯದಲ್ಲಿ 400 ಕ್ಕೂ ಹೆಚ್ಚು ಸಿಪಿಐ(ಎಂ) ಪಕ್ಷದ ಕಚೇರಿಗಳನ್ನು ಧ್ವಂಸ ಮಾಡಲಾಗಿದೆ. ಹಲ್ಲೆ, ಗಲಭೆ, ದಾಳಿಗಳ ಬಗೆಗೆ ಪೋಲಿಸ್ ಠಾಣೆಗಳಿಗೆ ಹೋಗಿ ದೂರು ದಾಖಲಿಸುವುದೂ ಕಷ್ಟವಾಗಿದೆ. ಚುನಾವಣಾ ಆಯೋಗದ ಮುಖ್ಯಸ್ಥರಾಗಿದ್ದ ಅಜೀಂ ಕುಮಾರ್ ಅವರಿಗೆ ಗಲಭೆಗ್ರಸ್ತ ಸ್ಥಿತಿ ಬಗೆಗೆ ಮನವರಿಕೆಯಾದಂತೆ ಕಂಡರೂ, ಅವರಿಗೂ ಹೆಚ್ಚಿನದೇನೂ ಮಾಡಲಾಗಲಿಲ್ಲ. ತ್ರಿಪುರ ಹಿಂದುತ್ವದ ಪ್ರಯೋಗಶಾಲೆಯಂತಾಗಿದೆ. ಮಹಿಳೆಯರ ಮೇಲೆ ಹಲ್ಲೆ, ಗಲಭೆ, ಅಪರಾಧಗಳು ಹೆಚ್ಚಿವೆ. ಶಿಕ್ಷಣ ವ್ಯವಸ್ಥೆ ಕುಸಿದು ಬಿದ್ದಿದೆ. 6 ಖಾಸಗಿ ವಿಶ್ವವಿದ್ಯಾಲಯಗಳನ್ನು ಆರಂಭಿಸಲಾಗಿದೆ. ಹಿಂದೆ ತ್ರಿಪುರವನ್ನು ದೇಶದಿಂದ ಪ್ರತ್ಯೇಕಗೊಳಿಸಬೇಕೆಂಬ ಬೇಡಿಕೆ ಇಟ್ಟಿದ್ದ ಉಗ್ರಗಾಮಿಗಳಲ್ಲಿ ಬಹಳಷ್ಟು ಜನರು ಈಗ ಬಿಜೆಪಿಯಲ್ಲಿದ್ದಾರೆ. ಕೆಲವು ಪ್ರತ್ಯೇಕತಾವಾದಿಗಳೊಂದಿಗೆ ಬಿಜೆಪಿ ಗುಪ್ತ ಮೈತ್ರಿಯಲ್ಲಿದೆ. ಮತ್ತೊಂದೆಡೆ ಪ್ರತ್ಯೇಕತಾವಾದಕ್ಕೆ ರಾಜಕೀಯ ಪರಿಹಾರವನ್ನು ಹುಡುಕುವ ಬದಲಿಗೆ ಬಿಜೆಪಿ ಸರಕಾರ ಯು.ಎ.ಪಿ.ಎ. ಕಾಯ್ದೆ, ದೇಶದ್ರೋಹದ ಕಾಯ್ದೆ ಹಾಗೂ ಭದ್ರತಾ ಪಡೆಗಳ ಬಂದೂಕಿನ ಬಲದಿಂದ ಅದನ್ನು ನಿಯಂತ್ರಿಸುತ್ತೇವೆಂದು ಹೊರಟಿದೆ. ಅಷ್ಟು ಮಾತ್ರವಲ್ಲ ಮತಾಂಧತೆಯ ಆಧಾರದಲ್ಲಿ, ರಾಜಕೀಯ ಕಾರಣಗಳಿಗಾಗಿ ಎಡರಂಗದ ಬೆಂಬಲಿಗರಾದ ಆಟೋ ಚಾಲಕರು, ಅಂಗಡಿ ನಡೆಸುವವರು ಮುಂತಾದ ಜನರ ಮೇಲೆ ದಾಳಿ ಮಾಡಿ ಅವರ ಜೀವನಾಧಾರ ಕಸಿದುಕೊಳ್ಳುತ್ತಿದೆ. ಬಿಜೆಪಿಯ ಈ ಅಪಾಯಕಾರಿ ಧೋರಣೆಯನ್ನು ಬುಡಕಟ್ಟು ಹಾಗೂ ಬುಡಕಟ್ಟೇತರ ಜನರ ಐಕ್ಯ ಹೋರಾಟದ ಮೂಲಕ ಹಾಗೂ ನೇಮಕಾತಿಗಾಗಿ ಯುಜಜನರ ಚಳುವಳಿಯ ಮೂಲಕ ಎದುರಿಸಲು ಎಡರಂಗ ಶ್ರಮಿಸುತ್ತಿದೆ... ಹೀಗೆ ಚೌಧುರಿಯವರು ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ತ್ರಿಪುರ ಇತಿಹಾಸ ಹಾಗೂ ಈಗಿನ ಪರಿಸ್ಥಿತಿಯನ್ನು ವಿವರಿಸುತ್ತಾ ಹೋದರು. ಸಂವಾದದಲ್ಲಿ ಸಭಿಕರ ಪ್ರಶ್ನೆಗಳಿಗೆ ಉತ್ತರಿಸುತ್ತಾ ತ್ರಿಪುರದಲ್ಲೂ ಮತ್ತು ದೇಶದ ಇತರ ರಾಜ್ಯಗಳಲ್ಲೂ ಸಹ ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ಪರೋಕ್ಷವಾಗಿ ಪ್ರತ್ಯೇಕತಾವಾದಿಗಳಿಗೆ ಕುಮ್ಮಕ್ಕು, ಹಣಕಾಸು ಬೆಂಬಲ ನೀಡುತ್ತಾ ಬಂದಿರುವ ಕರಾಳ ಇತಿಹಾಸ ಇದೆ ಎಂದು ಉದಾಹರಣೆಗಳ ಸಹಿತ ವಿವರಿಸಿದರು.

ಬೀದಿ ಬದಿಯ ಗೂಡಂಗಡಿಯಲ್ಲಿ ಟೀ ಕುಡಿಯುತ್ತಿದ್ದ ಮುಖ್ಯಮಂತ್ರಿ

ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್‌ವಾದ)ಯ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಸಂವಾದವನ್ನು ನಡೆಸಿಕೊಟ್ಟರು. ಆರಂಭದಲ್ಲಿ ಮಾತನಾಡಿದ ಅವರು ಹಿಂದೆ ಸೋವಿಯತ್ ರಷ್ಯಾ, ಚೀನಾದಲ್ಲಿ ಸಮಾನತೆ, ಹಂಚಿ ತಿನ್ನುವ ವ್ಯವಸ್ಥೆ, ತಾರತಮ್ಯವಿಲ್ಲದ ಸಮಾಜ ಮುಂತಾದವುಗಳನ್ನು ನೋಡಿ, ಪಶ್ಚಿಮ ಬಂಗಾಳ, ಕೇರಳ, ತ್ರಿಪುರದಲ್ಲಿ ಎಡ ಸರಕಾರಗಳು ಅಧಿಕಾರಕ್ಕೆ ಬಂದದ್ದನ್ನು ಕಂಡು ಭಾರತದಲ್ಲಿಯೂ ಬದಲಾವಣೆಯ ಪರ್ವ ಆರಂಭವಾಗಿದೆ ಎಂಬ ಭಾವನೆ ಬಂದಿತ್ತು. ನಿರಂಜನರ 'ಚಿರಸ್ಮರಣೆ', ಗೋದಾವರಿ ಪುರುಳೇಕರ್ ಅವರ 'ಮಾನವ ಎಚ್ಚೆತ್ತಾಗ' ಮುಂತಾದ ಕೃತಿಗಳೂ ನಮ್ಮನ್ನು ಪ್ರಭಾವಿಸಿದ್ದವು. ದೇಶದ ರಾಜಕಾರಣದಲ್ಲಿ 1977 ರಲ್ಲಿ ಇಂದಿರಾಗಾಂಧಿ ಸೋತ ನಂತರ ಚಿಕ್ಕಮಗಳೂರಿನಲ್ಲಿ ಸ್ಪರ್ಧಿಸಿದಾಗ ವಿರೋಧ ಪಕ್ಷಗಳ ಪರವಾಗಿ ವೀರೇಂದ್ರ ಪಾಟೀಲರು ಸಾಮಾನ್ಯ ಅಭ್ಯರ್ಥಿಯಾಗಿದ್ದರು. ಆಗಿನ ಚುನಾವಣಾ ಪ್ರಚಾರದಲ್ಲಿ ನಮ್ಮೆಲ್ಲರ ಜೊತೆ ರಸ್ತೆ ಬದಿಯ ಗೂಡಂಗಡಿಯಲ್ಲಿ ಸಾಮಾನ್ಯರಂತೆ ಟೀ ಕುಡಿಯುತ್ತಾ ಆಗಿನ ತ್ರಿಪುರ ರಾಜ್ಯದ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ ಪ್ರಚಾರದಲ್ಲಿ ಪಾಲ್ಗೊಂಡಿದ್ದರು ಎಂದು ತ್ರಿಪುರದ ನಾಯಕರ ಹಾಗೂ ಕಮ್ಯೂನಿಸ್ಟರ ಸರಳತೆ, ಬದ್ಧತೆಗಳನ್ನು ನೆನಪಿಸಿಕೊಂಡರು. ಒರಿಸ್ಸಾದಲ್ಲಿ ಆದಿವಾಸಿಗಳ ನಡುವೆ ಕ್ಷಯ ರೋಗ ಪತ್ತೆ ಹಾಗು ಚಿಕಿತ್ಸೆಗಾಗಿ ಕೆಲಸ ಮಾಡುತ್ತಿದ್ದ ಗ್ರಹಾಂ ಸ್ಟೈನ್ಸ್ ಮತ್ತು ಇಬ್ಬರು ಮುಗ್ಧ ಮಕ್ಕಳನ್ನು ಅವರು ಕ್ರಿಶ್ಚಿಯನ್ನರು ಎಂಬ ಕಾರಣಕ್ಕಾಗಿ ಧಾರಾಸಿಂಗ್ ನೇತೃತ್ವದ ಭಜರಂಗದಳದ ಕಾರ್ಯಕರ್ತರು ರಾತ್ರಿ ಮಲಗಿದ್ದಾಗ ಕಾರಿಗೆ ಪೆಟ್ರೋಲ್ ಸುರಿದು ಜೀವಂತ ಸುಟ್ಟು ಹಾಕಿದ್ದರು. ಇಂತಹ ಸಂಘ ಪರಿವಾರವು ಬುಡಕಟ್ಟು ಜನರನ್ನೂ ಕೋಮುವಾದೀಕರಣಗೊಳಿಸುತ್ತಿದ್ದು ಅದು ಬಹಳ ಅಪಾಯಕಾರಿ ಎಂದು ಮಾವಳ್ಳಿ ಶಂಕರ್ ಎಚ್ಚರಿಸಿದರು. 'ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ'ಯ ರಾಜ್ಯ ಸಹ ಸಂಚಾಲಕರಾದ ಡಾ. ಎಸ್.ವೈ. ಗುರುಶಾಂತ್ ಪ್ರಾಸ್ತಾವಿಕ ಮಾತುಗಳನ್ನು ಆಡಿ, ತ್ರಿಪುರದ ಆದಿವಾಸಿಗಳನ್ನು ಅದಿವಾಸಿಯೇತರರ ವಿರುದ್ಧ ಎತ್ತಿಕಟ್ಟುವ ಅಪಾಯಕಾರಿ ಆಟಗಳನ್ನು ಹಿಂದೆ ಕಾಂಗ್ರೆಸ್ ಮಾಡಿತ್ತು. ಈಗ ಬಿಜೆಪಿ ಈ ಆಟವನ್ನು ಇನ್ನಷ್ಟು ತೀವ್ರಗೊಳಿಸಿದೆ ಎಂದರು. ಮೊದಲಿಗೆ 'ಸೌಹಾರ್ದ ಕರ್ನಾಟಕ'ದ ರಾಜ್ಯ ಸಂಯೋಜಕರಾದ ಬಿ. ರಾಜಶೇಖರ ಮೂರ್ತಿ ಸ್ವಾಗತಿಸಿದರು, ಮತ್ತೊಬ್ಬ ಸಂಯೋಜಕರಾದ ಆರ್. ರಾಮಕೃಷ್ಣ ವಂದಿಸಿದರು.

ವರದಿ: ಆರ್.ಕೆ.

ದ್ವೇಷ ಕಾರಲು 'ಪಾಕಿಸ್ತಾನ' ಎಂಬ ಪದವನ್ನು ಚತುರತೆಯಿಂದ ಹೆಣೆದಿದ್ದಾರೆ –ದಿಲ್ಲಿಯ 'ನ್ಯಾಯಮಂತ್ರಿ'ಗಳ ಬಗ್ಗೆ ದಿಲ್ಲಿಯ ನ್ಯಾಯಾಲಯದ ಟಿಪ್ಪಣಿ!

ಇದು ಅಮೃತ ಕಾಲ



2020ರ ದೆಹಲಿ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಇಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಮತ್ತು ಸಾಮಾಜಿಕ ಮಾಧ್ಯಮದಲ್ಲಿನ ಹೇಳಿಕೆಗಳಿಗಾಗಿ ಜನತಾ ಪ್ರಾತಿನಿಧ್ಯ ಕಾನೂನಿನ ಸೆಕ್ಷನ್ 125ರ ಅಡಿಯಲ್ಲಿ, ಅಂದರೆ ಚುನಾವಣೆಗೆ ಸಂಬಂಧಪಟ್ಟಂತೆ ಜನವರ್ಗಗಳ ನಡುವೆ ವೈರತ್ವವನ್ನು ಪ್ರಚೋದಿಸುವ ಆರೋಪಕ್ಕೆ ಒಳಗಾಗಿರುವ ಬಿಜೆಪಿ ನಾಯಕ ಮತ್ತು ಈಗ ದಿಲ್ಲಿ ಸರಕಾರದಲ್ಲಿ ಕಾನೂನು ಮತ್ತು ನ್ಯಾಯ ಮಂತ್ರಿಯಾಗಿರುವ ಕಪಿಲ್ ಮಿಶ್ರರವರು ತಮಗೆ ನೀಡಿದ ಸಮನ್ಸಿನ ವಿರುದ್ಧ ಹಾಕಿರುವ ಪರಿಷ್ಕರಣ ಅರ್ಜಿಯನ್ನು ದಿಲ್ಲಿಯ ರೌಸ್ ಅವೆನ್ಯೂ ನ್ಯಾಯಾಲಯ ವಜಾಮಾಡಿದೆ. ಮಿಶ್ರಾ ಅವರ ಪದದ ಬಳಕೆಯು ದ್ವೇಷವನ್ನು ಪ್ರಚೋದಿಸುವ ಉದ್ದೇಶಪೂರ್ವಕ ಪ್ರಯತ್ನವಾಗಿದೆ ಎಂದು ವಿಶೇಷ ನ್ಯಾಯಮೂರ್ತಿ ಜಿತೇಂದ್ರ ಸಿಂಗ್ ತಮ್ಮ ಆದೇಶದಲ್ಲಿ ಖಾರವಾಗಿ ಟಿಪ್ಪಣಿ ಮಾಡಿರುವುದಾಗಿ ವರದಿಯಾಗಿದೆ.

2020ರ ದಿಲ್ಲಿ ವಿಧಾನಸಭಾ ಚುನಾವಣಾ ಪ್ರಚಾರದ ವೇಳೆಯಲ್ಲಿ ಕಪಿಲ್ ಮಿಶ್ರ "ದಿಲ್ಲಿ ಮೇಂ ಛೋಟೇ ಛೋಟೇ ಪಾಕಿಸ್ತಾನ್ ಬನೇಂ" (ದಿಲ್ಲಿಯಲ್ಲಿ ಸಣ್ಣ–ಸಣ್ಣ ಪಾಕಿಸ್ತಾನಗಳಾಗಿವೆ) ಮತ್ತು "ಶಾಹೀನ್ ಬಾಗ್ ಮೇಂ ಪಾಕ್ ಕೀ ಎಂಟ್ರಿ" (ಶಾಹೀನ್ ಬಾಗ್‌ನಲ್ಲಿ ಪಾಕಿಸ್ತಾನದ ಪ್ರವೇಶ) ದಂತಹ ಹೇಳಿಕೆಗಳನ್ನು ಕೊಟ್ಟಿರುವುದಲ್ಲದೆ, ತನ್ನ ಸಾಮಾಜಿಕ ಮಾಧ್ಯಮದಲ್ಲಿ, ಫೆಬ್ರುವರಿ 8ರಂದು (ಅಂದರೆ ಚುನಾವಣಾ ದಿನದಂದು) ದಿಲ್ಲಿಯ ಬೀದಿಗಳಲ್ಲಿ ಇಂಡಿಯಾ–ಪಾಕಿಸ್ತಾನ್ ಸ್ಪರ್ಧೆ ನಡೆಯುತ್ತದೆ ಎಂದು ಪೋಸ್ಟ್ ಮಾಡಿರುವುದು ಮಾದರಿ ಚುನಾವಣಾ ಸಂಹಿತೆ ಮತ್ತು ಜನತಾ ಪ್ರಾತಿನಿಧ್ಯ ಕಾಯ್ದೆ(ಆರ್‌ಪಿಎ)ಯ ಉಲ್ಲಂಘನೆ ಎಂದು ಚುನಾವಣಾ ಅಧಿಕಾರಿ ದೂರು ದಾಖಲಿಸಿದ್ದರು.

ನವಂಬರ್ 11, 2023ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪ ಪಟ್ಟಿ ಸಲ್ಲಿಸಲಾಯಿತು. ಇದಕ್ಕೆ ಸಂಬಂಧಪಟ್ಟಂತೆ ಜೂನ್22, 2024ರಂದು ಅಡಿಷನಲ್ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಕಪಿಲ್ ಮಿಶ್ರರವರಿಗೆ ಸಮನ್ಸ್ ಹೊರಡಿಸಿತು. ಮಿಶ್ರ, ಒಂದು ತಿಂಗಳ ನಂತರ ಪರಿಷ್ಕರಣ ಅರ್ಜಿ ಸಲ್ಲಿಸಿದರು. ಮಿಶ್ರರವರ ಹೇಳಿಕೆಗಳಲ್ಲಿ ಎಲ್ಲಿಯೂ ಯಾವುದೇ ಜಾತಿ, ಸಮುದಾಯ, ಧರ್ಮ ಜನಾಂಗ ಅಥವ ಭಾಷೆಯ ಉಲ್ಲೇಖವಿಲ್ಲ, ಒಂದು ದೇಶದ ಉಲ್ಲೇಖವಷ್ಟೇ ಇದೆ, ಇದು ಆರ್‌ಪಿಎ(ಕಾಯ್ದೆ)ಯ ಅಡಿಯಲ್ಲಿ ನಿಷಿದ್ಧವಲ್ಲ ಎಂದು ಮಿಶ್ರ ಪರ ವಕೀಲರು ವಾದಿಸಿದರು.

"ಇದು ವಿವೇಚನಾಶೂನ್ಯ ಮತ್ತು ಅತ್ಯಂತ ಅಸಮರ್ಥನೀಯ ವಾದ, ಈ ಹೇಳಿಕೆಗಳಲ್ಲಿನ ನಿರ್ದಿಷ್ಟ ದೇಶದ ಸೂಚ್ಯ ಉಲ್ಲೇಖ ನಿಸ್ಸಂದೇಹವಾಗಿಯೂ ಒಂದು ನಿರ್ದಿಷ್ಟ ಧಾರ್ಮಿಕ ಸಮುದಾಯದ ವ್ಯಕ್ತಿಗಳನ್ನು ಕುರಿತ ಕೊಂಕುನುಡಿ, ಧಾರ್ಮಿಕ ಸಮುದಾಯಗಳ ನಡುವೆ ವೈರತ್ವವನ್ನು ಉಂಟು ಮಾಡುವಂತದ್ದೆಂದು ಕಾಣುತ್ತದೆ, ಇದನ್ನು ಒಬ್ಬ ವಿವೇಚನಾಶೀಲರು ಮಾತ್ರವಲ್ಲ, ಒಬ್ಬ ಸಾಮಾನ್ಯರೂ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು" ಎಂದು ವಿಶೇಷ ನ್ಯಾಯಾಧೀಶರು ಟಿಪ್ಪಣಿ ಮಾಡಿದರು.

"ವಿಭಜಕ ಮತ್ತು ಹೊರಗಿಡುವ ರಾಜಕೀಯದ ಫಲಿತಾಂಶ"

ಪರಿಷ್ಕರಣ ಅರ್ಜಿ ಸಲ್ಲಿಸಿದವರು ಆರೋಪಿತ ಹೇಳಿಕೆಗಳಲ್ಲಿ ಪಾಕಿಸ್ತಾನ ಎಂಬ ಪದವನ್ನು ಕೇವಲ ಚುನಾವಣೆಗಳಲ್ಲಿ ಮತ ಗಿಟ್ಟಿಸಿಕೊಳ್ಳಲು, ಅದು ಕೋಮುವಾದಿ ಧ್ರುವೀಕರಣ ಉಂಟು ಮಾಡಬಹುದೆಂಬ ಪರಿವೆಯಿಲ್ಲದೆ ದ್ವೇಷ ಉಗುಳಲು ಅತ್ಯಂತ ಚತುರತೆಯಿಂದ ಹೆಣೆದಿದ್ದಾರೆ ಎಂದು ತನ್ನ ಆದೇಶದಲ್ಲಿ ಹೇಳುತ್ತ, "ನಿಜ ಸಂಗತಿಯೆಂದರೆ, ಈ ಹಂತದಲ್ಲಿ, ಪರಿಷ್ಕರಣ ಅರ್ಜಿದಾರರ ಆರೋಪಿತ ಹೇಳಿಕೆಗಳು ದುರದೃಷ್ಟವಶಾತ್ ಸಾಮಾನ್ಯ ಮಾತುಕತೆಗಳಲ್ಲಿ ಒಂದು ನಿರ್ದಿಷ್ಟ ಧರ್ಮದ ಸದಸ್ಯರನ್ನು ಸೂಚಿಸುವ ಒಂದು ದೇಶದ ಬಗ್ಗೆ ಪರೋಕ್ಷವಾಗಿ ಹೇಳುವ ಮೂಲಕ, ಧರ್ಮದ ಆಧಾರದಲ್ಲಿ ವೈರತ್ವವನ್ನು ಉತ್ತೇಜಿಸುವ ಒಂದು ನಗ್ನ ಪ್ರಯತ್ನ" ಎನ್ನುತ್ತಲೇ ಕಪಿಲ್ ಮಿಶ್ರರವರ ಅರ್ಜಿಯನ್ನು ವಜಾ ಮಾಡಿದರು ಎಂದು ವರದಿಯಾಗಿದೆ.

ಈ ಸಂದರ್ಭದಲ್ಲಿ ನ್ಯಾಯಾಧೀಶರು ಹೇಳಿದ ಮಾತುಗಳು ಅತ್ಯಂತ ಗಮನಾರ್ಹ.

ಭಾರತದಲ್ಲಿ ಮತಗಳನ್ನು ಗಳಿಸಲು ಕೋಮು ಭಾವನೆಯ ಭಾಷಣಗಳನ್ನು ಆಶ್ರಯಿಸುವ ಪ್ರವೃತ್ತಿ ಇದೆ ಎಂದು ಅವರು ಹೇಳಿದರು. ಅಭ್ಯರ್ಥಿಗಳು ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ದುರ್ಬಲಗೊಳಿಸಬಹುದಾದ "ಉಗ್ರ ನಿಂದನೆ"ಯಲ್ಲಿ ತೊಡಗುವುದನ್ನು ತಡೆಯುವುದು ಚುನಾವಣಾ ಆಯೋಗದ ಸಾಂವಿಧಾನಿಕ ಬಾಧ್ಯತೆ ಎಂದು ಒತ್ತಿಹೇಳಿದ ಅವರು, ಆರ್‌ಪಿ ಕಾಯ್ದೆಯ ಸೆಕ್ಷನ್ 125ರ ಅಡಿಯಲ್ಲಿ ಅಪರಾಧವನ್ನು ಗಮನಕ್ಕೆ ತೆಗೆದುಕೊಳ್ಳಲು ಚುನಾವಣಾ ಅಧಿಕಾರಿಯ ದೂರು ಮತ್ತು ಅದನ್ನು ಸಮರ್ಥಿಸುವ ದಾಖಲೆಗಳಿವೆ ಎನ್ನುತ್ತ, ನ್ಯಾಯಾಲಯ ಅರ್ಜಿದಾರರಿಗೆ ಹೊರಡಿಸಿದ ಸಮನ್ಸ್ ಆದೇಶವನ್ನು ಎತ್ತಿಹಿಡಿದರು.

ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳು ಯಾವುದೇ ಚೈತನ್ಯಶೀಲ ಪ್ರಜಾಪ್ರಭುತ್ವದ ಅಡಿಪಾಯ, ಅದರಲ್ಲಿ ಕೋಮು ಸಾಮರಸ್ಯವನ್ನು ಕಾಪಾಡಿಕೊಳ್ಳುವ ಮಹತ್ವವನ್ನು ಅವರು ಒತ್ತಿ ಹೇಳಿದರು. ಭಾರತವು ಧಾರ್ಮಿಕ ವೈವಿಧ್ಯತೆಯನ್ನು ಅಳವಡಿಸಿಕೊಂಡಿದ್ದು, ಧಾರ್ಮಿಕ ಭಾವನೆಗಳನ್ನು ಸುಲಭವಾಗಿ ಹೊತ್ತಿಸಬಹುದಾದ "ನಾಜೂಕಿನ ವಾತಾವರಣ" ಅಸ್ತಿತ್ವದಲ್ಲಿದೆ ಎಂದು ಗಮನಿಸಿದ ನ್ಯಾಯಾಧೀಶರು, "ಇದು ದೇಶದ ಪ್ರಜಾಪ್ರಭುತ್ವ ಮತ್ತು ಬಹುತ್ವದ ಹಂದರಕ್ಕೆ ಬೆದರಿಕೆಯಾಗಿರುವ ವಿಭಜಕ ಮತ್ತು ಹೊರಗಿಡುವ ರಾಜಕೀಯದ ಫಲಿತಾಂಶವಾಗಿದೆ, ವಸಾಹತುಶಾಹಿಯ ಒಡೆದು ಆಳುವ ನೀತಿಯು ಭಾರತದಲ್ಲಿ ಇನ್ನೂ ಆಚರಣೆಯಲ್ಲಿದೆ ಎಂಬುದು ವಿಷಾದಕರ" ಎಂದು ಹೇಳಿದರು.

ದಿಲ್ಲಿಯ 2020ರ ಗಲಭೆಗಳು 2025ರ ಕಾನೂನು–ನ್ಯಾಯಮಂತ್ರಿ

ಇದಕ್ಕೆ ಎರಡು ದಿನಗಳು ಹಿಂದೆ, ಅದೇ 2020ರಲ್ಲಿ ಈಶಾನ್ಯ ದಿಲ್ಲಿಯಲ್ಲಿ 53 ಮಂದಿಯ ಪ್ರಾಣಹಾನಿ, ನೂರಾರು ಜನರಿಗೆ ಗಾಯ ಮತ್ತು ಹಲವಾರು ಕುಟಂಬಗಳಿಗೆ ಅಪಾರ ಹಾನಿ ತಂದೊಡ್ಡಿದ ಕೋಮುವಾದಿ ಹಿಂಸಾಚಾರದಲ್ಲಿ ಕಪಿಲ್‌ಮಿಶ್ರ ಶಾಮೀಲಾಗಿದ್ದು, ಅವರು ಮತ್ತು ಇತರರ ಮೇಲೆ ಎಫ್‌ಐಆರ್ ಹಾಕಬೇಕೆಂಬ ಅರ್ಜಿಗೆ ಸಂಬಂಧಪಟ್ಟಂತೆ ದಿಲ್ಲಿ ಪೋಲೀಸ್, ಇದು ಕಪಿಲ್‌ಮಿಶ್ರ ರವರ ವಿರುದ್ಧದ ಸಂಚಾಗಿದೆ, ತಾವು ಈ ಬಗ್ಗೆ ಈಗಾಗಲೇ ತನಿಖೆ ನಡೆಸಿದ್ದು, ಅವರ ವಿರುದ್ಧ ಯಾವುದೇ ಸಾಕ್ಷ್ಯ ದೊರೆತಿಲ್ಲ ಎಂದು ರೌಸ್ ಅವೆನ್ಯೂ ಕೋರ್ಟಿನ ಎಸಿಜೆಎಂ ಮುಂದೆ ಲಿಖಿತ ಹೇಳಿಕೆ ಸಲ್ಲಿಸಿದೆ, ನ್ಯಾಯಾಲಯ ಮಿಶ್ರ ಮತ್ತು ಇತರರ ಮೇಲೆ ಪ್ರಕರಣ ದಾಖಲಿಸಬೇಕೇ ಬೇಡವೇ ಎಂಬ ಬಗ್ಗೆ ಮಾರ್ಚ್ 24ರಂದು ಆದೇಶ ನೀಡುವುದಾಗಿ ಹೇಳಿದೆ ಎಂದು ವರದಿಯಾಗಿತ್ತು.

ಈ ಹಿಂಸಾಚಾರ ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ಪ್ರತಿಭಟಿಸುತ್ತಿದ್ದ ಕಾರ್ಯಕರ್ತರು, ವಿದ್ಯಾರ್ಥಿಗಳು ಮತ್ತು ಸ್ಥಳೀಯ ರಾಜಕಾರಣಿಗಳು ಹುಟ್ಟು ಹಾಕಿದ ಮೋದಿ ಸರಕಾರದ ಹೆಸರುಗೆಡಿಸುವ ಸಂಚಿನ ಭಾಗವಾಗಿತ್ತು ಎಂದು ದಿಲ್ಲಿ ಪೋಲೀಸ್ ಹೇಳುತ್ತಿದ್ದು, ಈ ಗಲಭೆಗಳ ಸಂದರ್ಭದಲ್ಲಿ ತಮ್ಮ ದೂರುಗಳನ್ನು ದಾಖಲಿಸಿಕೊಳ್ಳಲು ನಿರಾಕರಿಸಿದ್ದರಿಂದ ಕೆಲವು ನಾಗರಿಕರು ನ್ಯಾಯಾಲಯದ ಮೊರೆ ಹೋದರು. ಮಿಶ್ರಾ ಮುಸ್ಲಿಂ ಸಮುದಾಯದ ವಿರುದ್ಧ ಹಿಂಸಾಚಾರ ಪ್ರಚೋದಿಸುವಲ್ಲಿ ನೇರ ಮತ್ತು ಸಕ್ರಿಯ ಪಾತ್ರ ವಹಿಸಿದ್ದರು ಎಂದು ಹಲವು ಅರ್ಜಿಗಳಲ್ಲಿ ಆರೋಪಿಸಲಾಗಿದೆ, ಕೆಲವು ಅರ್ಜಿಗಳು ಪೋಲೀಸರೂ ಇದರಲ್ಲಿ ಶಾಮೀಲಾಗಿದ್ದರು ಎಂದು ಆರೋಪಿಸಿದ್ದವು.

ಈ ನಡುವೆ ದಿಲ್ಲಿ ಅಲ್ಪಸಂಖ್ಯಾತರ ಆಯೋಗ ನೇಮಿಸಿದ್ದ ಸತ್ಯಶೋಧನಾ ಸಮಿತಿ ಈ ಗಲಭೆಗಳಿಗೆ ಮಿಶ್ರಾ ಸೇರಿದಂತೆ ಬಿಜೆಪಿ ನಾಯಕರ ಪ್ರಚೋದನಾಕಾರಿ ಟಿಪ್ಪಣಿಗಳು ಕಾರಣ ಎಂಬ ತೀರ್ಮಾನಕ್ಕೆ ಬಂದಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

'ರೆವ್ಡಿ' ಸ್ಪರ್ಧೆಗಳ ನಂತರ ಈಗ ಬಜೆಟ್ ಕಡಿತಗಳಲ್ಲಿ ಸ್ಪರ್ಧೆ!

ಮಧ್ಯಪ್ರದೇಶದ ಬಜೆಟಿನಲ್ಲಿ ಆ ಸರಕಾರದ ಬಹುಪ್ರತಿಷ್ಠಿತ 'ಲಾಡ್ಲಿ ಬೆಹನಾ' ಯೋಜನೆಗೆ ಅನುದಾನದಲ್ಲಿ ಕಡಿತ ಮಾಡಿರುವುದು ಒಂದು ದೊಡ್ಡ ಸುದ್ದಿಯಾಗಿದೆ. ಏಕೆಂದರೆ ಇದು 2023ರ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಗೆ ಭಾರೀ ಗೆಲುವು ತಂದು ಕೊಟ್ಟ ಯೋಜನೆ ಎಂದು ಗುರುತಿಸಲ್ಪಟ್ಟಿತ್ತು. 21 ರಿಂದ 60 ವರ್ಷದವರೆಗಿನ ವಿವಾಹಿತೆಯರಿಗೆ ತಿಂಗಳಿಗೆ 1000 ರೂ.ಗಳ ಭರವಸೆ ನೀಡಿದ ಯೋಜನೆಯಿದು. ನಂತರ ಈ ಮೊತ್ತವನ್ನು 'ರಾಜಕೀಯ ಸ್ಪರ್ಧೆ'ಯಿಂದಾಗಿ 1250 ರೂ.ಗೆ ಏರಿಸಲಾಯಿತು.

ಕಳೆದ ಬಜೆಟಿನಲ್ಲಿ ಈ ಬಹುಮುಖ್ಯ ಯೋಜನೆಗೆ 18,984 ಕೋಟಿ ರೂ. ಕೊಡಲಾಗಿತ್ತು. ಈ ಪ್ರಮಾಣವನ್ನೇ ಉಳಿಸಿಕೊಳ್ಳಬೇಕಾಗಿದ್ದರೂ, ಹಣದುಬ್ಬರವನ್ನು ಪರಿಗಣಿಸಿ ಇದನ್ನು 20,000 ಕೋಟಿಗಾದರೂ ಏರಿಸಬೇಕಿತ್ತು. ಬದಲಿಗೆ 18,669 ಕೋಟಿ ರೂ.ಗೆ ಇಳಿಸಲಾಗಿದೆ.

ಹಾಗೆ ನೋಡಿದರೆ, ಮೊತ್ತದ ದೃಷ್ಟಿಯಿಂದ ಕಡಿತ ಕೇವಲ 315 ಕೋಟಿ ರೂ. ಆದರೆ ಪಕ್ಕದ ಮಹಾರಾಷ್ಟ್ರದ ಅದೇ ಬಿಜೆಪಿಯ ನೇತೃತ್ವದ ಸರಕಾರ ಇಂತಹುದೇ 'ಲಾಡ್ಕೀ ಬಹನ್'(ಮುದ್ದಿನ ಸೋದರಿ) ಯೋಜನೆಗೆ ಅನುದಾನದಲ್ಲಿ 10,000 ಕೋಟಿ ರೂ., ಅಂದರೆ ಶೇ. 20ರಷ್ಟು ಕಡಿತ ಮಾಡಿದೆ, 46,000 ಕೋಟಿಯಿಂದ 36,000ಕ್ಕೆ ಇಳಿಸಿದೆ. ಅಲ್ಲದೆ ಇದರಲ್ಲಿ ನೀಡಲಾಗುವ ಮಾಸಿಕ ಮೊತ್ತವನ್ನು 1500 ರೂ.ನಿಂದ 2100ಕ್ಕೆ ಏರಿಸುವ ಆಶ್ವಾಸನೆಯ ಬಗ್ಗೆ ಈ ಬಾರಿಯ ಬಜೆಟ್ ಮೌನವಾಗಿದೆ ಎಂದೂ ವರದಿಯಾಗಿದೆ.

ಇದಕ್ಕೆ ಕಾರಣ ಮಹಾರಾಷ್ಟ್ರ ತನ್ನ ಇತಿಹಾಸದಲ್ಲೇ ಅತಿ ಹೆಚ್ಚಿನ 9.3 ಲಕ್ಷ ಕೋಟಿ ರೂ.ಗಳ ಸಾಲವನ್ನು ಎದುರಿಸುತ್ತಿದೆ, ಜತೆಗೆ ಅತಿ ಹೆಚ್ಚಿನ ಪ್ರಮಾಣದ ರೆವಿನ್ಯೂ ಕೊರತೆಯನ್ನು ಕೂಡ ಎದುರಿಸುತ್ತಿದೆ ಎಂದು ವಿಪಕ್ಷಗಳು, ಶಿವಸೇನೆ ಮತ್ತು ಕಾಂಗ್ರೆಸ್ ಟೀಕಿಸಿವೆ.

ಎಲ್ಲ ಹೂಡಿಕೆಗಳಲ್ಲಿ ವಿವಿಧ ಮಟ್ಟಗಳ ರಿಸ್ಕ್ ಇರುತ್ತದೆ. ಹೂಡಿಕೆದಾರರು ಈ ಬಗ್ಗೆ ಎಲ್ಲ ಶರತ್ತುಗಳನ್ನು ಅರ್ಥಮಾಡಿಕೊಂಡು ಹೂಡಿಕೆ ಮಾಡಬೇಕು ಎಂದು ಮೊದಲೇ ಎಚ್ಚರಿಸಲಾಗುತ್ತದೆ. ಹಾಗೆಯೇ ಮಧ್ಯಪ್ರದೇಶದ 'ಬೆಹನಾ' ಅಂದರೆ ಸೋದರಿಯರು ತಮ್ಮ ಮತದಾನವನ್ನು ಒಂದು ಹೂಡಿಕೆ, 'ಪ್ರಜಾಸತ್ತಾತ್ಮಕ ಹೂಡಿಕೆ' ಎಂದು ಭಾವಿಸಿ ಮಾಡಿದ್ದರೆ ಅದರ ರಿಸ್ಕನ್ನೂ ಅನುಭವಿಸಬೇಕು ತಾನೇ. "ನಮ್ಮ" (ಅಂದರೆ ಆಳುವವರ) ಅಸಮರ್ಥತೆ ಆ ರಿಸ್ಕ್ ಎನ್ನುತ್ತದೆ ಪಕ್ಕದಲ್ಲಿರುವ ಸಜಿತ್‌ಕುಮಾರ್ ರವರ ಈ ವ್ಯಂಗ್ಯಚಿತ್ರ.

ಬಹುಶಃ ಅದನ್ನು ಅಸಮರ್ಥತೆ ಎನ್ನುವುದಕ್ಕಿಂತ ವರ್ಗ ಹಿತಾಸಕ್ತಿ ಎನ್ನುಬಹುದೇನೋ!

ಇತ್ತ ಕರ್ನಾಟಕದಲ್ಲಿಯೂ ಸಾಲದ ಹೊರೆ 7.81 ಲಕ್ಷ ಕೋಟಿ ರೂ.ಗಳಾಗಿದೆ. 2025–26ರ ಅಂತ್ಯದ ವೇಳೆಗೆ ಇದು 8.41 ಲಕ್ಷ ಕೋಟಿ ರೂ. ಆಗಲಿದೆ ಎಂದು ಇಲ್ಲಿ ವಿಪಕ್ಷವಾಗಿರುವ ಬಿಜೆಪಿ ಟೀಕಿಸಿದೆ! ಇದರಲ್ಲಿ ಸಿದ್ಧರಾಮಯ್ಯನವರ ಸರಕಾರದ ಕೊಡುಗೆ ಶೇ. 63ರಷ್ಟು ಎಂದು ವಿಪಕ್ಷದ ಮುಖಂಡರು ಲೆಕ್ಕ ಹಾಕಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸುತ್ತ ಕೇಂದ್ರದಲ್ಲಿ ಕಳೆದ 11 ವರ್ಷಗಳಿಂದ ಆಳುತ್ತಿರುವ ಮೋದಿ ಸರಕಾರದ ಅಡಿಯಲ್ಲಿ ದೇಶದ ಮೇಲಿನ ಸಾಲದ ಹೊರೆ ರೂ. 53.11 ಲಕ್ಷ ಕೋಟಿಯಿಂದ 200 ಲಕ್ಷ ಕೋಟಿಗೇರಿದೆಯಲ್ಲಾ ಎಂದು ಕರ್ನಾಟಕದ ಮುಖ್ಯಮಂತ್ರಿಗಳು ಮರುಪ್ರಶ್ನೆ ಹಾಕಿದ್ದಾರೆ.

ಇಲ್ಲಿ ಮೂಲ ಪ್ರಶ್ನೆ, ಸಾಲದ ಹೊರೆಗೆ ವಿವಿಧ ಜನವಿಭಾಗಗಳಿಗೆ ತುಸುವಾದರೂ ಪರಿಹಾರ ಕೊಡುವ ಇಂತಹ ಯೋಜನೆಗಳೇ ಕಾರಣವೇ, ಅಥವ ಉಳ್ಳವರಿಂದ ತೆರಿಗೆಗಳನ್ನು ವಸೂಲಿ ಮಾಡುವ ಬದಲು, ವಿವಿಧ 'ಉತ್ತೇಜನೆ'ಗಳ ಹೆಸರಲ್ಲಿ, ಪ್ರಭುತ್ವದ ಬೊಕ್ಕಸದಿಂದಲೇ ಹೆಚ್ಚೆಚ್ಚು ಪ್ರಮಾಣದಲ್ಲಿ ವಿನಾಯ್ತಿಗಳನ್ನು, ಸಬ್ಸಿಡಿಗಳನ್ನು, ಸಾಲಮನ್ನಾಗಳನ್ನು ಕೊಡುತ್ತಲೇ ಬರುತ್ತಿರುವ ನೀತಿಗಳೇ ಎಂಬುದು. ವಿಪಕ್ಷದ ಮುಖಂಡರು, ಅವರು ಕಾಂಗ್ರೆಸ್‌ನವರಾಗಲೀ, ಬಿಜೆಪಿಯವರಾಗಲೀ ಈ ಪ್ರಶ್ನೆಯನ್ನು ಎತ್ತುವುದೇ ಇಲ್ಲ.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



ಬೆಳವಣಿಗೆಯ ಎರಡು ಪರ್ಯಾಯ ನಮೂನೆಗಳು

ಎರಡು ಪರ್ಯಾಯ ಬೆಳವಣಿಗೆಯ ನಮೂನೆಗಳನ್ನು ನಾವು ನೋಡಿದ್ದೇವೆ. ಒಂದು ನಿಯಂತ್ರಣ ನೀತಿಗಳಡಿಯ ಬೆಳವಣಿಗೆ ಮತ್ತು ಎರಡು ನವ-ಉದಾರವಾದಿ ನೀತಿಗಳಡಿಯದ್ದು. ಅಭಿವೃದ್ಧಿಯನ್ನು ಅಳೆಯಲು ಬಳಸುವ ತಲಾ ಜಿಡಿಪಿಯ ಬೆಳವಣಿಗೆಯ ಮಾನದಂಡಕ್ಕೆ ಪರ್ಯಾಯವಾಗಿ ದುಡಿಯುವ ಜನರ ಅಗತ್ಯ ಸರಕು-ಸೇವೆಗಳ ತಲಾ ಬಳಕೆಯ ಬೆಳವಣಿಗೆಯ ಮಾನದಂಡದಿಂದ ಅಳೆದಾಗ, ನವ ಉದಾರವಾದಿ ಅವಧಿಯು ನಿಯಂತ್ರಣ ನೀತಿಗಳ ಅವಧಿಗಿಂತ ಕೆಟ್ಟದಾಗಿದೆ ಎಂಬುದು ತಿಳಿದುಬರುತ್ತದೆ. ಅದಕ್ಕಿಂತಲೂ ಮಿಗಿಲಾಗಿ, "ಮಿಗುತೆ" ಆಹಾರ ಧಾನ್ಯಗಳ ದಾಸ್ತಾನು ವ್ಯರ್ಥವಾಗಿ ಬಿದ್ದಿದ್ದರೂ, ಉದ್ಯೋಗಗಳನ್ನು ಹೆಚ್ಚಿಸುವಲ್ಲಿ ನವ ಉದಾರವಾದಿ ಆಳ್ವಿಕೆಯೇ ಅಡ್ಡಿಯಾಗುತ್ತದೆ. ಪ್ರಗತಿಯನ್ನು ಸಾಧಿಸುವಲ್ಲಿ ನವ ಉದಾರವಾದಿ ವ್ಯವಸ್ಥೆಯು ಕಳಪೆಯಾಗಿದೆ ಮಾತ್ರವಲ್ಲ, ಅದು ವಿಚಾರಹೀನವೂ ಆಗಿದೆ. ಇದರರ್ಥ ಈ ಮೊದಲಿನ ನಿಯಂತ್ರಣ ನೀತಿಗಳ ವ್ಯವಸ್ಥೆಗೆ ನಾವು ಹಿಂತಿರುಗಬೇಕಾಗಿಲ್ಲ, ಬದಲಿಗೆ, ರಫ್ತು-ಪ್ರಧಾನ ಬೆಳವಣಿಗೆಗೆ ಪರ್ಯಾಯವಾಗಿ ಪ್ರಭುತ್ವದ ಆಶ್ರಯದಲ್ಲಿ ಕೃಷಿ-ಪ್ರಧಾನ ಬೆಳವಣಿಗೆ ಬರಬೇಕು.

ಪ್ರೊ.ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಇಂದಿನ ನವ ಉದಾರವಾದೀ ನೀತಿಗಳ ಅವಧಿಯಲ್ಲಿ ಕೃಷಿ ಉತ್ಪಾದನೆಯ ಬೆಳವಣಿಗೆಯ ದರ, ಅದರಲ್ಲೂ ವಿಶೇಷವಾಗಿ ಆಹಾರ ಧಾನ್ಯಗಳ ಉತ್ಪಾದನೆಯ ಬೆಳವಣಿಗೆಯ ದರ, ಅದರ ಹಿಂದಿನ ನಿಯಂತ್ರಣ ನೀತಿಗಳ ಅವಧಿಗಿಂತಲೂ ಉನ್ನತವಾಗಿದೆ ಎಂದು ಯಾರೂ ಹೇಳಲಾಗದು. ತುಸು ಕಡಿಮೆ ಇದೆಯಾದರೂ ಖಂಡಿತವಾಗಿಯೂ ಹೆಚ್ಚಲ್ಲ ಎಂಬುದನ್ನು ಒಪ್ಪೋಣ. ಮತ್ತೊಂದೆಡೆ, ಜಿಡಿಪಿಯ ಬೆಳವಣಿಗೆ ದರವು ಗಮನಾರ್ಹವಾಗಿ ಉನ್ನತವಾಗಿದೆ ಎಂದು ಅಂದಾಜಿಸಲಾಗಿದೆ. ಆದರೆ, ಈ ಬೆಳವಣಿಗೆಯ ದರವನ್ನು ಹಿಗ್ಗಿಸಿ ಬಿಂಬಿಸಲಾಗಿದೆ ಎಂದು ಅನೇಕ ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. ಇರಲಿ, ಉದಾರವಾದೀ ಅವಧಿಯಲ್ಲಿ ಬೆಳವಣಿಗೆ ದರವು ಗಮನಾರ್ಹವಾಗಿ ಉನ್ನತವಾಗಿದೆ ಎಂಬುದನ್ನೂ ಒಪ್ಪೋಣ. ಆದರೆ, ನಿಯಂತ್ರಣ ನೀತಿಗಳ ಅವಧಿಯಲ್ಲಿ ಆಹಾರ ಧಾನ್ಯಗಳ ಬೆಲೆಗಳ ಮೇಲೆ ಸತತ ಒತ್ತಡವಿತ್ತು. ಇದು, ಧಾನ್ಯಗಳಿಗೆ ಬೇಡಿಕೆ ಆಗ ಅಧಿಕವಾಗಿತ್ತು ಎಂಬುದನ್ನು ಮತ್ತು ಇದನ್ನು ಹಲವು ವಿಷಮ ಪರಿಸ್ಥಿತಿಗಳಲ್ಲಿ, ಸಾರ್ವಜನಿಕ ವೆಚ್ಚಗಳ ಕಡಿತ ಮತ್ತು ಬೆಲೆ-ನಿಯಂತ್ರಣದ ಕ್ರಮಗಳ ಮೂಲಕ ನಿಭಾಯಿಸಲಾಗುತ್ತಿತ್ತು ಎಂಬುದನ್ನು ಇದು ಸೂಚಿಸುತ್ತದೆ. ಆದರೆ, ನವ ಉದಾರವಾದಿ ಯುಗದಲ್ಲಿ ಸರ್ಕಾರದ ಮೇಲೆ ಸರಾಸರಿಯಾಗಿ "ಮಿಗುತಾಯ" ಆಹಾರ ಧಾನ್ಯಗಳ ದಾಸ್ತಾನುಗಳ ಭಾರ ಬಿದ್ದಿದೆ. ಆಹಾರ ಧಾನ್ಯಗಳ ಸಂಗ್ರಹಣೆಯ ಪ್ರಮಾಣವು ಸಾಮಾನ್ಯವಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ವಿತರಿಸಲ್ಪಡುವ ಪ್ರಮಾಣಕ್ಕಿಂತಲೂ ದೊಡ್ಡದಿದೆ. ಮತ್ತು ಭಾರತವು ಆಹಾರ ಧಾನ್ಯಗಳನ್ನು ರಫ್ತು ಕೂಡ ಮಾಡುತ್ತಿದೆ: 2023-24ರಲ್ಲಿ $10.4 ಬಿಲಿಯನ್ ಮೊತ್ತದ ಅಕ್ಕಿಯನ್ನು ರಫ್ತುಮಾಡಿದೆ.

ದೇಶದಲ್ಲಿ ತಲಾ ವರಮಾನದ ಬೆಳವಣಿಗೆ ದರ ಏರುತ್ತಿರುವಾಗ ಆಹಾರ ಧಾನ್ಯ ಬಳಕೆಯ ಬೆಳವಣಿಗೆಯ ದರ ಇಳಿಯುತ್ತಿದೆ ಎಂಬುದನ್ನು ವಿವರಿಸುವುದಾದರೂ ಹೇಗೆ? ನವ ಉದಾರವಾದದ ವಕ್ತಾರರಿಗೆ ಈ ಸಮಸ್ಯೆಯು ಆಶ್ಚರ್ಯಕರವಾಗಿ ಕಾಣುವುದಿಲ್ಲ. ಜನರ ಸ್ಥಿತಿ-ಗತಿಗಳು ಉತ್ತಮವಾಗುತ್ತಿದ್ದಂತೆಯೇ, ಅವರ ವರಮಾನದ ಏರಿಕೆಗೆ ಅನುಗುಣವಾಗಿ ಅವರ ಆಹಾರ ಧಾನ್ಯದ ಬಳಕೆಯು ಇಳಿಕೆಯಾಗಿರುತ್ತದೆ. ಆದ್ದರಿಂದ, ಧಾನ್ಯ ಮಾರುಕಟ್ಟೆಯಲ್ಲಿ ಕಂಡುಬರುವ "ಮಿಗುತಾಯ" ದಾಸ್ತಾನುಗಳು ನವ ಉದಾರವಾದಿ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರ ಸ್ಥಿತಿ-ಗತಿಯೂ ಸುಧಾರಿಸುತ್ತಿರುವುದರ ಸೂಚನೆ ಎಂದು ಅವರು ವಾದಿಸುತ್ತಾರೆ.

ಆದರೆ, ಪುರಾವೆಗಳು ಈ ವಾದವನ್ನು ನೇರವಾಗಿ ಅಲ್ಲಗಳೆಯುತ್ತವೆ. ತಮ್ಮ ವರಮಾನದ ಏರಿಕೆಯ ಪ್ರಮಾಣಕ್ಕೆ ಹೋಲಿಸಿದರೆ ಜನರು ಸೇವಿಸುವ ಆಹಾರ ಧಾನ್ಯಗಳ ಪ್ರಮಾಣವು ಇಳಿಕೆಯಾಗಿರಬಹುದು. ಆದರೆ ನಾವು ಜನರ ನೇರ ಮತ್ತು ಪರೋಕ್ಷ (ಸಂಸ್ಕರಿಸಿದ ಆಹಾರಗಳ ಮೂಲಕ ಮತ್ತು ಪಶು-ಪ್ರಾಣಿ ಉತ್ಪನ್ನಗಳಿಗೆ ಆಹಾರವಾಗಿ ಬಳಕೆಯಾಗುವ ಧಾನ್ಯಗಳ ಮೂಲಕ) ಆಹಾರ ಧಾನ್ಯಗಳ ಒಟ್ಟು ಬಳಕೆಯನ್ನು ಗಣನೆಗೆ ತೆಗೆದುಕೊಂಡಾಗ ಬಳಕೆಯ ಒಟ್ಟು ಪ್ರಮಾಣವು ಕಡಿಮೆಯಾಗುವುದಿಲ್ಲ. ಗ್ರಾಮೀಣ ಭಾರತದಲ್ಲಿ ಮತ್ತು ನಗರ ಭಾರತದಲ್ಲಿಯೂ ಒಂದು ಕನಿಷ್ಠ ಮಟ್ಟದ ಕ್ಯಾಲೋರಿ ಸೇವನೆಯನ್ನು ದಿನಾ ಪಡೆಯಲು ಸಾಧ್ಯವಾಗದ ಜನರ ಶೇಕಡಾವಾರು ಪ್ರಮಾಣವು ಕಾಲಕ್ರಮೇಣ ಇಳಿಕೆಯಾಗಿರುವ ಬಗ್ಗೆ ಸ್ಪಷ್ಟ ಪುರಾವೆಗಳಿವೆ. ಉದಾಹರಣೆಗೆ, ಗ್ರಾಮೀಣ ಭಾರತದಲ್ಲಿ, ತಲಾ 2200 ಕ್ಯಾಲೋರಿಗಳನ್ನು ದಿನಾ ಪಡೆಯಲಾಗದ ವ್ಯಕ್ತಿಗಳ ಶೇಕಡಾವಾರು ಸಂಖ್ಯೆಯು 1993-94 ರಲ್ಲಿ 58, 2011-12ರಲ್ಲಿ 68 ಮತ್ತು 2017-18ರಲ್ಲಿ 80ಕ್ಕಿಂತಲೂ ಮೇಲಿತ್ತು. ಆದ್ದರಿಂದ, ನವ ಉದಾರವಾದಿ ಯುಗದಲ್ಲಿರುವ ಧಾನ್ಯಗಳ ಈ "ಮಿಗುತಾಯ"ವು ಬೃಹತ್ ದುಡಿಯುವ ಜನಸಮೂಹದ ಮೇಲೆ ಒತ್ತಾಯವಾಗಿ ಹೇರಿದ ವರಮಾನದ ಸಂಕುಚನದಿಂದ ಉಂಟಾದ ಹಾನಿಯ ಪರಿಣಾಮವಾಗಿದೆ. ಮತ್ತು ಜಾಗತಿಕ ಹಸಿವು ಸೂಚ್ಯಂಕದಿಂದ ಹಿಡಿದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಇದು ಮಹಿಳೆಯರಲ್ಲಿ ರಕ್ತಹೀನತೆಯ ಪ್ರಕರಣಗಳ ಆತಂಕಕಾರಿ ಹೆಚ್ಚಳವನ್ನು ತೋರಿಸುತ್ತದೆ) ಯವರೆಗಿನ ಹಲವಾರು ಸೂಚಿಗಳು ಆಹಾರ ಸೇವನೆಯಲ್ಲಿ ಇಳಿಕೆಯಾಗಿದೆ ಎಂಬುದನ್ನು ದೃಢಪಡಿಸುತ್ತವೆ.

ಬೆಳವಣಿಗೆಯ ದರವನ್ನು ನಿರ್ಬಂಧಿಸುವ ಅಂಶಗಳು

ಈ ರೀತಿಯ ಎರಡು ಪರ್ಯಾಯ ಬೆಳವಣಿಗೆಯ ನಮೂನೆಗಳನ್ನು ನಾವು ಈಗ ನೋಡಿದೆವು. ಮೊದಲನೆಯದರಲ್ಲಿ, ಅಂದರೆ, ನಿಯಂತ್ರಣ ನೀತಿಗಳಡಿಯ ಬೆಳವಣಿಗೆಯ ವಿಧಾನದಲ್ಲಿ, ಅರ್ಥವ್ಯವಸ್ಥೆಯ ಒಟ್ಟಾರೆ ಬೆಳವಣಿಗೆ ದರವು ಮೂಲತಃ ಆಹಾರ ಧಾನ್ಯ-ನಿರ್ಬಂಧಿತವಾಗಿತ್ತು: ಏಕೆಂದರೆ, ಆಹಾರ ಧಾನ್ಯಗಳ ಉತ್ಪಾದನೆಯ ಬೆಳವಣಿಗೆಯ ದರವು, ಧಾನ್ಯಗಳ ಮೇಲಿನ ಹೆಚ್ಚುವರಿ ಬೇಡಿಕೆಯಿಂದ ಉಂಟಾಗುವ ಗಮನಾರ್ಹ ಆಹಾರ ಬೆಲೆ ಹಣದುಬ್ಬರವನ್ನು ತಪ್ಪಿಸದೆ, ಒಟ್ಟಾರೆಯಾಗಿ ಉನ್ನತ ದರದ ಬೆಳವಣಿಗೆಗೆ ಅವಕಾಶ ನೀಡುವುದಿಲ್ಲ. ಅಭಿವೃದ್ಧಿಯಾಗದ ಒಂದು ಮಿಶ್ರ ಅರ್ಥವ್ಯವಸ್ಥೆಯಲ್ಲಿ, ಅಂದರೆ "ಉದಾರೀಕರಣ"ಕ್ಕಿಂತ ಹಿಂದಿನ ಭಾರತದಲ್ಲಿ ಇದ್ದ ರೀತಿಯ ಅರ್ಥವ್ಯವಸ್ಥೆಯಲ್ಲಿ, ಸಂಪನ್ಮೂಲ ಕ್ರೋಢೀಕರಣದ ಆರ್ಥಿಕ ಸಮಸ್ಯೆ ಎಂದರೆ, ಕೃಷಿ ಬೆಳವಣಿಗೆಯ ದರವನ್ನು ಹೆಚ್ಚಿಸುವ ಒಂದು ವಾಸ್ತವಿಕ ಸಮಸ್ಯೆಯಲ್ಲದೆ ಬೇರೇನೂ ಅಲ್ಲ ಎಂದು ಮೈಕೆಲ್ ಕಲೆಕ್ಕಿ ಈ ಹಿಂದೆಯೇ ಸೂಚಿಸಿದ್ದರು. ಬೇರೆ ರೀತಿಯಲ್ಲಿ ಹೇಳುವುದಾದರೆ, ಹಣಕಾಸಿನ ಸಂಪನ್ಮೂಲಗಳ ಕೊರತೆಯಿಂದ ಒಟ್ಟಾರೆ ಆರ್ಥಿಕ ಬೆಳವಣಿಗೆಯು ನಿರ್ಬಂಧಿತವಾಗಿಲ್ಲ, ಬದಲಿಗೆ, ಆಹಾರ ಧಾನ್ಯಗಳ ಬೆಳವಣಿಗೆಯ ದರ ವಿಧಿಸಿದ ಮಿತಿಯಿಂದ ನಿರ್ಬಂಧಿತವಾಗಿದೆ (ಆಮೂಲಾಗ್ರ ಭೂ ಸುಧಾರಣೆಗಳನ್ನು ಕೈಗೊಳ್ಳದ ಕಾರಣದಿಂದಾಗಿ ಒಟ್ಟಾರೆ ಬೆಳವಣಿಗೆಯು ನಿರ್ಬಂಧಿಸಲ್ಪಟ್ಟಿದೆ ಎಂದು ಕಲೆಕ್ಕಿ ವಾದಿಸಿದ್ದರು).

ಎರಡನೆಯ ವಿಧಾನವೆಂದರೆ, ಆಹಾರ ಧಾನ್ಯಗಳ "ಮಿಗುತಾಯ" ಕಂಡುಬರುವ ನವ ಉದಾರವಾದಿ ನಮೂನೆ. ಇದರಲ್ಲಿ ಒಟ್ಟಾರೆ ಬೆಳವಣಿಗೆಯ ದರವನ್ನು ನಿರ್ಬಂಧಿಸುವ ಒಂದು ಅಂಶವೆಂದರೆ, ಅದು ರಫ್ತುಗಳ ಬೆಳವಣಿಗೆಯೇ. ಒಂದು ಉನ್ನತ ದರದಲ್ಲಿ ವಿಸ್ತಾರಗೊಳ್ಳುತ್ತಿರುವ ವಿಶ್ವ ಮಾರುಕಟ್ಟೆಯಲ್ಲಿ ತಾನು ಹೊಂದಿರುವ ಪಾಲನ್ನು ಕಾಪಾಡಿಕೊಳ್ಳುವುದು ಸಾಧ್ಯವಾದರೆ ಅಥವಾ ಇತರ ದೇಶಗಳಿಗೆ ನಷ್ಟವನ್ನುಂಟುಮಾಡಿ ವಿಶ್ವ ಮಾರುಕಟ್ಟೆಯಲ್ಲಿ ತನ್ನ ಪಾಲನ್ನು ಹೆಚ್ಚಿಸಿಕೊಳ್ಳುವುದು ಸಾಧ್ಯವಾದರೆ ಒಂದು ದೇಶವು ವೇಗವಾಗಿ ಬೆಳೆಯಬಹುದು. ವಿಶ್ವ ಮಾರುಕಟ್ಟೆಯಲ್ಲಿರುವ ಪೈಪೋಟಿಯಿಂದಾಗಿ ತಂತ್ರಜ್ಞಾನದ ಮತ್ತು ಸಂರಚನಾತ್ಮಕ ಬದಲಾವಣೆಗಳು ಸಂಭವಿಸುತ್ತವೆ. ಅವು ಸ್ವತಃ ಶ್ರಮದ ಉತ್ಪಾದಕತೆಯ ಬೆಳವಣಿಗೆಯ ಮೂಲಕ ಪ್ರಕಟಗೊಳ್ಳುತ್ತವೆ. ಅರ್ಥವ್ಯವಸ್ಥೆಯು ವೃದ್ಧಿಸುತ್ತಿರುವಾಗ ಉದ್ಯೋಗಗಳು ಒಂದು ನಿರ್ದಿಷ್ಟ ದರದಲ್ಲಿ ಹೆಚ್ಚಬಹುದು. ಆದರೆ, ಈ ದರವು ಉದ್ಯೋಗಾಕಾಂಕ್ಷಿಗಳ ಸಂಖ್ಯೆಯ ಬೆಳವಣಿಗೆಯ ದರಕ್ಕಿಂತ ಸಾಮಾನ್ಯವಾಗಿ ಕಡಿಮೆಯಿರುತ್ತದೆ. ಈ ಪರಿಸ್ಥಿತಿಯಲ್ಲಿ ಹೊಸಬರು ಮತ್ತು ಸರ್ಕಾರದಿಂದ ಹಿಂದೆ ಪಡೆಯುತ್ತಿದ್ದ ಬೆಂಬಲ ಮತ್ತು ರಕ್ಷಣೆಯನ್ನು ಕಳೆದುಕೊಂಡು ಬಡತನಕ್ಕೆ ತಳ್ಳಲ್ಪಟ್ಟ ಸ್ಥಳಾಂತರಗೊಂಡ ರೈತರು



ಮತ್ತು ಕುಶಲಕರ್ಮಿಗಳು ಕಾರ್ಮಿಕ-ಬಲಕ್ಕೆ ಸೇರ್ಪಡೆಯಾಗುತ್ತಾರೆ ಮತ್ತು ಕಾರ್ಮಿಕ-ಬಲದ ಗಾತ್ರಕ್ಕೆ ಹೋಲಿಸಿದರೆ ಮೀಸಲು ಕಾರ್ಮಿಕ ಪಡೆಯ ಗಾತ್ರವು ದೊಡ್ಡದಾಗುತ್ತದೆ. ಇದರಿಂದಾಗಿ ಒಟ್ಟಾರೆಯಾಗಿ ದುಡಿಯುವ ಜನರ ನಿಜ ತಲಾ ವರಮಾನದಲ್ಲಿ ಇಳಿಕೆ ಸಂಭವಿಸುತ್ತದೆ ಅಥವಾ ನಾವು ಈ ಹಿಂದೆ ಹೇಳಿದ ರೀತಿಯ ವರಮಾನ ಸಂಕೋಚನಕ್ಕೆ ಕಾರಣವಾಗುತ್ತದೆ. ಈ ವಿದ್ಯಮಾನದಿಂದಾಗಿ ಆಹಾರ ಧಾನ್ಯಗಳ ದಾಸ್ತಾನಿನಲ್ಲಿ "ಮಿಗುತಾಯ" ಕಾಣುತ್ತದೆ.

ತಲಾ ಜಿಡಿಪಿ ಬದಲು ತಲಾ ಅಗತ್ಯ ಬಳಕೆ

ಇದರಿಂದ ಎರಡು ತೀರ್ಮಾನಗಳಿಗೆ ಬರಬಹುದು: ಮೊದಲನೆಯದು, ಅಭಿವೃದ್ಧಿಯನ್ನು ಜನ ಕಲ್ಯಾಣದ ದೃಷ್ಟಿಯಲ್ಲಿ ಅಳೆಯ ಬೇಕೆಂದಾದರೆ, ಒಂದು ದೇಶದ ಪ್ರಗತಿಯನ್ನು ಅಳೆಯಲು ಒಂದು ಪ್ರಮುಖ ಚರ ಅಂಶವಾಗಿ ಸಾಮಾನ್ಯವಾಗಿ ಬಳಸಲಾಗುತ್ತಿರುವ ತಲಾ ಜಿಡಿಪಿಯ ಬೆಳವಣಿಗೆಯ ಬದಲಾಗಿ, ದುಡಿಯುವ ಜನರು ಬಳಸಲು ಸಾಧ್ಯವಾಗುವ ಸರಕು ಮತ್ತು ಸೇವೆಗಳ "ನಿಜ" ಪ್ರಮಾಣದ ತಲಾ ಬೆಳವಣಿಗೆಯನ್ನು ಪರಿಗಣಿಸಬೇಕು, ಅಂದರೆ, ನಾವು "ಅಗತ್ಯಗಳು" ಎಂದು ಕರೆಯುವ ಅನುಭೋಗದಲ್ಲಿ ತಲಾ ಬೆಳವಣಿಗೆಯನ್ನು ಪರಿಗಣನೆಗೆ ತಗೊಳ್ಳಬೇಕು. ಅದರಲ್ಲಿ ಆಹಾರ ಧಾನ್ಯಗಳ ನೇರ ಮತ್ತು ಪರೋಕ್ಷ ಬಳಕೆಯು ಒಂದು ಗಮನಾರ್ಹ ಭಾಗವಾಗಿರುತ್ತದೆ. ಇದು ನಿಯಂತ್ರಣ ನೀತಿಗಳ ವ್ಯವಸ್ಥೆ ಮತ್ತು ನವ ಉದಾರವಾದಿ ವ್ಯವಸ್ಥೆ ಎರಡಕ್ಕೂ ಒಂದೇ ರೀತಿಯಲ್ಲಿ ಅನ್ವಯಿಸಬಹುದಾದ ಅಳತೆಯಾಗಿದೆ. ನಿಯಂತ್ರಣ ನೀತಿಗಳ ವ್ಯವಸ್ಥೆಯಲ್ಲಿ "ಅಗತ್ಯ ವಸ್ತುಗಳ" ನಿಜ ಬಳಕೆಯ ತಲಾ ಬೆಳವಣಿಗೆಯ ದರವು ಆಂತರಿಕವಾಗಿ ಉತ್ಪಾದನೆಯಾಗುವ ಅಗತ್ಯ ವಸ್ತುಗಳ ತಲಾ ಬೆಳವಣಿಗೆಯ ದರಕ್ಕೆ ಸಮನಾಗಿರುತ್ತದೆ (ಇಂತಹ ವ್ಯವಸ್ಥೆಯಲ್ಲಿ ಹಣಕಾಸಿನ ಹರಿವಿನ ಮೇಲಿದ್ದ ಸರ್ವವ್ಯಾಪಿ ನಿಯಂತ್ರಣಗಳಿಂದಾಗಿ ವಿದೇಶಿ ವಿನಿಮಯವು ಹೇರಳವಾಗಿ ಲಭಿಸುತ್ತಿರಲಿಲ್ಲವಾದ್ದರಿಂದ ಆಹಾರ ಧಾನ್ಯಗಳನ್ನು ಮತ್ತು ಇತರ ಅಗತ್ಯವಸ್ತುಗಳನ್ನು ಆಮದು ಮಾಡಿಕೊಳ್ಳುವುದು ಬಹಳ ತ್ರಾಸದಾಯಕವಾಗಿತ್ತು). ಆದರೆ, ನವ ಉದಾರವಾದಿ ಆಳ್ವಿಕೆಯಲ್ಲಿ ದುಡಿಯುವ ಜನರ ಕೈಯಲ್ಲಿ ಸಾಕಷ್ಟು ಕೊಳ್ಳುವ ಶಕ್ತಿ ಇಲ್ಲದಿರುವುದರಿಂದ ಈ ತಲಾ ಬೆಳವಣಿಗೆ-ದರವನ್ನು "ಅಗತ್ಯ ವಸ್ತುಗಳ" ಬೇಡಿಕೆಯ ಬೆಳವಣಿಗೆಯ ದರವು ಸೀಮಿತಗೊಳಿಸುತ್ತದೆ.

ಎರಡನೆಯದು, ಅರ್ಥವ್ಯವಸ್ಥೆಯಲ್ಲಿ ಅಂತಹ ಸರಕುಗಳ "ಮಿಗುತಾಯ" ಲಭ್ಯವಿರುವ ಪರಿಸ್ಥಿತಿಯಲ್ಲಿ ಉದ್ಯೋಗಗಳನ್ನು ಹೆಚ್ಚಿಸುವ ಮೂಲಕ ಅಗತ್ಯವಸ್ತುಗಳ ಬಳಕೆಯ ಬೆಳವಣಿಗೆಯ ದರವನ್ನು ಹೆಚ್ಚಿಸಬಹುದು. ಹಾಗೆ ಮಾಡದಿರುವುದು ಒಂದು ಅವಿವೇಕದ ಪರಿಸ್ಥಿತಿಯಾಗುವುದರಿಂದ ಅದನ್ನು ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ ಮೂಲಕ ಸರಿಪಡಿಸಬೇಕು. ಇದನ್ನು ಪ್ರಭುತ್ವವು ತನ್ನ ವೆಚ್ಚಗಳನ್ನು ಹೆಚ್ಚಿಸಿಕೊಳ್ಳುವ ಮೂಲಕ

ಪುಟ 15 ಕ್ಕೆ

16ನೇ ಬೆಂಗಳೂರು ಫಿಲ್ಮೋತ್ಸವ....

ಪುಟ 16 ರಿಂದ

ತನ್ನ ಕೂಲಿಯ ದೊಡ್ಡ ಭಾಗದ ಹಣ ತೆರಬೇಕು. ಕೂಲಿ ಹಣ ಪಡೆಯಲು ಅವನಿಗೆ ಗೋಗರೆಯಬೇಕು. ತನ್ನ ದೈನಂದಿನ ಆವಶ್ಯಕತೆ ಪೂರೈಕೆಯಲ್ಲದೆ, ಮನೆಗೆ ತಾಯಿಯ ಆರೈಕೆಗೆ ಕಳಿಸಿಕೊಡುವುದಲ್ಲದೆ, ಕಾನೂನು ಬದ್ಧವಾಗಿ ಫ್ರಾನ್ಸಿನಲ್ಲಿ ಆಶ್ರಯ ಪಡೆಯುವುದಕ್ಕೆ ಕಾಗದ ಪತ್ರ ತಯಾರಿಗೆ ದೊಡ್ಡ ಮೊತ್ತದ ಹಣ ಕೂಡಿಸಬೇಕು.

ಅವನಿಗೆ ಎರಡು ದಿನಗಳಲ್ಲಿ ಫ್ರಾನ್ಸ್ ಸರಕಾರದ ವಲಸೆ ವಿಭಾಗದ ಜತೆ ಸಂದರ್ಶನವಿದೆ. ಅದರಲ್ಲಿ ಮಂಜೂರಾದರೆ ಸರಿ, ಇಲ್ಲವಾದರೆ ಒಂದು ತಿಂಗಳಲ್ಲಿ ಊರಿಗೆ ಮರಳಬೇಕು. ಅವನ ಭವಿಷ್ಯತ್ತೇ ಸಂದರ್ಶನದ ಮೇಲೆ ಅವಲಂಬಿಸಿದೆ. ಆ ಎರಡು ದಿನಗಳಲ್ಲಿ ಸುಲೈಮಾನ್ ಉದ್ವೇಗಭರಿತ ಜೀವನ ಸ್ಥಿತಿಯನ್ನು ಮತ್ತು ಸಂದರ್ಶನವನ್ನು ಫಿಲಂ ತೋರಿಸುತ್ತದೆ. ಅವನಿಗೆ ಸಂದರ್ಶನಕ್ಕೆ ಬೇಕಾದ ಮಾಹಿತಿ ಸಿಕ್ಕಿದೆ, ಆದರೆ ದುಡ್ಡು ಕೊಟ್ಟಿಲ್ಲ ಅಂತ ದೇಶಬಾಂಧವ ಏಜೆಂಟನಿಂದ ಅದಕ್ಕೆ ಬೇಕಾದ ಕಾಗದ ಪತ್ರ ಸಿಕ್ಕಿಲ್ಲ. ಈ ವಾರದ ಕೂಲಿ ಸಿಕ್ಕಿ, ಅದನ್ನು ಕೊಟ್ಟರೆ ಮಾತ್ರ ಸಂದರ್ಶನದ ಮೊದಲು ಕಾಗದ ಪತ್ರ ಸಿಗುತ್ತದೆ. ಕೂಲಿಯನ್ನು ಮೊದಲೇ ಕೊಡಲು ಒಪ್ಪಿಸಲು ಕಂಪನಿ ಮತ್ತು ಬ್ಯಾಜ್ ಒಡೆಯನೊಂದಿಗೆ ಸುಲೈಮಾನ್ ಸತತ ಪ್ರಯತ್ನ ಮಾಡುತ್ತಾನೆ. ಆದರೆ ಈ ಅವಧಿಯಲ್ಲಿ ನಡೆಯುವ ಸರಣಿ ಘಟನೆಗಳು ಅವನ ಉದ್ವೇಗ ಆತಂಕಗಳನ್ನು ಇನ್ನಷ್ಟು ಹೆಚ್ಚಿಸುತ್ತವೆ.

ಉದ್ವೇಗದ ಭರದಲ್ಲಿ ಕಾರಿನೊಂದಿಗೆ ಅಘಘಾತವಾಗಿ ಸೈಕಲ್ ಗೂ, ಡೆಲಿವರಿ ಮಾಡಬೇಕಿದ್ದ ಒಂದು ಆಹಾರ ಸಾಮಗ್ರಿಗೂ ಸ್ವಲ್ಪ ಡ್ಯಾಮೇಜ್ ಆಗಿ ಒಬ್ಬ ಗ್ರಾಹಕಿ ಅದನ್ನು ಸ್ವೀಕರಿಸುವುದಿಲ್ಲ. ಡೆಲಿವರಿ ಅಕೌಂಟ್ ಸ್ಥಗಿತವಾಗುತ್ತದೆ. ಅದನ್ನೇ ನೆಪ ಮಾಡಿಕೊಂಡು 'ಕಾನೂನುಬದ್ಧ ವಲಸಿಗ' ಅವನ ಬಾಕಿ ಕೂಲಿಯನ್ನೇ ಕೊಡಲು ನಿರಾಕರಿಸುತ್ತಾನೆ. ಇದು ದೈಹಿಕ ಘರ್ಷಣೆಗೆ ಕಾರಣವಾಗಿ ಸುಲೈಮಾನ್ ಗಾಯಗೊಳ್ಳುತ್ತಾನೆ. ಪೂರ್ಣ ದುಡ್ಡು ಕೊಡಲು ಸಾಧ್ಯವಾಗದಿದ್ದರೂ ಗೋಗರೆದು ದೇಶಬಾಂಧವ ಏಜೆಂಟನಿಂದ ಕಾಗದ ಪತ್ರ ಪಡೆದುಕೊಳ್ಳುತ್ತಾನೆ. ಈ ನಡುವೆ ಅವನ ಪ್ರೇಯಸಿಯ ಕರೆ ಬಂದು 'ನನಗೆ ಒಬ್ಬ ಇಂಜಿನೀಯರ್ ನಿಂದ ಮದುವೆ ಆಫರ್ ಬಂದಿದೆ. ಏನು ಮಾಡಲಿ' ಅಂತ ಹೇಳುವುದು ಅವನನ್ನು ಇನ್ನಷ್ಟು ಜರ್ಝರಿತನಾಗಿಸುತ್ತದೆ.

ತನ್ನ ದೇಶದ ಸರಕಾರದ ವಿರುದ್ಧ ರಾಜಕೀಯ ಪ್ರತಿಭಟನೆ ಮತ್ತು ಅದರ ಪರಿಣಾಮದ ರಾಜಕೀಯ ದಮನದ ಕಾರಣದಿಂದ ದೇಶ ಬಿಡಬೇಕಾಯಿತು. ಹಾಗಾಗಿ ರಾಜಕೀಯ ಸಂತ್ರಸ್ತನಾಗಿ ಫ್ರಾನ್ಸ್ ನಲ್ಲಿ ಆಶ್ರಯ ಕೊಡಬೇಕು ಎಂಬ ಕತೆ ಹೇಳಲು ದೇಶಬಾಂಧವ ಏಜೆಂಟನ ಸಲಹೆ. ವಲಸೆ ಇಲಾಖೆಯ ಅಧಿಕಾರಿಗೆ ಹೇಳುವ "ಸುಲೈಮಾನ್ ನ ಕಥೆ" ಎಂಬುದೇ ಫಿಲಂ ನ ಶೀರ್ಷಿಕೆಯ ಅರ್ಥ. ಅದಕ್ಕೆ ಬೇಕಾದ ಕಾಗದ ಪತ್ರ ಮತ್ತು ಮಾಹಿತಿ ಕೊನೆಗೂ ಸಿಕ್ಕಿದೆ. ಸುಲೈಮಾನ್ ಸರಕಾರ–ವಿರೋಧಿ ರಾಜಕೀಯ ಸಂಘಟನೆಯೊಂದರ ಸ್ಥಳೀಯ ಘಟಕವೊಂದರ ಪದಾಧಿಕಾರಿಯಾಗಿದ್ದರ (ಫೇಕ್) ಪತ್ರ ಕೊಡುತ್ತಾನೆ. ಯಾವ ಪ್ರತಿಭಟನಾ ಪ್ರದರ್ಶನದಲ್ಲಿ ಬಂಧಿಸಲಾಯಿತು, ಯಾವ ಜೈಲಿನಲ್ಲಿಡಲಾಯಿತು, ಇತರ ಪದಾಧಿಕಾರಿಗಳು, ಮೇಲಿನ ಹಂತದ ಅಧಿಕಾರಿಗಳ ಹೆಸರುಗಳು ಇತ್ಯಾದಿ (ವಾಸ್ತವವೆನಿಸುವ ಆದರೆ ಅವನ



ದಿ ಪಾರ್ಟಿ ಈಸ್ ಓವರ್

ಸಂದರ್ಭದಲ್ಲಿ ಫೇಕ್) ಮಾಹಿತಿಗಳನ್ನು ಅವನಿಗೆ ಕೊಡಲಾಗಿದೆ.

ಆದರೆ ಸುಲೈಮಾನ್ ನಿಜವಾಗಿಯೂ ರಾಜಕೀಯ ಕಾರ್ಯಕರ್ತನಾಗಿರುವುದಿಲ್ಲ. ಸುಳ್ಳು ಯಾಕೆ ಹೇಳಲಿ? ನಿಜ ಹೇಳಿದರೇನು ಎಂಬ ಸುಲೈಮಾನ್ ಪ್ರಶ್ನೆಗೆ ಏಜೆಂಟ ಗದರುತ್ತಾನೆ. ಸುಮ್ಮನೆ ಹೇಳಿಕೊಟ್ಟಷ್ಟು ಹೇಳು. ಈ ಕತೆ ಆಶ್ರಯ ಪಡಲು ಒಂದೇ ಮಾರ್ಗವೆನ್ನುತ್ತಾನೆ. ಏಜೆಂಟ್ ಇದೇ ಕತೆ ಎಲ್ಲರಿಗೂ ಕೊಡುತ್ತಿದ್ದಾನೆ. ಹಾಗಾಗಿ ಹಲವರ ಅರ್ಜಿ ತಿರಸ್ಕರಿಸಲಾಗಿದೆ ಎಂದು ಸುಲೈಮಾನ್ ಕೇಳಿರುತ್ತಾನೆ. ಅವನ ಸ್ನೇಹಿತನೊಬ್ಬ ನಿನ್ನ ನಿಜವಾದ ಕತೆ ಹೇಳಿಬಿಡು ಎನ್ನುತ್ತಾನೆ. ಸುಲೈಮಾನ್ ಹೇಳಿಕೊಟ್ಟ ಕತೆ ಹೇಳಬೇಕೋ ಅಥವಾ ತನ್ನ ನಿಜ ಕತೆ ಹೇಳಬೇಕೋ, ಎರಡರಲ್ಲೂ ತಿರಸ್ಕೃತವಾಗುವ ಅಪಾಯವಿದೆ ಎಂಬ ಸಂದಿಗ್ಧದಲ್ಲಿರುತ್ತಾನೆ. ಸುಲೈಮಾನ್ ಯಾವ ಕತೆ ಹೇಳ್ತಾನೆ? ಅವನ ನಿಜವಾದ ಕತೆಯೇನು? ಯಾವ ಕತೆ ಆಶ್ರಯ ಪಡೆಯಲು ಸಹಾಯಕವೆಂಬ ಸಂದಿಗ್ಧವನ್ನು ಸುಲೈಮಾನ್ ಹೇಗೆ ಪರಿಹರಿಸುತ್ತಾನೆ ಎಂಬುದನ್ನು ಒಂದು ಅನಿರೀಕ್ಷಿತ ಮತ್ತು ಸಶಕ್ತ ಕ್ಲೈಮಾಕ್ಸ್ ನಲ್ಲಿ ತಿಳಿಸುವಲ್ಲಿ ಫಿಲಂ ಪರಿಣಾಮಕಾರಿಯಾಗಿದೆ.

ರಾತ್ರಿ ಆಶ್ರಯ ತಾಣದಲ್ಲಿ ಆಫ್ರಿಕನ್ ವಲಸಿಗರು ಮತ್ತು ಒಬ್ಬ ರೆಸ್ಟೋರೆಂಟರ್ ಹಾಗೂ ಗ್ರಾಹಕ ಮಾತನಾಡಿಸುವ ಮಾನವೀಯತೆ ಸೋದರತ್ವ ಮೆರೆಯುವ ದೃಶ್ಯಗಳನ್ನು ಬಿಟ್ಟರೆ, ಇಡೀ ಫಿಲಂನಲ್ಲಿ ಸಂದರ್ಶನದಲ್ಲಿ ಸಫಲನಾಗುತ್ತೇನೋ ಎಂಬುದರ ಬಗ್ಗೆ ಸುಲೈಮಾನ್ ನ ಆತಂಕ, ಉದ್ವೇಗದ ಭಾವ ದಟ್ಟವಾಗಿದೆ. ಸುಲೈಮಾನ್ ನ ಜೀವನದ ಪ್ರತಿ ಕ್ಷಣವನ್ನೂ ಆಹಾರ ಡೆಲಿವರಿ ಆಪ್ ಆವರಿಸಿಕೊಂಡಿದ್ದು ಅದೂ ಒಂದು ಕಾಣದ ಪಾತ್ರವಾಗಿರುತ್ತದೆ. ಅದೇ ರೀತಿ ಅವನ ಸೈಕಲ್ ಸಹ ಸುಲೈಮಾನ್ ನ ಜೀವನೋಪಾಯದ, ಅಸ್ತಿತ್ವದ ಭಾಗವಾಗಿ ಒಂದು ಪಾತ್ರವಾಗಿ ಬಿಡುತ್ತದೆ.

ಸೈಕಲ್ ಗೆ ಇನ್ನೊಂದು ರೀತಿಯ ಮಹತ್ವವಿದೆ. 1940ರ ದಶಕದ "ಬೈಸಿಕಲ್ ಥೀವ್ಸ್" (ಬೈಸಿಕಲ್ ಕಳ್ಳರು) ಎಂಬ ವಿಟ್ಟೋರಿಯಾ ಡಿ ಸಿಕಾ ಅವರ ಪ್ರಸಿದ್ಧ ಇಟಾಲಿಯನ್ ನವ–ವಾಸ್ತವವಾದಿ ಫಿಲಂ ನ ನಮ್ಮ ಕಾಲದ ಆವೃತ್ತಿಯಂತೆ ಸುಲೈಮಾನ್, ಆಹಾರ ಡೆಲಿವರಿ ಆಪ್ ಮತ್ತು ಅವನ ಸೈಕಲ್ ಕತೆ ಕಾಣುತ್ತದೆ. ಭೀಕರ ಅಸಮಾನತೆ ಸೃಷ್ಟಿಸಿರುವ ಇಂದಿನ ಬಂಡವಾಳಶಾಹಿ ಜಗತ್ತಿನ ಹೃದಯಹೀನ ಶೋಷಣೆಯ ಅಸ್ತ್ರವಾದ ಆಪ್ ಆರ್ಥಿಕತೆ, ವಲಸಿಗ ಕಾರ್ಮಿಕರನ್ನು ಜಗತ್ತಿನ ನಗರ ಪ್ರದೇಶಗಳ ಅತ್ಯಂತ ಕಠಿಣ ಉದ್ಯೋಗಗಳ ಬೇಗುದಿಗೆ ತಳ್ಳಿದ್ದರ ದಾರುಣ ಸ್ಥಿತಿಗೆ ಕನ್ನಡಿಯಾಗುತ್ತದೆ.

ಈ ಫಿಲಂ ನ ನಿರ್ದೇಶಕ ಮತ್ತು ಚಿತ್ರಕತೆ ಬರೆದ ಬೋರಿಸ್ ಲೊಕಿನೆ ಮತ್ತು ಸುಲೈಮಾನ್ ಪಾತ್ರ ವಹಿಸಿರುವ ಅಬೌ ಸಂಗಾರೆ ಈ ಕಾಲದ ಒಂದು ಮಹತ್ವದ ಫಿಲಂ ಕೊಟ್ಟಿದ್ದಾರೆ. ಅಬೌ ಸಂಗಾರೆ ನಿಜಜೀವನದಲ್ಲಿ ಪಡಲಾರದ ಪಾಡು ಪಟ್ಟು ಫ್ರಾನ್ಸಿಗೆ ಬಂದ 'ಕಾನೂನು ಬಾಹಿರ ವಲಸಿಗ'ನಂತೆ. ಹಾಗಾಗಿಯೇ ಏನೋ ಅವನದ್ದು ನಟನೆ ಎಂದೇ ಅನಿಸುವುದಿಲ್ಲ.

3. 'ದಿ ಪಾರ್ಟಿ ಈಸ್ ಓವರ್' (ಪಾರ್ಟಿ ಮುಗಿದಿದೆ)

ಮೊದಲೆರಡು ಫಿಲಂಗಳು ನಿರಾಶ್ರಿತ ವಲಸಿಗರ ದಾರುಣ ಸ್ಥಿತಿಯನ್ನು ತೋರಿಸಿದರೆ, ಈ ಫಿಲಂ ಯುರೋಪಿನ ಶ್ರೀಮಂತರು ವಲಸಿಗರಿಗೆ ಮತ್ತು ಅವರ ಸಂಕಷ್ಟಗಳಿಗೆ ತೋರಬಹುದಾದ ಪ್ರತಿಕ್ರಿಯೆಯ ವಿಡಂಬನಾತ್ಮಕ ಚಿತ್ರಣ. ಈ ಫಿಲಂ ಸ್ಪಾನಿಶ್/ಫ್ರೆಂಚ್ ಆಗಿದ್ದು ದಕ್ಷಿಣ ಸ್ಪೈನ್ ನ ಅಂಡುಲಾಶಿಯ ಪ್ರಾಂತ್ಯದ ಪ್ರದೇಶವೊಂದರಲ್ಲಿ ನೆಲೆ ಹೊಂದಿದೆ. ಸೆನೆಗಲ್ ನ ಹದಿಹರೆಯದ 'ಕಾನೂನುಬಾಹಿರ ನಿರಾಶ್ರಿತ ವಲಸಿಗ' ಬಿಲಾಲ್ ಪೋಲೀಸರಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಒಂಟಿ ಶ್ರೀಮಂತ ಮಹಿಳೆ ಕಾರ್ಮಿನಾಳ ಕೋಟೆಯಂತಹ ತೋಟದಿಂದ ಸುತ್ತುವರೆದ ವಿಶಾಲ ಬಂಗಲೆಯ ಶೆಡ್ ನಲ್ಲಿ ಅಡಗುತ್ತಾನೆ. ಶೆಡ್ ನಿಂದಲೇ ತಡರಾತ್ರಿಯವರೆಗೆ ಕಾರ್ಮಿನಾ ಮತ್ತವಳ ಶ್ರೀಮಂತ ಮೋಜಿನ ಪಾರ್ಟಿಯನ್ನು ದೂರದಿಂದ ಗಮನಿಸುತ್ತಿದ್ದು ಒಂದು ದಿನ ಶೆಡ್ ನ್ನು ಯಾಕೋ ತೆರೆದ ಕಾರ್ಮಿನಾ ಕಣ್ಣಿಗೆ ಬೀಳುತ್ತಾನೆ. ಪೋಲಿಸರಿಗೆ ಕೊಡದಂತೆ ಅಥವಾ ತನ್ನನ್ನು ಅಲ್ಲಿಂದ ಅಟ್ಟದಂತೆ ಅಂಗಲಾಚುತ್ತಾನೆ.

ಆ ನಂತರ ಅವನ ಜೀವನ ಬದಲಾಗುತ್ತದೆ. ಕಾರ್ಮಿನಾ ಊಟ, ಬಟ್ಟೆ, ಪುಸ್ತಕ ಕೊಟ್ಟರೂ ಅವನಿಗೆ ಅದು ಒಂದು ಜೈಲಾಗಿ, ಚಿನ್ನದ ಪಂಜರವಾಗಿ ಕಾಣುತ್ತದೆ. ತಾನು ಪ್ಯಾರೀಸಿಗೆ ಹೋಗಿ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಓದಬೇಕು, ತನ್ನನ್ನು ಹತ್ತಿರದ ನಗರಕ್ಕೆ ಒಯ್ದು ಬಿಡಬೇಕು ಎಂಬ ಅವನ ಕೋರಿಕೆಯನ್ನು ಆಕೆ ತಿರಸ್ಕರಿಸುತ್ತಾಳೆ. ಯಾರ ಕಣ್ಣಿಗೂ, ಅಲ್ಲಿ ಕೆಲಸ ಮಾಡುತ್ತಿರುವ ಲೂಪ್ ಕಣ್ಣಿಗೂ ಬೀಳಬಾರದೆಂದು ತಾಕೀತು ಮಾಡುತ್ತಾಳೆ. ಆಗಾಗ ತನ್ನ ಬೆಡ್ ರೂಮ್ ಗೂ ಒಯ್ಯುತ್ತಾಳೆ, ಕೆಲವೊಮ್ಮೆ ಶೆಡ್ ನಲ್ಲಿ ಲಾಕ್ ಮಾಡುತ್ತಾಳೆ. ಆಗಾಗ ಜನಾಂಗೀಯ ಬೈಗುಳ ಮತ್ತು ದ್ವೇಷವನ್ನು ತೋರಿಸುತ್ತಾಳೆ. ಒಮ್ಮೆ ದಯಾಮಯಿ, ಇನ್ನೊಮ್ಮೆ ಕ್ರೂರಿ, ಮತ್ತೊಮ್ಮೆ ಅಸಂಗತವಾಗಿ ವರ್ತಿಸುವ ಕಾರ್ಮಿನಾ ಳ ವರ್ತನೆಯಿಂದ ಆಕ್ರೋಶಗೊಂಡ ಬಿಲಾಲ್ ನ ಅಲ್ಲಿಂದ ಓಡಿ ಹೋಗುವ ಪ್ರಯತ್ನವನ್ನು ತಡೆಯುತ್ತಾಳೆ. ಇನ್ನೊಮ್ಮೆ ಪ್ರಯತ್ನಿಸಿದರೆ ಪೋಲಿಸ್ ಕರೆಯುವುದಾಗಿ ಬೆದರಿಸುತ್ತಾಳೆ. ಕೆಲಸದಾಕೆ ಲೂಪೆ ಕಣ್ಣಿಗೆ ಬಿದ್ದ ಮೇಲೆ, ಆಕೆಯ ಅನುಕಂಪ ಸಿಕ್ಕಿದ ಮೇಲೆ ಮತ್ತು ಅದು ಕಾರ್ಮಿನಾಗೆ ತಿಳಿದ ಮೇಲೆ ಬಿಲಾಲ್ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ. ಇವೆಲ್ಲವೂ ಸೇರಿ ಕಾರ್ಮಿನಾಳ ಹುಟ್ಟಿನ ಹಬ್ಬದ ಭವ್ಯ ಪಾರ್ಟಿಯಲ್ಲಿ ಬಿಲಾಲ್ ಪರಿಸ್ಥಿತಿ ವಿಪರೀತಕ್ಕೆ ಹೋಗುತ್ತದೆ.

ಪಾರ್ಟಿಯಲ್ಲಿ ಮದ್ಯ, ಮಾದಕ ದ್ರವ್ಯ ಸೇವನೆಯಿಂದ ಮತ್ತಿನಲ್ಲಿರುವ ಕಾರ್ಮಿನಾ ಮತ್ತು ಅವಳ ಶ್ರೀಮಂತ ಸ್ನೇಹಿತ ಸ್ನೇಹಿತೆಯರು ಬಿಲಾಲ್ ನನ್ನು ವಿಚಿತ್ರ ವಸ್ತುವಿನಂತೆ ಕಾಣುತ್ತಾರೆ. ಹಾಡು ಹೇಳಲು ನೃತ್ಯ ಮಾಡಲು ಒತ್ತಾಯಿಸುತ್ತಾರೆ. ದುರ್ವರ್ತನೆ ಮಾಡುತ್ತಾರೆ. ಅವರ ಕೋರಿಕೆ ಮನ್ನಿಸದಿದ್ದರೆ ಜನಾಂಗೀಯ ಬೈಗುಳದ ಸುರಿಮಳೆ ಗರೆಯುತ್ತಾರೆ. ದಾಳಿ ಮಾಡುತ್ತಾರೆ. ಬೆದರಿಸುತ್ತಾರೆ. ಈ ನಡುವೆ ಕೆಲಸದಾಕೆ ಲೂಪೆ ಮತ್ತು ಕಾರ್ಮಿನಾಳ ನಡುವೆ ಜಟಾಪಟಿ ನಡೆಯುತ್ತದೆ. ಪಾರ್ಟಿ ಅಸ್ತವ್ಯಸ್ತವಾಗುತ್ತದೆ. ಬಿಲಾಲ್ ಈ ಕ್ರೇಜಿ ಪಾರ್ಟಿ ಯ ಅರಾಜಕತೆ ಬಳಸಿ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಾ? ಲೂಪೆ ಸಹಾಯ ಮಾಡುತ್ತಾಳಾ? ಎಂಬುದನ್ನು ದೀರ್ಘ ಅಸಂಗತವೆನಿಸುವ ಪಾರ್ಟಿ ಸೀನ್ ನಲ್ಲಿ ನೋಡಬಹುದು.

ಇಡೀ ಫಿಲಂ ನ ಘಟನಾವಳಿಗಳನ್ನು ಅಸಂಗತ ನಾಟಕದಂತೆ ಹೆಣೆಯಲಾಗಿದೆ. ಕಾರ್ಮಿನಾ, ಲೂಪೆ ಮತ್ತು ಬಿಲಾಲ್ ರ ಮುಖ್ಯ ಪಾತ್ರಗಳನ್ನು ಸ್ಪೈನಿನ (ಯುರೋಪಿನ ಅಥವಾ ವಿಕಸಿತ ದೇಶಗಳ) ಶ್ರೀಮಂತ ಕುಲೀನರು, ತಮ್ಮದೇ ನಾಡಿನ ಕೆಳವರ್ಗದ ದುಡಿಯುವ ಜನ ಮತ್ತು ಇತರ ನಾಡುಗಳ ನಿರಾಶ್ರಿತ ವಲಸಿಗರ ಜತೆ ಯಾವ ವರ್ತನೆ ಮಾಡುತ್ತಾರೆ ಎಂಬುದನ್ನು ರೂಪಕಾತ್ಮಕವಾಗಿ ಬಿಂಬಿಸಲು ಬಳಸಲಾಗಿದೆ. ಪೋಲಿಸ್ ಅಧಿಕಾರಿ, ಕಾರ್ಮಿನಾಳ ಸಂಬಂಧಿಕರು, ಶ್ರೀಮಂತ ಗೆಳೆಯರ ಪಾತ್ರಕ್ಕೂ ಅದೇ ಅನ್ವಯಿಸುತ್ತದೆ. ಇತರರೊಡನೆ ದರ್ಪದ, ಚೆಲ್ಲಾಟ ನಡೆಸುವ, ದುರುಪಯೋಗ ಮಾಡುವ, ಸ್ವಾರ್ಥಿ ಧೋರಣೆ ಕಾರ್ಮಿನಾಳ ವರ್ತನೆ ಒಂದು ಕಡೆ ಹಾಗೂ ಇನ್ನೊಂದು ಕಡೆ ಬಿಲಾಲ್ ಜತೆ ವರ್ತನೆ ಕ್ಷುಲ್ಲಕದಿಂದ ಆರಂಭಿಸಿ ವಿಕಾರಕ್ಕೆ ಮತ್ತು ಕೇಡಿಗೆ ತಿರುಗುವುದು? ಹೀಗೆ ಶ್ರೀಮಂತ ಕಾರ್ಮಿನಾ ಳನ್ನು ಚಿತ್ರಿಸಲಾಗಿದೆ. ಆ ಮೂಲಕ ತನ್ನ ಕಾಲ ಮುಗಿದಿದ್ದರೂ ಸವಲತ್ತು, ಅಧಿಕಾರ ಬಿಟ್ಟು ಕೊಡದ ಶ್ರೀಮಂತ ವರ್ಗದ ಪ್ರತಿನಿಧಿಯಾಗಿ ತೀಕ್ಷ್ಣ ಟೀಕೆ ಮತ್ತು ವಿಡಂಬನೆಗೆ ಬಳಸಲಾಗಿದೆ. ಯುರೋಪಿನ ಸಾಮ್ರಾಜ್ಯಶಾಹಿ ಶೋಷಣೆ ಆಫ್ರಿಕಾದ ನಿರಾಶ್ರಿತ ವಲಸೆಗೆ ನೇರವಾಗಿ ಕಾರಣವಾಗಿರುವುದು ಮತ್ತು ಬದಲಿಗೆ ಆಫ್ರಿಕನ್ನನ್ನೇ ನಿಂದಿಸಿ ಬಲಿಪಶು ಮಾಡುವ ಎಡಬಿಡಂಗಿತನವನ್ನು ಬಿಲಾಲ್ ರೋಷಭರಿತವಾದ ಸಂದರ್ಭದಲ್ಲಿ ಕಟುವಾಗಿ ಟೀಕಿಸುವುದು ಇದಕ್ಕೆ ಪುಷ್ಟಿ ನೀಡುತ್ತದೆ.


ಯುರೋಪಿನ ಶ್ರೀಮಂತರ ಅಸಂಗತತೆ ಮತ್ತು ಸ್ವಪ್ರತಿಷ್ಠತೆಯನ್ನು ಕಟು ಟೀಕೆ ಮಾಡಿದರೂ, ಈ ಫಿಲಂ ಅದರ ಹೆಸರು ಹೇಳುವಂತೆ ನೋಡುಗರನ್ನು ಸೇರಿಸಿ 'ಪಾರ್ಟಿ'ಯ ವಿನೋದಮಯ ತುಂಟ ವಾತಾವರಣ ಸೃಷ್ಟಿಸುತ್ತದೆ ಮತ್ತು ವಿಷಯವನ್ನು ಅಷ್ಟು ಗಂಭೀರವಲ್ಲವೋ ಎಂಬಂತೆ ನಿರ್ವಹಿಸುತ್ತದೆ.

ಇದು ನಿರ್ದೇಶಕಿ ಎಲೆನಾ ಮನ್ರಿಕ್ ಅವರ ಮೊದಲ ಫೀಚರ್ ಫಿಲಂ. ಅವರು ಹಲವಾರು ಫಿಲಂ ಗಳ ನಿರ್ಮಾಣದಲ್ಲಿ ದೀರ್ಘ ಕಾಲದಿಂದ ತೊಡಗಿದ್ದು ನಿರ್ದೇಶನ, ಚಿತ್ರಕತೆಗೆ ಮೊದಲ ಬಾರಿ ಹೊರಳಿದ್ದಾರೆ.

ಸಾಮಿಯ

ಸಾಮಿಯ ಯೂಸುಫ್ ಒಮರ್ ಎಂಬ ಸೊಮಾಲಿಯಾದ ಮಹಿಳಾ ಒಲಿಂಫಿಕ್ಸ್ ಆಟಗಾರ್ತಿಯ ಜೀವನದ ಮೇಲಿನ ಫಿಲಂ. ಆಂತರಿಕ ಯುದ್ಧದಿಂದ ತ್ರಸ್ತವಾದ ಸೋಮಾಲಿಯಾ ದಲ್ಲಿ ಹುಟ್ಟಿ "ನಾನು ಜಗತ್ತಿನಲ್ಲಿ ಅತ್ಯಂತ ವೇಗದ ಓಟಗಾರ್ತಿ ಆಗ್ತೇನೆ" ಎಂದು ಘೋಷಿಸಲು ಎಂಟೆದೆ ಬೇಕು. ಅದನ್ನು ಛಲದಿಂದ ಹೆಚ್ಚು ಕಡಿಮೆ ನಿಜ ಮಾಡಿದ ಸಾಮಿಯಳ ದುಃಖಾಂತವಾದರೂ ಸ್ಫೂರ್ತಿದಾಯಕ ಕತೆಯಿದು. ಅವಳ ಜೀವನದ ಮೇಲೆ ಆಧಾರಿತ ಕಾದಂಬರಿ "Don't Tell ↗

ಸಾಮಿಯ



‘ಮೂಲನಿವಾಸಿ’ಗಳು ಎಂದು ಕರೆಯುವ ಆದಿವಾಸಿಗಳಿಗೇ...... ಪುಟ 9 ರಿಂದ

ನಾನಾ ರಾಜ್ಯಗಳಿಂದ ಬಂದ ‘ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್’ನ ರಾಷ್ಟ್ರೀಯ ಸಮನ್ವಯ ಸಮಿತಿಯ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಮಂಡ್ಯ, ಬಳ್ಳಾರಿ ಮುಂತಾದ ವಿವಿಧ ಜಿಲ್ಲೆಗಳಿಂದ ಬಂದ ಆದಿವಾಸಿಗಳು, ನಾಡಿನ ಹಲವು ಪ್ರಗತಿಪರ ಸಾಹಿತಿಗಳು, ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರು ರಾಜ್ಯದ ವಿವಿಧ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು, ಮುಖಂಡರು ಸೇರಿದಂತೆ ಸುಮಾರು 150 ಕ್ಕೂ ಹೆಚ್ಚು ಜನರು ಈ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದರು. ವಿಚಾರ ಸಂಕಿರಣವು ‘ಕರ್ನಾಟಕ ಅಲೆಮಾರಿ ಹಾಗೂ ಅರೆ ಅಲೆಮಾರಿ ಅಭಿವೃದ್ಧಿ ನಿಗಮ’ದ ಸಹಕಾರದೊಂದಿಗೆ ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮದ ಆರಂಭದಲ್ಲಿ ಆದಿವಾಸಿ ಹಕ್ಕುಗಳ ಸಮಿತಿಯ ಸಹ ಸಂಚಾಲಕರಾದ ಡಾ. ಕೃಷ್ಣಪ್ಪ ಕೊಂಚಾಡಿಯವರು ಎಲ್ಲರಿಗೂ ಹೂಗುಚ್ಛ ನೀಡಿ ಸ್ವಾಗತಿಸಿದರು. ಮತ್ತೊಬ್ಬ ಸಹ ಸಂಚಾಲಕರಾದ ಶ್ರೀಧರ ನಾಡಾ ಅವರು ಕಾರ್ಯಕ್ರಮದ ನಿರೂಪಣೆ ಮಾಡಿದರು. ಜೆ.ಆರ್. ಪ್ರೇಮ ವಂದಿಸಿದರು.

ಆದಿವಾಸಿಗಳ ಉನ್ನತ ನಿಯೋಗದಿಂದ ಮುಖ್ಯಮಂತ್ರಿಗಳ ಭೇಟಿ–ಚರ್ಚೆ–ಮನವಿ ಸಲ್ಲಿಕೆ

ಮಾರ್ಚ್ 15 ರ ಸಂಜೆ ಬೃಂದಾ ಕಾರಟ್, ಜಿತೇಂದ್ರ ಚೌಧುರಿ, ಡಾ.ಎಸ್.ವೈ. ಗುರುಶಾಂತ್, ಶ್ರೀಧರ್ ನಾಡ, ಡಾ.ಕೃಷ್ಣಪ್ಪ ಕೊಂಚಾಡಿ, ಜೆ.ಆರ್. ಪ್ರೇಮ ಅವರಿದ್ದ ನಿಯೋಗವು ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಅವರ ಮನೆಯಲ್ಲಿ ಭೇಟಿ ಮಾಡಿ ಚರ್ಚಿಸಿತು. ಆದಿವಾಸಿ ಸಮುದಾಯದ ಸಮಸ್ಯೆಗಳ ಪರಿಹಾರಕ್ಕೆ ಜಿಲ್ಲಾ ಮಟ್ಟದಲ್ಲಿ ‘ಆದಿವಾಸಿ ಅದಾಲತ್’ಗಳನ್ನು ನಡೆಸಬೇಕು ಹಾಗೂ ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ವಿಶಾಲವಾದ ಸಭೆಯನ್ನು ಕರೆದು ಆದಿವಾಸಿ ಸಮುದಾಯದೊಂದಿಗೆ ಚರ್ಚಿಸಬೇಕು ಎಂದು ಮನವಿ ಮಾಡಿದರು. ಲಿಖಿತ ಮನವಿಯನ್ನೂ ಸಲ್ಲಿಸಿದರು.



ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಿದರಲ್ಲದೇ ಆದಷ್ಟೂ ಬೇಗ ಸಭೆ ಕರೆಯುವುದಾಗಿ ಭರವಸೆ ನೀಡಿದರು.

Me You're Afraid” ಯಿಂದ ಸ್ಫೂರ್ತಿ ಪಡೆದು ಜರ್ಮನ್–ಟರ್ಕಿಶ್ ನಿರ್ದೇಶಕಿ ಯಾಸ್ಮಿನ್ ಸಂದೆರಿಲಿ ತಯಾರಿಸಿದ ಫಿಲಂ.

ಸಾಮಿಯಳ ಜೀವನದ ಎರಡು ಭಾಗಗಳನ್ನು (ಕಾಲಾನುಕ್ರಮದಲ್ಲಿ ಅಲ್ಲ) ಫಿಲಂ ಚಿತ್ರಿಸುತ್ತದೆ. ಶಾಲೆಯಲ್ಲಿ ಹುಡುಗರೊಂದಿಗೆ ಓಡಬಾರದು ಎಂಬ ತಾಕೀತಿದ್ದರೂ ಅದನ್ನು ಲೆಕ್ಕಿಸದೆ ನಗರದ ಓಟದಲ್ಲಿ ಮೊದಲ ಸ್ಥಾನದಲ್ಲಿ ಬರುತ್ತಾಳೆ ಸಾಮಿಯ. ಕುಟುಂಬದ ಒಳಗೆ, ಸಮಾಜದಲ್ಲಿ, ದೇಶದ ರಾಜಕೀಯ ದಲ್ಲಿ ಬರುವ ಏಳು ಬೀಳುಗಳ ನಡುವೆಯೂ 2008ರ ಬೆಜಿಂಗ್ ಒಲಿಂಪಿಕ್ಸ್ ನಲ್ಲಿ ಭಾಗವಹಿಸುತ್ತಾಳೆ. ಸಾಮಿಯಗೆ ಸೋದರ ಸಂಬಂಧಿ, ತಂದೆ, ಅಕ್ಕ, ತಾಯಿ? ಹೀಗೆ ಬೇರೆ ಬೇರೆ ಸಂದರ್ಭಗಳಲ್ಲಿ ಅವಳ ಜೀವನದ ಮಹದಾಸೆ ಪೂರೈಸಲು ಬೆಂಬಲ ನೀಡುತ್ತಾರೆ. ಶೂ ಕೊಳ್ಳಲು ಆಗದ ಬಡತನ, ಓಟ ಪ್ರಾಕ್ಟೀಸಿಗೆ ಸಮಾಜದಲ್ಲಿರುವ ಪುರುಷಹಂಕಾರ, ಧಾರ್ಮಿಕ ಮೂಲಭೂತವಾದಿ ಗುಂಪುಗಳು, ಪರಸ್ಪರ ಹೊಡೆದಾಡುವ ಗೆರಿಲ್ಲಾ ಗುಂಪುಗಳು, ಆಂತರಿಕ ಯುದ್ಧ, ಪದೇ ಪದೇ ರಾಜಕೀಯ ಬೆಳವಣಿಗಳಿಂದ ತಡೆ? ಹೀಗೆ ಹಲವು ಎಡರು ತೊಡರುಗಳನ್ನು ಸ್ಥೈರ್ಯ, ಛಲದಿಂದ ಎದುರಿಸಿ ಗೆಲ್ಲುವ ಸಾಮಿಯಳ ಸ್ಫೂರ್ತಿದಾಯಕ ಬದುಕಿನ ಚಿತ್ರಣವಿದೆ ಮೊದಲ ಭಾಗದಲ್ಲಿ.

ಆದರೆ ಬೆಜಿಂಗ್ ಒಲಿಂಪಿಕ್ಸ್ ನಿಂದ ವಾಪಸು ಬಂದ ಮೇಲೆ ಆರಭವಾಗುವುದು ಎರಡನೇ ಹಂತ. ಈಗ ಸೋದರನೂ ಸೇರಿಕೊಂಡಿರುವ ಮೂಲಭೂತವಾದಿ ಗುಂಪಿನ ಭಯ ಮತ್ತು ಧಾರ್ಮಿಕ ಕಟ್ಟಳೆಗಳ ಕಟು ಜಾರಿ? ಇವುಗಳ ಹಿನ್ನೆಲೆಯಲ್ಲಿ ಮುಂದಿನ ಒಲಿಂಪಿಕ್ಸ್ ನಲ್ಲಿ ಭಾಗವಹಿಸಬೇಕಾದರೆ ಯುರೋಪಿಗೆ ವಲಸೆ ಹೋಗದೆ ಬೇರೆ ಉಪಾಯವಿಲ್ಲವೆಂದು ಸಾಮಿಯಗೆ ಮನವರಿಕೆಯಾಗುತ್ತದೆ. ಇದಕ್ಕಾಗಿ ಹೊರಟು ಲಿಬ್ಯಾದ ಗೆರಿಲ್ಲಾ ಗಳ ಕೈಗೆ ಸಿಕ್ಕಿ ಬೀಳುತ್ತಾಳೆ. ಕೊನೆಗೂ ಹಲವು ಹರಸಾಹಸಗಳ ನಂತರ ಮಾನವ ಸಾಗಾಣಿಕೆದಾರರ ನೆರವಿನಿಂದ ದೋಣಿಗಳಲ್ಲಿ ಸಮುದ್ರ ದಾಟುವಾಗ ನೀರು ಪಾಲಾಗುತ್ತಾಳೆ. ಇದು ದುರಂತಮಯ ಎರಡನೇ ಭಾಗ. ಲಿಬ್ಯಾದ ಗೆರಿಲ್ಲಾ ಗಳ ಕೈಯಲ್ಲಿ ಸಿಕ್ಕಿ ಬೀಳುವ ಭಾಗ2 ರ ಮೊದಲ ಭಾಗದಿಂದ ಆರಂಭಿಸಿ, ಮೊದಲ ಭಾಗ ಮಧ್ಯದಲ್ಲಿ ಬಂದು, ಭಾಗ2 ರ ಕೊನೆಯ ಭಾಗ ಫಿಲಂನಲ್ಲಿ ಕಾಣುವ ಓಟ. ಸಾಮಿಯ ದುರಂತಕ್ಕೆ ಕಾರಣವಾಗುವ ಸೊಮಾಲಿಯಾದ ರಾಜಕೀಯ ಸಾಮಾಜಿಕ ಬೆಳವಣಿಗೆ ತಿಳಿಸಲು ಆಗಿನ ರೇಡಿಯೊ ಟಿವಿ ಪ್ರಸಾರಗಳನ್ನು ಸೃಜನಾತ್ಮಕವಾಗಿ ಬಳಸಲಾಗಿದೆ.

ಸೊಮಾಲಿಯ 1960ರ ವರೆಗೆ ಬ್ರಿಟಿಶ್–ಇಟಾಲಿಯನ್ ವಸಾಹತುವಾಗಿದ್ದು ಅದರ ಸಂಪನ್ಮೂಲಗಳನ್ನು ದೋಚಲಾಗಿತ್ತು. ಸ್ವತಂತ್ರವಾದ ಮೇಲೂ ಇತರ ಆಫ್ರಿಕನ್ ದೇಶಗಳಂತೆ ಇಲ್ಲೂ ಸಂಪನ್ಮೂಲಗಳ ಮತ್ತು ಅಭಿವೃದ್ಧಿಯ ಕೊರತೆ ರಾಜಕೀಯ ಬಿಕ್ಕಟ್ಟು ಮಿಲಿಟರಿ ಮತ್ತು ಧಾರ್ಮಿಕ ಮೂಲಭೂತವಾದಿಗಳ ಪೈಪೋಟಿ ಮತ್ತು ಆಡಳಿತಕ್ಕೆ ಹಾದಿ ಮಾಡಿಕೊಟ್ಟಿತ್ತು, ಈ ಸನ್ನಿವೇಶದಲ್ಲಿ ಸಾಮಿಯ ನಂತಹ ಒಲಿಂಪಿಕ್ಸ್ ಪಟು ಸಹ ವಲಸೆ ಹೋಗಬೇಕಾದ ಸನ್ನಿವೇಶ ಉಂಟಾಗಿ ಈ ದುರಂತ ಕತೆಗೆ ಹಾದಿ ಮಾಡಿಕೊಟ್ಟಿದೆ. ಒಲಿಂಪಿಕ್ಸ್ ಪಟುವಿನ ಛಲದ ಸ್ಫೂರ್ತಿದಾಯಕ ಚಿತ್ರಣವಲ್ಲದೆ, ಇಲ್ಲಿ ನಿರಾಶ್ರಿತ ವಲಸಿಗರನ್ನು ಸೃಷ್ಟಿ ಮಾಡುವ ಆಫ್ರಿಕಾದ ಪರಿಸ್ಥಿತಿಯ ಉತ್ತಮ ಚಿತ್ರಣವಿದೆ.

ನಿರಾಶ್ರಿತ ವಲಸಿಗರ ಪಾಡಿನ ರಾಜಕೀಯ–ಆರ್ಥಿಕ ಆಯಾಮ

ಈ ಫಿಲಂಗಳಲ್ಲಿ ಸಹಜವಾಗಿಯೇ ನಿರಾಶ್ರಿತ ವಲಸಿಗರ ಪಾಡನ್ನು ಮಾನವೀಯ ದೃಷ್ಟಿಯಿಂದ ನೋಡಲಾಗಿದೆ. ಆದರೆ ಕಳೆದ ದಶಕಕ್ಕೂ ಹೆಚ್ಚು ಅವಧಿಯಲ್ಲಿ ಆಫ್ರಿಕಾ ದಿಂದ ಯುರೋಪಿಗೆ, ಏಶ್ಯಾ, ಲ್ಯಾಟಿನ್ ಅಮೆರಿಕಗಳಿಂದ ಯು.ಎಸ್.ಗೆ ನಡೆಯುತ್ತಿರುವ ವಲಸೆ ಹಿಂದಿನ ಶತಮಾನಗಳ ಮೂರು ಮಹಾ ವಲಸೆಗಳಿಗಿಂತ ಭಿನ್ನವಾಗಿದೆ ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್..1 ಹಿಂದಿನ ಮಹಾ ವಲಸೆಗಳು ಸಾಮ್ರಾಜ್ಯಶಾಹಿ ಬಂಡವಾಳದ ಅಗತ್ಯಕ್ಕೆ ಅನುಗುಣವಾಗಿ ಅದರ ಉತ್ತೇಜನದಿಂದ ನಡೆದದ್ದು. ಆದರೆ ಈಗಿನದ್ದು ಸಾಮ್ರಾಜ್ಯಶಾಹಿ ಬಂಡವಾಳದ ಅಣತಿಯನ್ನು ಮೀರಿ ನಡೆಯುತ್ತಿದೆ ಮತ್ತು ಮೂರನೇ ಜಗತ್ತಿನಲ್ಲಿ ಅದರ ಕಾರ್ಯಚಾರಣೆಗಳ ಪರಿಣಾಮವಾಗಿ ಮತ್ತು ಅದಕ್ಕೆ (ಪ್ರಜ್ಞಾಪೂರ್ವಕವಲ್ಲದಿದ್ದರೂ) ಪ್ರತಿರೋಧವಾಗಿ ನಡೆಯುತ್ತಿದೆ ಎನ್ನುತ್ತಾರೆ ಪ್ರೊ. ಪಟ್ನಾಯಕ್. ಹಾಗಾಗಿಯೇ ಏನೋ ಯುರೋಪಿನಲ್ಲಿ ಈಗ ನೆಲೆಸಿರುವ ಆಫ್ರಿಕನ್ನರಿಗೆ ನೀವು ಅಗತ್ಯ ಬಿದ್ದರೆ ಇಲ್ಲಿ ಬರಲು ಪಟ್ಟ ಪಾಡನ್ನು ಮತ್ತೆ ಪಡಲು ತಯಾರಿದ್ದೀರಾ ಎಂದು ಕೇಳಿದ್ದಕ್ಕೆ ಬಹುಸಂಖ್ಯಾತರು “ಹೌದು” ಎಂದು ಉತ್ತರಿಸಿದರಂತೆ

ವಸಾಹತುಶಾಹಿಯಿಂದ ಹೊರಬಂದ ನಂತರವೂ ಆಫ್ರಿಕನ್ ದೇಶಗಳ ಸಂಪನ್ಮೂಲಗಳನ್ನು ಯುರೋಪಿನ ಸಾಮ್ರಾಜ್ಯಶಾಹಿ ಶಕ್ತಿಗಳು ತಮ್ಮ ನವ–ವಸಾಹತುಶಾಹಿ ಲೂಟಿ ಮೂಲಕ ಸಾಗಿಸುತ್ತಲೇ ಇದ್ದವು. ಅವು ಮತ್ತು ಐ.ಎಂ.ಎಫ್/ವಿಶ್ವ ಬ್ಯಾಂಕ್ ನಂತಹ ಸಂಸ್ಥೆಗಳು ಕೊಟ್ಟ ‘ಅಭಿವೃದ್ಧಿ’ ಸಾಲ 1980ರ ದಶಕದ “ಸಾಲ ಮರುಪಾವತಿ” ಬಿಕ್ಕಟ್ಟು ಉಂಟು ಮಾಡಿತು. ಏಕೆಂದರೆ ಅವು ಹೊರಿಸಿ ಮುಂದುವರೆಸಿದ್ದ ‘ಅಭಿವೃದ್ಧಿ’ ಮಾದರಿ (ಪ್ರಾಥಮಿಕ ಸರಕುಗಳ ರಫ್ತು, ಕೃಷಿ/ಕೈಗಾರಿಕಾ ಉತ್ಪನ್ನಗಳ ಆಮದು) ಆರ್ಥಿಕದಲ್ಲಿ ಜನತೆಯ ಅಭಿವೃದ್ಧಿಗೆ ಬೇಕಾದ ಯಾವುದೇ ಸಂರಚನಾ ಬದಲಾವಣೆ ತಂದಿರಲಿಲ್ಲ. ಈಗ ಮತ್ತೆ ಅದೇ ಪರಿಸ್ಥಿತಿಯಿದೆ. 2006ರಿಂದ 2017 ಅವಧಿಯಲ್ಲಿ ಆಫ್ರಿಕಾದ (35ರಿಂದ 110 ಶತಕೋಟಿ ಡಾಲರು) ಸಾಲ ಮೂರು ಪಟ್ಟಾಗಿದೆ. ಆಫ್ರಿಕಾದ ಅರ್ಧದಷ್ಟು ದೇಶಗಳು ಹೆಚ್ಚಿನ ಸಾಲ–ಜಿಡಿಪಿ ಪ್ರಮಾಣದಿಂದ ಬಳಲುತ್ತಿದ್ದು ಹಲವು ಬಿಕ್ಕಟ್ಟಿನ ಸೂಚಕ ಎನ್ನಲಾಗುವ ಶೇ.60 ಸಾಲ–ಜಿಡಿಪಿ ಪ್ರಮಾಣ ದಾಟಿವೆ. ಹೀಗೆ ಯುರೋಪ್ ಆಫ್ರಿಕಾದ ಮೇಲೆ ಹೊರಿಸಿದ ಅಭಿವೃದ್ಧಿ ಮಾದರಿ ಮತ್ತು ಸಾಲದ ಹೊರೆಯೇ ಈಗಿನ ಮಹಾವಲಸೆಗೆ ಕಾರಣ ಎನ್ನುತ್ತಾರೆ ಚಿಂತಕ ವಿಜಯ ಪ್ರಶಾದ್.

ಫಿಲಂ ಅನಾವರಣಗೊಳಿಸುವ ದಾರುಣ ಮಾನವೀಯ ಸ್ಥಿತಿಯ ಮೂಲ ಕಾರಣ ಹೀಗಿದೆ.

1 https://peoplesdemocracy.in/2016/1009_pd/migration-revolt-against-capital

2 https://blackagendareport.com/europes-greedy-lending-africa-drives-migration-fuels-eus-xenophobic-politics

ಬೆಳವಣಿಗೆಯ ಎರಡು ಪರ್ಯಾಯ ನಮೂನೆ.... ಪುಟ 13 ರಿಂದ

ಮಾಡಬಹುದು. ಉದ್ಯೋಗ ಸೃಷ್ಟಿಸುವ ವೆಚ್ಚಗಳಿಗಾಗಿ ಪ್ರಭುತ್ವವು ವಿತ್ತೀಯ ಕೊರತೆಯ ಮೂಲಕ ಅಥವಾ ಶ್ರೀಮಂತರ ಮೇಲೆ ತೆರಿಗೆ ವಿಧಿಸುವ ಮೂಲಕ ಮಾತ್ರ ಹಣ ಒದಗಿಸಿಕೊಳ್ಳಬೇಕು. ದುಡಿಯುವ ಜನರ ಮೇಲೆ ವಿಧಿಸಿದ ತೆರಿಗೆಯ ಮೂಲಕ ಪಡೆದ ಆದಾಯವನ್ನು ಖರ್ಚು ಮಾಡುವುದರಿಂದ ಉದ್ಯೋಗಗಳು ಹೆಚ್ಚುವುದಿಲ್ಲ; ಒಂದು ರೀತಿಯ ಬೇಡಿಕೆಯ ಬದಲು ಇನ್ನೊಂದು ರೀತಿಯ ಬೇಡಿಕೆಯನ್ನು ಪೂರೈಸಿದಂತಾಗುತ್ತದೆಯಷ್ಟೇ. ಆದರೆ, ಹೆಚ್ಚಿನ ವೆಚ್ಚಗಳಿಗಾಗಿ ಪ್ರಭುತ್ವವು ಹಣ ಒದಗಿಸಿಕೊಳ್ಳುವ ಈ ಎರಡೂ ವಿಧಾನಗಳನ್ನೂ ಜಾಗತೀಕರಣಗೊಂಡ ಹಣಕಾಸು ಬಂಡವಾಳವು ತೀವ್ರವಾಗಿ ವಿರೋಧಿಸುತ್ತದೆ. ಅಂದರೆ, ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಪ್ರಾಬಲ್ಯವೇ ಉದ್ಯೋಗಗಳನ್ನು ವಿಸ್ತರಿಸುವಲ್ಲಿರುವ ನಿಜವಾದ ನಿರ್ಬಂಧ. ತೀವ್ರ ನಿರುದ್ಯೋಗ ಮತ್ತು ಧಾನ್ಯಗಳ "ಮಿಗುತೆ" ದಾಸ್ತಾನು ಜೊತೆಜೊತೆಯಾಗಿಯೇ ಇರುವ ಒಂದು ಸಂಪೂರ್ಣ ವ್ಯರ್ಥದ ಮತ್ತು ಅವಿವೇಕದ ಪರಿಸ್ಥಿತಿಯನ್ನು ನಿವಾರಿಸಬೇಕು ಎಂದಾದರೆ, ಬಂಡವಾಳದ ಹರಿದಾಟದ ಮೇಲೆ ನಿಯಂತ್ರಣಗಳನ್ನು ಹೇರುವ ಮೂಲಕ ಹಣಕಾಸು ಬಂಡವಾಳದ ಈ ಪ್ರಾಬಲ್ಯವನ್ನು ನಿವಾರಿಸಬೇಕಾಗುತ್ತದೆ. ಬಂಡವಾಳದ ಹರಿದಾಟದ ಮೇಲೆ ನಿಯಂತ್ರಣಗಳನ್ನು ಹೇರುವುದು ಎಂದರೆ, ದೇಶ ದೇಶಗಳ ಗಡಿಗಳಾಚೆ ಹರಿದಾಡುವ ಬಂಡವಾಳದ, ವಿಶೇಷವಾಗಿ ಹಣಕಾಸು ಬಂಡವಾಳದ ಅನಿಯಂತ್ರಿತ ಹರಿವನ್ನೇ ಜೀವ ನಾಡಿಯಾಗಿ ಹೊಂದಿರುವ ನವ ಉದಾರವಾದಿ ಆಳ್ವಿಕೆಗೆ ಅಂತ್ಯ ಹಾಡುವುದು ಎಂದೇ ಅರ್ಥ.

ಕಳಪೆ ಮತ್ತು ವಿಚಾರಹೀನ

ಅಭಿವೃದ್ಧಿಯನ್ನು ಅಳೆಯಲು ಬಳಸುವ ತಲಾ ಜಿಡಿಪಿಯ ಬೆಳವಣಿಗೆಯ ಮಾನದಂಡಕ್ಕೆ ಪರ್ಯಾಯವಾಗಿ ನಾವು ಮೇಲೆ ಸೂಚಿಸಿದ ದುಡಿಯುವ ಜನರ ಸರಕು ಸೇವೆಗಳ ತಲಾ "ನಿಜ" ಬಳಕೆಯ ಬೆಳವಣಿಗೆಯ ಮಾನದಂಡದಿಂದ ಅಳೆದಾಗ, ನವ ಉದಾರವಾದಿ ಅವಧಿಯು ನಿಯಂತ್ರಣ ನೀತಿಗಳ ಅವಧಿಗಿಂತ ಕೆಟ್ಟದಾಗಿದೆ ಎಂಬುದು ತಿಳಿದುಬರುತ್ತದೆ. ಅದಕ್ಕಿಂತಲೂ ಮಿಗಿಲಾಗಿ, "ಮಿಗುತೆ" ಆಹಾರ ಧಾನ್ಯಗಳ ದಾಸ್ತಾನು ವ್ಯರ್ಥವಾಗಿ ಬಿದ್ದಿದ್ದರೂ, ನವ ಉದಾರವಾದಿ ಆಳ್ವಿಕೆಯು ಉದ್ಯೋಗಗಳನ್ನು ಹೆಚ್ಚಿಸುವಲ್ಲಿ ಅಡ್ಡಿಯಾಗಿದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರಗತಿಯನ್ನು ಸಾಧಿಸುವಲ್ಲಿ ನವ ಉದಾರವಾದವು ಕಳಪೆಯಾಗಿದೆ ಮಾತ್ರವಲ್ಲ, ಅದು ವಿಚಾರಹೀನವೂ ಹೌದು.

ಇದನ್ನು ಹೇಳುವುದು ನವ ಉದಾರವಾದದ ಮುಂಚಿನ ರೀತಿಯ ನಿಯಂತ್ರಣ ನೀತಿಗಳ ವ್ಯವಸ್ಥೆಗೆ ನಾವು ಹಿಂತಿರುಗಬೇಕು ಎಂದು ಸೂಚಿಸುವುದಕ್ಕಲ್ಲ. ನಿಯಂತ್ರಣ ನೀತಿಗಳ ವ್ಯವಸ್ಥೆಯ ಅಡಿಯಲ್ಲಿ ಬೆಳವಣಿಗೆಯ ದರವು ಕೃಷಿಯ ಬೆಳವಣಿಗೆಯ ದರವನ್ನು, ಅದರಲ್ಲೂ ವಿಶೇಷವಾಗಿ ಆಹಾರ ಧಾನ್ಯಗಳ ಬೆಳವಣಿಗೆ ದರವನ್ನು ಅವಲಂಬಿಸಿತ್ತು ಎಂಬುದನ್ನು ನಾವು ನೋಡಿದೆವು. ಉದ್ಯೋಗಗಳನ್ನು ಹೆಚ್ಚಿಸಬೇಕು ಎಂದಾದರೆ ಸಂಭವಿಸಬೇಕಾದ ನಿಯಂತ್ರಣ ನೀತಿಗಳ ಪುನರುಜ್ಜೀವನವು ಆಹಾರ ಧಾನ್ಯ ಬೆಳವಣಿಗೆಯ ದರ ಉನ್ನತ ಮಟ್ಟದಲ್ಲಿರುವಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ಭೂ ಸುಧಾರಣೆಗಳು ಮಾತ್ರವಲ್ಲದೆ ಭೂ–ಉತ್ಪಾದಕತೆಯನ್ನು ಹೆಚ್ಚಿಸಲು ಸರ್ಕಾರದ ಸಂಘಟಿತ ಪ್ರಯತ್ನವೂ ಇರಬೇಕಾಗುತ್ತದೆ.

ಭೂಸುಧಾರಣೆಗಳು ಎಂಬ ಪದವನ್ನು ಸಾಮಾನ್ಯವಾಗಿ ಭೂಮಾಲೀಕರ ಕೈಗಳಲ್ಲಿ ಭೂ ಕೇಂದ್ರೀಕರಣವನ್ನು ಮುರಿಯುವುದು ಎಂದು ತಿಳಿಯಲಾಗುತ್ತದೆ. ಆದರೆ ಇದು ಒಂದು ಅಪೂರ್ಣ ತಿಳುವಳಿಕೆಯಾಗಿದೆ. ಅಪಾರ ಪ್ರಮಾಣದ ಭೂಮಿ ಸ್ವಾತಂತ್ರ್ಯ ಪೂರ್ವದ ಸರ್ಕಾರಗಳು ನೀಡಿದ ಬಹುತೇಕ ದೀರ್ಘಾವಧಿಯ ತೋಟಗಾರಿಕೆ ಗುತ್ತಿಗೆಗಳಲ್ಲಿ ಬಂಧಿಯಾಗಿದೆ. ಈ ಗುತ್ತಿಗೆ ಭೂಮಿಯ ಬಹುತೇಕ ಭಾಗವನ್ನು ಯಾವುದೇ ಉತ್ಪಾದಕ ಉದ್ದೇಶಗಳಿಗಾಗಿ ಬಳಸುತ್ತಿಲ್ಲ. ಈ ಭೂಮಿಯನ್ನೂ ಸಹ ಭೂಸುಧಾರಣೆಗಳ ವ್ಯಾಪ್ತಿಗೆ ತರಬೇಕು. ನವ ಉದಾರವಾದದ ಅಡಿಯಲ್ಲಿ ರಫ್ತು–ನೇತೃತ್ವದ ಬೆಳವಣಿಗೆಗೆ ಪರ್ಯಾಯವೆಂದರೆ ಕೇವಲ ಪ್ರಭುತ್ವ–ಆಶ್ರಿತ ಬೆಳವಣಿಗೆಯಲ್ಲ. ಹೆಚ್ಚು ನಿರ್ದಿಷ್ಟವಾಗಿ ಹೇಳುವುದಾದರೆ, ಅದು ಪ್ರಭುತ್ವದ ಆಶ್ರಯದ ಅಡಿಯಲ್ಲಿ ಕೃಷಿ–ಪ್ರಧಾನ ಬೆಳವಣಿಗೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE March 17-23, 2025 Price: Rs. 10/- Date of Publication: 14 March 2025 RNI No. KARKAN /2006/17926 Posted on 19-03-2025
Posted at BG PSO, BG - 560026 **Posted at Periodical Rate -** Rs. 2

16ನೇ ಬೆಂಗಳೂರು ಫಿಲ್ಮೋತ್ಸವ

ವಲಸಿಗರ ದಾರುಣ ಸ್ಥಿತಿಯ ಕಾಡುವ ಫಿಲಂಗಳು

ಈ ಬಾರಿಯ ಅಂದರೆ 16ನೇ ಬೆಂಗಳೂರು ಚಿತ್ರೋತ್ಸವದಲ್ಲಿ ಹಿಂದಿನ ವರ್ಷಗಳಿಗೆ ಹೋಲಿಸಿದರೆ ನನಗೆ ಅತ್ಯಂತ ಹೆಚ್ಚು 22 ಫಿಲಂ ನೋಡಲು ಸಾಧ್ಯವಾಯಿತು. ಅವುಗಳಲ್ಲಿ ಹಲವು ಫಿಲಂಗಳಲ್ಲಿ ಒಂದೇ ಥೀಮ್ ಮತ್ತೆ ಮತ್ತೆ ಒತ್ತರಿಸಿ ಬರುವಂತೆ ಕಾಣುತ್ತಿತ್ತು. ಅದು ನಿರಾಶ್ರಿತ ವಲಸಿಗರು ವಲಸೆ ಹೋಗುವಾಗ ಮತ್ತು ಹೋದ ನಂತರವೂ ಎದುರಿಸುತ್ತಿರುವ ದಾರುಣ ಸ್ಥಿತಿಯನ್ನು ಬೇರೆ ಬೇರೆ ಆಯಾಮಗಳಲ್ಲಿ ಕಾಣುವ ಥೀಮ್, ನಾನು ನೋಡಿದ 22 ಫಿಲಂಗಳಲ್ಲೇ ಇಂತಹ 4 ಫಿಲಂಗಳಿದ್ದವು. ಫಿಲ್ಮೋತ್ಸವದಲ್ಲಿ ಇನ್ನೂ ಕೆಲವು ಫಿಲಂಗಳಿದ್ದವು. ಈ 4 ಚಿತ್ರಗಳು ತೆರೆದಿಡುವ ವಲಸಿಗರ ದಾರುಣ ಸ್ಥಿತಿ ಬೆಚ್ಚಿ ಬೀಳಿಸುವಂಥದ್ದು, ಯಾರನ್ನಾದರೂ ಆಳವಾಗಿ ಕಲುಕುವಂಥದ್ದು. ಮರೆಯಲಾಗದ್ದು.
ಕಳೆದ ಹಲವು ವರ್ಷಗಳಿಂದ ನಿರಾಶ್ರಿತ ವಲಸಿಗರ ಕುರಿತು ಫಿಲಂಗಳು ಬರುತ್ತಿದ್ದು ಅದು ಬರಿಯ ಥೀಮ್ ಮಾತ್ರವಲ್ಲ, ಒಂದು ಸಿನಿಮಾ ಜೋನರ್ (ಸಿನಿಮಾ ಪ್ರಕಾರ) ಆದಂತಿದೆ. ಈ ನಾಲ್ಕು ಫಿಲಂಗಳೂ ಅನಾವರಣ ಗೊಳಿಸುವ ದಾರುಣ ಮಾನವೀಯ ಸ್ಥಿತಿಯ ಚಿತ್ರಣ ಇಲ್ಲಿದೆ.

ವಸಂತರಾಜ್ ಎನ್.ಕೆ.

ಜಗತ್ತಿನಾದ್ಯಂತ ವಲಸಿಗರ ಸಮಸ್ಯೆ ಬೃಹದಾಕಾರ ಪಡೆದುಕೊಂಡಿರುವ ಸನ್ನಿವೇಶದಲ್ಲಿ ಬಹುಶಃ ಇದು ಸಹಜವಾಗಿದೆ. ಉತ್ತರ ಅಮೆರಿಕ ಮತ್ತು ಯುರೋಪಿನ ವಿಕಸಿತ ದೇಶಗಳಲ್ಲಿ ಇದು ರಾಜಕೀಯ ಅಲ್ಲೋಲ ಕಲ್ಲೋಲ ತಂದಿದೆ. ಆಫ್ರಿಕಾದಿಂದ ಯುರೋಪಿನತ್ತ ಮತ್ತು ಲ್ಯಾಟಿನ್ ಅಮೆರಿಕದಿಂದ ಹಾಗೂ ಇಡೀ ಜಗತ್ತಿನಿಂದ ಯು.ಎಸ್. ನತ್ತ ಹೋಗಲು ಯತ್ನಿಸುತ್ತಿರುವ ವಲಸಿಗರು ಪಡುತ್ತಿರುವ ಪಾಡು ಮತ್ತು ದಾರುಣ ಅಮಾನವೀಯ ಸ್ಥಿತಿ ಜಗತಿನ ಗಮನ ಸೆಳೆದಿದೆ. ಭಾರತದ ಸಾವಿರಾರು 'ಕಾನೂನು ಬಾಹಿರ' ವಲಸಿಗರನ್ನು ಟ್ರಂಪ್ ಆಡಳಿತ ಅಪರಾಧಿಗಳಂತೆ ಕೈ ಕಾಲುಗಳನ್ನು ಸರಪಣಿಗಳಲ್ಲಿ ಕಟ್ಟಿ ಮಿಲಿಟರಿ ಸಾಗಾಣಿಕೆ ವಿಮಾನದಲ್ಲಿ ಹಾಕಿ ಕಳಿಸಿರುವ ದೃಶ್ಯಗಳ ಹಿನ್ನೆಲೆಯಲ್ಲಿ ನಮಗೂ ಇವು ದೂರದ ಸಮಸ್ಯೆ ಅನಿಸುತ್ತಿಲ್ಲ.

ನಿರಾಶ್ರಿತ ವಲಸಿಗರ ಕುರಿತು 16ನೇ ಬೆಂಗಳೂರು ಚಿತ್ರೋತ್ಸವದದಲ್ಲಿ ನಾನು ನೋಡಿದ ಫಿಲಂಗಳೆಂದರೆ ಅರೆಬಿಕ್/ಗ್ರೀಕ್ ಫಿಲಂ 'ಟು ಎ ಲ್ಯಾಂಡ್ ಅನ್ ನೋನ್' (ಕಾಣದ ನಾಡಿನತ್ತ), ಫುಲಾ/ಮಲಿಂಕೆ/ಫ್ರೆಂಚ್ ಫಿಲಂ "ದಿ ಸ್ಟೋರಿ ಆಫ್ ಸುಲೈಮಾನ್" (ಸುಲೈಮಾನ್ ನ ಕತೆ), ಸ್ಪಾನಿಶ್/ಫ್ರೆಂಚ್ ಫಿಲಂ "ದಿ ಪಾರ್ಟಿ ಈಸ್ ಓವರ್" (ಪಾರ್ಟಿ ಮುಗಿಯಿತು), ಮತ್ತು ಅರೆಬಿಕ್/ಸೊಮಾಲಿ/ಇಂಗ್ಲಿಷ್ ಫಿಲಂ "ಸಾಮಿಯ". ಈ ನಾಲ್ಕು ಯೂರೋಪ್ ಗೆ ವಲಸೆ ಹೋಗುತ್ತಿರುವ ಅಥವಾ ಹೋಗಿರುವ ಉತ್ತರ



ಆಫ್ರಿಕಾ ಅಥವಾ ಪಶ್ಚಿಮ ಏಶ್ಯಾದ ವಲಸಿಗರ ದಾರುಣ ಕತೆಗಳ ಚಿತ್ರಣ.

1. 'ಟು ಎ ಲ್ಯಾಂಡ್ ಅನ್ ನೋನ್'
(ಕಾಣದ ನಾಡಿನತ್ತ)

ಪ್ರಸಿದ್ಧ ಚಿಂತಕ ಎಡ್ವರ್ಡ್ ಸೈದ್ ಅವರ ಈ ಅರ್ಥಗರ್ಭಿತ ಮಾತಿನಿಂದ ಈ ಫಿಲಂ ಶುರುವಾಗುತ್ತದೆ. "ಇದು ಪ್ಯಾಲೆಸ್ಟೀನ್ನರ ಹಣೆಬರಹವಿದ್ದಂತೆ ಕಾಣುತ್ತದೆ. ಅವರು ಎಂದೂ ಎಲ್ಲಿಗೆ ಹೊರಡುತ್ತಾರೋ ಅಲ್ಲಿಗೆ ತಲುಪುವುದೇ ಇಲ್ಲ, ಬದಲಿಗೆ ದೂರದ ಅನಿರೀಕ್ಷಿತ ಕಾಣದ ಎಲ್ಲಿಗೋ ತಲುಪುತ್ತಾರೆ" (In a way, it's sort of the fate of Palestinians, not to end up where they started, but somewhere unexpected and far away.") ಇದು ಈ ಫಿಲಂ ನ ಸಾರ ಕೂಡಾ.

ಲೆಬನಾನ್ ನಿರಾಶ್ರಿತ ಶಿಬಿರದಲ್ಲಿ ಬೆಳೆದ ಜರ್ಮನಿ ಗೆ ಹೊರಟ ಸೋದರ ಸಂಬಂಧಿಗಳಾದ ಇಬ್ಬರು ಪ್ಯಾಲೆಸ್ಟೀನ್ ಯುವಕರು ಗ್ರೀಸ್ ನ ಅಥೆನ್ಸ್ ನಲ್ಲಿ ಸಿಲುಕಿಕೊಂಡಿದ್ದಾರೆ. ಹೇಗಾದರೂ ಜರ್ಮನಿ ತಲುಪಬೇಕೆಂದು ಗಂಭೀರ ಆದರೆ ಹತಾಶ ಪ್ರಯತ್ನ ನಡೆಸಿದ್ದಾರೆ. ಅವರಲ್ಲಿ ಹಿರಿಯ ಚಟಿಲಾ ಜರ್ಮನಿಯಲ್ಲಿ ಅರೇಬಿಕ್ ರೆಸ್ಟೋರೆಂಟ್ ಒಂದನ್ನು ತೆರೆದು ಹೆಂಡತಿ ಮತ್ತು ಮಗನನ್ನು ಕರೆದುಕೊಂಡು ಬಂದು ಒಳ್ಳೆಯ ಜೀವನವೊಂದರ ಕನಸು ಕಾಣುತ್ತಿರುವವನು. ಚಟಿಲಾ 1982ರಲ್ಲಿ ಇಸ್ರೇಲಿ ಪಡೆಗಳಿಂದ ಭೀಕರ ನರಮೇಧ ನಡೆದ ಪ್ಯಾಲೇಸ್ಟೈನ್ನರ ನಿರಾಶ್ರಿತ ಕ್ಯಾಂಪಿನ ಹೆಸರೂ ಕೂಡಾ. ಚಟಿಲಾ ದೃಢ ಮನಸ್ಸಿನ ಆಶಾವಾದಿ, ಚಾಲಾಕಿ ಮತ್ತು ಚಾಣಾಕ್ಷ. ಅಥೇನ್ಸ್ ನಿಂದ ಜರ್ಮನಿಗೆ ಹೋಗಲು ಹೊಸ ಹೊಸ ಯೋಜನೆಗಳನ್ನು ಹೆಣೆಯುತ್ತಿರುತ್ತಾನೆ. ಅದಕ್ಕಾಗಿ ಕಠೋರ ನಿರ್ಣಯಗಳನ್ನು ತೆಗೆದುಕೊಳ್ಳಬಲ್ಲ. ಚಟಿಲಾ ನನ್ನು ಅನುಸರಿಸುವ ಆದರೆ ಅಳ್ಳಕ ಸ್ವಭಾವದ ಸ್ವಲ್ಪ ಕಿರಿಯನಾದ ರೇಡಾ ಬೇರೆಯವರ ಪ್ರಭಾವಕ್ಕೊಳಗಾಗಬಲ್ಲ. ಮಾದಕ ದ್ರವ್ಯ ವ್ಯಸನಿ, ಚಟಿಲಾನ ಯೋಜನೆಯ ಜಾರಿಯಲ್ಲಿ ಹೆಚ್ಚಾಗಿ ದುರ್ಬಲ ಕೊಂಡಿ.

ಕಾನೂನು ಬಾಹಿರವಾಗಿ ವಾಸಿಸುತ್ತಾ ಕೆಲಸವಿಲ್ಲದೆ ಉದ್ಯೋಗವಿಲ್ಲದೆ ಸ್ಥಳೀಯರ ಪಿಕ್ ಪಾಕೆಟ್, ಅಂಗಡಿಗಳಲ್ಲಿ ಕಳ್ಳತನ, ದೇಹ ಮಾರಿ ಸಹ ಹೇಗೋ ಜೀವನ ಮಾಡುವ ಈ ಸೋದರರು ವಾಸಿಸುವ ಪಾಳು ಬಿದ್ದ ಮನೆ ಅಥೇನ್ಸ್ ನ ಕೊಂಪೆಯೊಂದರಲ್ಲಿದೆ. ಅವರು ಒಂಟಿಯಲ್ಲ. ಅವರಂತೆ ಬದುಕುತ್ತಿರುವ ಪ್ಯಾಲೆಸ್ಟೀನರ ಗುಂಪು, ಅವರೊಳಗೆ ಪರಸ್ಪರ ಸೋದರತ್ವವೂ ಜಗಳಗಳು ಅವರ ಜೀವನದ ಭಾಗ. ಹೊಸದಾಗಿ ಬಂದ ಪ್ಯಾಲೆಸ್ಟೀನ್ ಹದಿಹರೆಯದ ಹುಡುಗ ಮಲಿಕ್ ಮತ್ತು ಒಂಟಿ ಗ್ರೀಕ್ ಮಹಿಳೆ, ಉದ್ಯೋಗ ಪಡೆಯಲು ಅಥವಾ ಉದ್ಯೋಗಗಳಿರುವ ಯುರೋಪಿನ ಬೇರೆಡೆಗೆ ಹೋಗಲು ಬೇಕಾದ ನಕಲಿ ಪಾಸ್ ಪೋರ್ಟ್ ಮಾಡಿಸುವ ಏಜೆಂಟ್ ಸಹ ಅವರ 'ಪುಟ್ಟ ಲೋಕ'ದ ಭಾಗವಾಗುತ್ತಾರೆ. ನಕಲಿ ಪಾಸ್ ಪೋರ್ಟಿಗೆ ಏಜೆಂಟ್ ಕೇಳುತ್ತಿರುವ ದೊಡ್ಡ ಮೊತ್ತ ಹೊಂದಿಸುವುದು ಚಟಿಲಾನ ನಿತ್ಯ ಯೋಜನೆಯ ಗುರಿ.

ಒಂದು ಬಾರಿ ಕೂಡಿಟ್ಟದ್ದನ್ನು ರೇಡಾ ಮಾದಕ ದ್ರವ್ಯದ ಮೇಲೆ ಖರ್ಚು ಮಾಡಿಬಿಟ್ಟಾಗ ಬೇಗ ಹಣ ಮಾಡಲು ಒಂದು ಅಪಾಯಕಾರಿ ಯೋಜನೆಯನ್ನು ಚಟಿಲಾ ಹೂಡುತ್ತಾನೆ. ಇದಕ್ಕಾಗಿ ಹುಡುಗ ಮಲಿಕ್, ಇಟಲಿಯಲ್ಲಿರುವ ಅವನ ಅತ್ತೆ, ಮತ್ತು ಗ್ರೀಕ್ ಮಹಿಳೆ? ಇವರನ್ನು ಒಳಗೊಳ್ಳುವ ಯೋಜನೆ ವಿಫಲವಾದಾಗ ಇನ್ನಷ್ಟು



ಅಪಾಯಕಾರಿ ಅಪರಾಧಿ ಯೋಜನೆ ಹೂಡುತ್ತಾನೆ. ಇದರಲ್ಲಿ ಚಟಿಲಾ, ರೇಡಾ ಮಾತ್ರವಲ್ಲದೆ ಪಾಸ್ ಪೋರ್ಟ್ ಏಜೆಂಟ್, ಇತರ ಪ್ಯಾಲೆಸ್ಟೀನ್ ರನ್ನೂ ಸೇರಿಸಿಕೊಳ್ಳುತ್ತಾನೆ. ಈ ಯೋಜನೆಯ ಭಾಗವಾಗಿ ಸಿರಿಯಾದ ಅರಬ್ ಸೋದರ ವಲಸಿಗರನ್ನು ಹಿಂಸಿಸಲೂ ಹೇಸುವುದಿಲ್ಲ. ಈ ಯೋಜನೆಯ ಜಾರಿಯ ಎರಡನೆಯ ಭಾಗ ಕ್ರೈಮ್ ಥ್ರಿಲ್ಲರ್ ನಂತೆ ಓಡುತ್ತದೆ.

ಚಟಿಲಾ ಮತ್ತು ರೇಡಾ ಅವರ ಎರಡನೇಯ ಭಾಗದ ಅಪರಾಧಿ ಕೃತ್ಯಗಳ ನಂತರವೂ ಅವರನ್ನು ಇಂತಹ ಹತಾಶ ಕೃತ್ಯಗಳಿಗೆ ತಳ್ಳುವ ಅವರ ಬದುಕಿನ ದಾರುಣ ಸ್ಥಿತಿಯ ಬಗ್ಗೆ ಉಕ್ಕುವ ವಿಷಾದವೇ ಫಿಲಂ ನ ಸ್ಥಾಯೀ ಭಾವ. ಇತ್ತೀಚಿನ ಗಾಜಾ ನರಮೇಧ ಮತ್ತು ಎಲ್ಲ ದೇಶಗಳಲ್ಲೂ 'ಕಾನೂನುಬಾಹಿರ ನಿರಾಶ್ರಿತ ವಲಸಿಗರ' ಪಾಡು ಜನಜನಿತವಾಗಿರುವ ಹಿನ್ನೆಲೆಯಲ್ಲಿ ಈ ಫಿಲಂ ಅತ್ಯಂತ ಗಾಢವಾಗಿ ತಟ್ಟುತ್ತದೆ. ಹದಿಹರೆಯದ ಹುಡುಗ ಮಲಿಕ್ ನಿಗೆ ಸಹಾಯ ಮಾಡಬೇಕೋ ಬೇಡವೋ ಎಂಬ ಸಂದಿಗ್ಧತೆಯ ನಂತರ ಅವನನ್ನು ಕುಟುಂಬದ ಸದಸ್ಯನಂತೆ ಕಾಣುವ, ರೇಡಾ ನಿಗೆ ಎಷ್ಟು ಬಯ್ದರೂ ಅವನನ್ನು ಚಟಿಲಾ ಸಮಾಧಾನಿಸಿ ರಕ್ಷಿಸುವ ಕೆಲವೇ ದೃಶ್ಯಗಳನ್ನು ಬಿಟ್ಟರೆ, ತಾಯ್ನಾಡಿಗೆ ಮರಳಲಾಗದ, ಹೊಸ ನಾಡಿನಲ್ಲಿ ಬಾಳು ಕಟ್ಟಿಕೊಳ್ಳುವ ಪ್ರಯತ್ನ ಮತ್ತೆ ಮತ್ತೆ ವಿಫಲವಾಗುವ ದುಗುಡ ಫಿಲಂ ನುದ್ದಕ್ಕೂ ಕಾಡುತ್ತದೆ. ಎಲ್ಲರೂ, ಎಲ್ಲವೂ ಹೆಜ್ಜೆ ಹೆಜ್ಜೆಗೂ ಈ ನಿರಾಶ್ರಿತ ವಲಸಿಗ ಪ್ಯಾಲೆಸ್ಟೀನ್ ರ ಪ್ರಯತ್ನವನ್ನು ವಿಫಲಗೊಳಿಸಲು ಕಾದಿವೆ ಎನ್ನುವಂತಿದೆ.

ಸ್ವತಃ ಪ್ಯಾಲೆಸ್ಟೀನ್ ರಾದ ನಿರ್ದೇಶಕ, ಮಹದಿ ಫ್ಲೆಫೆಲ್ ತಾಯ್ನಾಡನ್ನು ಕಳೆದುಕೊಂಡು ಕಾಣದ ನಾಡಿನಲ್ಲಿ ಬದುಕು ಕಟ್ಟಿಕೊಳ್ಳುವ ಪ್ರಯತ್ನಿಸುತ್ತಿರುವ ಆದರೆ ಎಲ್ಲೂ ನೆಲೆ ಊರಲು ವಿಫಲವಾಗುತ್ತಿರುವ ಪ್ಯಾಲೆಸ್ಟೀನ್ ರ ಹತಾಶ ದಾರುಣ ಸ್ಥಿತಿಯನ್ನು ಮನ ಮುಟ್ಟುವ ಕಲಾತ್ಮಕ ರೀತಿಯಲ್ಲಿ ಸಶಕ್ತವಾಗಿ ಕಟ್ಟಿಕೊಟ್ಟಿದ್ದಾರೆ. ಚಟಿಲಾ ಆಗಿ ಮಹಮೂದ್ ಬಕ್ರಿ, ರೇಡಾ ಆಗಿ ಆರಂ ಸಬಾ, ಪಾಸ್ ಪೋರ್ಟ್ ಏಜೆಂಟ್ ಮತ್ತು ಖ್ಯಾತ ಪ್ಯಾಲೆಸ್ಟೀನ್ ಕವಿ ದರ್ವೇಶ್ ಕವನ ವಾಚಿಸಿ ತನ್ನದೇ ಕವನ ಎನ್ನುವ ನಕಲಿ ಕವಿ ತಮ್ಮ ಪಾತ್ರಗಳಿಗ ಜೀವ ತುಬಿದ್ದಾರೆ.

2. "ದಿ ಸ್ಟೋರಿ ಆಫ್ ಸುಲೈಮಾನ್"
(ಸುಲೈಮಾನ್ ನ ಕತೆ)

ಇದು ಪಶ್ಚಿಮ ಆಫ್ರಿಕಾದ ಮಾಜಿ ಫ್ರೆಂಚ್ ವಸಾಹತು ಗಿನಿ ಯಿಂದ ಫ್ರಾನ್ಸಿಗೆ ಬಂದು ಈಗ ಸೈಕಲ್ ಮೇಲೆ ಆಹಾರ ಡೆಲಿವರಿ ಮಾಡುವ ಆಪ್ ಕಾರ್ಮಿಕ ಸುಲೈಮಾನ್ ನ ಕತೆ. ಫಿಲಂ ನ ಬಹುಭಾಗ ನಾವು ಸುಲೈಮಾನ್ ಜತೆಗೆ ಪ್ಯಾರೀಸ್ ನ ಸೈಕಲಿನ ಮೇಲೆ ಮನೆಗಳಿಗೂ ರೆಸ್ಟೋರೆಂಟುಗಳ ನಡುವೆ ಉಸಿರುಗಟ್ಟಿಸುವ ವೇಗದಲ್ಲಿ ಸುತ್ತುತ್ತೇವೆ. ಸುಲೈಮಾನಿನ ಕಣ್ಣಿಂದ ಇಡೀ ಪ್ಯಾರೀಸ್ ಕಾಣುತ್ತೇವೆ. ಅವನಿಗೆ (ಹಾಗಾಗಿ ನಮಗೂ) ಪ್ಯಾರೀಸ್ ನ ಥಳಕು–ಬಳಕು, ಚಾರಿತ್ರಿಕ ಕಟ್ಟಡಗಳು ಕಾಣುವುದಿಲ್ಲ. ದಟ್ಟ ಟ್ರಾಫಿಕ್ ನಡುವೆ ಅಘಘಾತ ಆಗದಂತೆ ನುಗ್ಗಿಕೊಂಡು ವೇಗವಾಗಿ ಹೋಗಿ ದಿನಕ್ಕೆ ಗರಿಷ್ಠ ಆರ್ಡರುಗಳನ್ನು ಪೂರೈಸುವುದು ಒಂದೇ ಅವನ ಗುರಿ. ಅಷ್ಟು ಮಾತ್ರ ಅವನಿಗೂ ಹಾಗಾಗಿ ನಮಗೂ ಕಾಣುವುದು.

ನಸುಕಿನಲ್ಲಿ ಎದ್ದು, ಪ್ಯಾರೀಸ್ ನಗರದಾಚಿನ ಅಂಚಿನಲ್ಲಿರುವ "ಮನೆ ಇಲ್ಲದವರ ತುರ್ತು ಆಶ್ರಯ ತಾಣ"ಕ್ಕೆ ವಾಪಸು ಸೇರಿಕೊಳ್ಳಲು ಸೆಕೆಂಡುಗಳ ಮೊದಲು ರಾತ್ರಿ ಕೊನೆಯ ಬಸ್ಸು ಹಿಡಿಯುವವರೆಗೆ ಕೆಲಸ ಮಾಡುವ ಸುಲೈಮಾನ್ 'ಕಾನೂನು ಬಾಹಿರ ವಲಸಿಗ'. ಪಶ್ಚಿಮ ಆಫ್ರಿಕಾದ ಗಿನಿಯಿಂದ ನಡಿಗೆ, ಸಾಗಾಣಿಕೆ ಲಾರಿ, ಬೋಟ್ ಇತ್ಯಾದಿಗಳಲ್ಲಿ ಪಡಬಾರದ ಪಾಡು ಪಟ್ಟು ಬಂದಿರುವ ಆತನಿಗೆ ಕೊವಿದ್ ಕಾಲದಲ್ಲಿ ವಿಶೇಷವಾಗಿ ಅನುಮತಿಸಲಾದ ಆಹಾರ ಡೆಲಿವರಿ ಆಪ್ ಕಾರ್ಮಿಕನ ಕೆಲಸ ಸಿಕ್ಕಿದೆ. ಕಾನೂನುಬದ್ಧ ವಲಸಿಗ' ನಿಂದ ಪಡೆದ ಸೈಕಲ್ ಮತ್ತು ಆಪ್ ಗೆ ರಿಜಿಸ್ಟರ್ ಮಾಡಿರುವ ಕಾರ್ಮಿಕನ ಬ್ಯಾಜ್ 'ಎರಡಕ್ಕೂ ಅವನು

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**